ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಶನಿವಾರ 2026

46

ಸಂಪುಟ: 46 | ಸಂಚಿಕೆ: 282 | ಪುಟಗಳು: 12+IV

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, *website: www.mysurumithra.com*





ಶುಭಕೋರುವವರು: ಸಿದ್ಧಲಿಂಗಪುರ ಜಿಲ್ಲಾ ಪಂಚಾಯತ್
ಕ್ಷೇತ್ರ ಮೈಸೂರು ತಾಲ್ಲೂಕು
ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡರವರಿಗೆ
ಜನ್ಮ ದಿನದ ಶುಭಾಶಯಗಳು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 282 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸುನೇತ್ರ ಪವಾರ್ ಮಹಾರಾಷ್ಟ್ರದ ನೂತನ ಉಪ ಮುಖ್ಯಮಂತ್ರಿ

ನಾಳೆ ಪ್ರಮಾಣ ವಚನ ಸ್ವೀಕಾರ

ಮುಂಬೈ, ಜ.30– ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಅವರ ನಿಧನದ ನಂತರ ತೆರವಾಗಿರುವ ಉಪಮುಖ್ಯಮಂತ್ರಿ ಹುದ್ದೆಗೆ ಪವಾರ್ ಅವರ ಪತ್ನಿ ಸುನೇತ್ರ ಪವಾರ್ ಅವರನ್ನು ಆಯ್ಕೆ ಮಾಡಲಾಗಿದೆ. ನಾಳೆಯೇ ಸುನೇತ್ರ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಎನ್‌ಸಿಪಿ ಸಚಿವ ಛಗನ್ ಭುಜಬಲ್ ಸಿಎಂ ದೇವೇಂದ್ರ ಫಡ್ನವೀಸ್ ಭೇಟಿ ಬಳಿಕ ತಿಳಿಸಿದ್ದಾರೆ.



ಬೆಂಗಳೂರಲಿ ಐಟಿ ದಾಳಿ ವೇಳೆಯೇ ದೇಶದ ಶ್ರೀಮಂತ ಉದ್ಯಮಿಗಳಲ್ಲಿ ಒಬ್ಬರಾಗಿದ್ದ ಕಾನ್ಫಿಡೆಂಟ್ ಗ್ರೂಪ್‌ನ

ಸಿ.ಜೆ.ರಾಯ್ ಆತ್ಮಹತ್ಯೆ


ದಾಖಲೆ ತರುವುದಾಗಿ ಹೇಳಿ ಮತ್ತೊಂದು ಕೊಠಡಿಯಲ್ಲಿ ಎದೆಗೆ ಗುಂಡು ಹಾರಿಸಿಕೊಂಡರು

ಬೆಂಗಳೂರು, ಜ.30– ಕೇರಳ ಮೂಲದ ಖ್ಯಾತ ಉದ್ಯಮಿ, ಕಾನ್ಫಿಡೆಂಟ್ ಗ್ರೂಪ್ ಸಿಇಓ ಸಿ.ಜೆ. ರಾಯ್ ಅವರು ಶುಕ್ರವಾರ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ವಿಚಾರಣೆ ವೇಳೆಯೇ ಬೆಂಗಳೂರಿನ ಹೊಸೂರು ರಸ್ತೆಯ ಲ್ಯಾಂಗ್‌ಫರ್ಡ್ ಟೌನ್‌ನಲ್ಲಿರುವ ಕಾನ್ಫಿಡೆಂಟ್ ಕಚೇರಿಯಲ್ಲೇ ಪರವಾನಿಗೆ ಪಡೆದ ತಮ್ಮ ಗನ್‌ನಿಂದಲೇ ಎದೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಸಿ.ಜೆ. ರಾಯ್

ಸಿ.ಜೆ.ರಾಯ್ ಅವರ ಕಾನ್ಫಿಡೆಂಟ್ ಗ್ರೂಪ್ ರಿಯಲ್ ಎಸ್ಟೇಟ್ ಕಂಪನಿ ವ್ಯವಹಾರ ಸಂಬಂಧ ಪದೇ ಪದೆ ಐಟಿ ಇಲಾಖೆ ಅಧಿಕಾರಿಗಳು ದಾಳಿ ನಡೆಸುತ್ತಲೇ ಇದ್ದರು. ಈ ದಾಳಿಗೆ ಹೆದರಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗುತ್ತಿದೆ. ಇಂದು ಬೆಳಗ್ಗೆ ಕೂಡ ಎರಡು ಇನ್ನೋವಾ ಕಾರುಗಳಲ್ಲಿ 8 ಜನ ಐಟಿ ಅಧಿಕಾರಿಗಳ ತಂಡ ಇವರ ಕಚೇರಿಗೆ ಬಂದಿತ್ತು. ಮಧ್ಯಾಹ್ನ ಕಚೇರಿಗೆ ಬಂದಿದ್ದ ಉದ್ಯಮಿ ಸಿ.ಜೆ.ರಾಯ್, 1 ಗಂಟೆ ಐಟಿ ವಿಚಾರಣೆ ಎದುರಿಸಿದ್ದಾರೆ. ಅಧಿಕಾರಿಗಳಿಗೆ ಕೆಲ ದಾಖಲೆ ಸಹ ಕೊಟ್ಟಿದ್ದಾರೆ. ಮತ್ತಷ್ಟು ದಾಖಲೆ ತರಲು ಮತ್ತೊಂದು ರೂಮ್‌ಗೆ ಹೋಗಿದ್ದಾರೆ. ಈ ವೇಳೆ ಪಿಸ್ತೂಲ್‌ನಿಂದ ಎದೆಗೆ ಗುಂಡು ಹಾರಿಸಿಕೊಂಡಿದ್ದಾರೆ. ಒಂದು ಸುತ್ತು ಗುಂಡು ಹಾರಿಸಿಕೊಳ್ಳುತ್ತಿದ್ದಂತೆ ಒಳ ನುಗ್ಗಿ, ಗನ್ ಕಿತ್ತುಕೊಂಡಿರುವ ಐಟಿ ಅಧಿಕಾರಿಗಳು, ಅವರ ರಕ್ಷಣೆಗೆ ಪ್ರಯತ್ನಿಸಿದ್ದಾರೆ. ರಾಯ್ ಅವರನ್ನು ಕೂಡಲೇ ಹೆಚ್ ಎಸ್‌ಆರ್ ಲೇಔಟ್ ನಾರಾಯಣ ಆಸ್ಪತ್ರೆಗೆ ಸಾಗಿಸಿದ್ದಾರೆ. ಆದರೆ ಅಷ್ಟರಲ್ಲಾಗಲೇ ಅವರು



ಸಾವಿಗೀಡಾಗಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಸಿ.ಜೆ.ರಾಯ್ ಅವರ ಕುಟುಂಬ ದುಬೈನಲ್ಲಿದ್ದು, ವಿಷಯ ತಿಳಿದ ಬಳಿಕ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದಾರೆ. ಅವರ ಪತ್ನಿ ಲಿನಿ ರಾಯ್ ವ್ಯವಹಾರದಲ್ಲಿ ಸದಾ ಅವರಿಗೆ ಸಾಥ್ ನೀಡುತ್ತಾ ಬಂದಿದ್ದರು. ರಾಯ್ ಅವರು ಪುತ್ರ ರೋಹಿತ್ ರಾಯ್, ಪುತ್ರಿ ರಿಯಾ ರಾಯ್ ಹಾಗೂ ಅಪಾರ ಬಂಧುಗಳು, ಸ್ನೇಹಿತರು ಹಾಗೂ ಸಿಬ್ಬಂದಿಯನ್ನು ಅಗಲಿದ್ದಾರೆ. ಘಟನೆ ಬೆನ್ನಲ್ಲೇ ಹಲವು ಅನುಮಾನಗಳು ಮೂಡಿವೆ. ಸಹಜವಾಗಿ ಐಟಿ ■10ನೇ ಪುಟಕ್ಕೆ

ಮೂರು ದಿನಗಳಿಂದ ಶೋಧ ನಡೆಯುತ್ತಿದೆ...

ಬೆಂಗಳೂರು: ಖ್ಯಾತ ರಿಯಲ್ ಎಸ್ಟೇಟ್ ಉದ್ಯಮಿ, ಕಾನ್ಫಿಡೆಂಟ್ ಗ್ರೂಪ್ ಅಧ್ಯಕ್ಷ ಮತ್ತು ಸಂಸ್ಥಾಪಕ ಸಿಜೆ ರಾಯ್ ಅವರು ಶುಕ್ರವಾರ ತಮ್ಮ ಕಚೇರಿಯಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.



ಸೀಮಂತ್‌ಕುಮಾರ್ ಸಿಂಗ್

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಳೆದ ಮೂರು ದಿನಗಳಿಂದ ಹೊಸೂರು ರಸ್ತೆಯ ಲ್ಯಾಂಗ್‌ಫರ್ಡ್ ಟೌನ್‌ನಲ್ಲಿರುವ ಕಾನ್ಫಿಡೆಂಟ್ ಗ್ರೂಪ್ ಕಂಪನಿಯಲ್ಲಿ ಶೋಧ ನಡೆಸುತ್ತಿದ್ದರು. ಈ ವೇಳೆ ರಾಯ್ ಅವರು ತಮ್ಮ ಪರವಾನಗಿ ಪಡೆದ ಬಂದೂಕಿನಿಂದ ಗುಂಡು ಹಾರಿಸಿಕೊಂಡಿದ್ದಾರೆ ಎಂದು ಪೊಲೀಸ್ ಆಯುಕ್ತರು ಹೇಳಿದ್ದಾರೆ.

ಗುಂಡೇಟಿನ ಸದ್ದು ಕೇಳಿದ ಕೂಡಲೇ ಸಿಬ್ಬಂದಿ ಅವರ ಕೋಣೆಗೆ ಧಾವಿಸಿ ನೋಡಿದಾಗ ಅವರು ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿದೆ. ಅವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ರಾಯ್ ಅವರ ಕಚೇರಿಯಲ್ಲಿ ಐಟಿ ಶೋಧ ಕಾರ್ಯ ಸುಮಾರು ಎರಡು ತಿಂಗಳ ಹಿಂದೆ ಪ್ರಾರಂಭವಾಗಿತ್ತು ಎಂದು ಐಟಿ ಮೂಲಗಳು ತಿಳಿಸಿವೆ. ಇಂದು, ಅಶೋಕ ನಗರ ■10ನೇ ಪುಟಕ್ಕೆ

ಕೆಸಿ ನಗರ ಕೆರೆ ಒತ್ತುವರಿ ಸಂಬಂಧ ಅಧಿಕಾರಿಗಳು ಏನೂ ಕ್ರಮ ಕೈಗೊಂಡಿಲ್ಲ

- ವಿಧಾನಸಭೆಯಲ್ಲಿ ಶಾಸಕ ಶ್ರೀವತ್ಸ ಪ್ರಸ್ತಾಪ
- ಕಾನೂನು ಸುವ್ಯವಸ್ಥೆ ಕುಸಿದಿರುವುದಕ್ಕೆ ಸಾಕ್ಷಿ

ಮೈಸೂರು, ಜ.30– ಮೈಸೂರು ಕೆಸಿ ನಗರದ ಕೆರೆಯೊಂದರ ಸುತ್ತಲೂ ದಿಢೀರ್ ಕಾಂಪೌಂಡ್ ನಿರ್ಮಿಸಿರುವ ಸಂಬಂಧ ಕ್ರಮ ವಹಿಸುವಲ್ಲಿ ಅಧಿಕಾರಿಗಳ ವಿಳಂಬ ಧೋರಣೆ ಬಗ್ಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸದನದಲ್ಲಿ ಸರ್ಕಾರದ ಗಮನ ಸೆಳೆದಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಮೈಸೂರಿನ ಕೆ.ಸಿ.ನಗರದಲ್ಲಿ ಕೆರೆ ಒತ್ತುವರಿ ಆಗಿದೆ. ಆದರೆ ಅಧಿಕಾರಿಗಳು ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಹಲವರು ಮಾತನಾಡಿದ್ದಾರೆ. ಬಳ್ಳಾರಿ ಗಲಾಟೆಗೆ ಕೇಂದ್ರ ಸಚಿವರಾದ ಅಮಿತ್ ಶಾ ಹಾಗೂ ವಿ.ಸೋಮಣ್ಣ ಕಾರಣ, ಸೋಮಣ್ಣ



ಬಳ್ಳಾರಿಗೆ ಹೋಗಿದ್ದರಿಂದ ಅಲ್ಲಿ ಕೊಲೆ ನಡೆಯಿತು ಎಂದು ಮೈಸೂರಿನ ಕಾಂಗ್ರೆಸ್ ವಕ್ತಾರರು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ. ಈ ಬಗ್ಗೆ ನಾವು ದೂರು ನೀಡಿ 15 ದಿನಗಳಾದರೂ ಆ ಕಾಂಗ್ರೆಸ್ ವಕ್ತಾರರ ■10ನೇ ಪುಟಕ್ಕೆ

ಮರಕ್ಕೆ ಬೇರು ಎಷ್ಟು ಮುಖ್ಯವೋ... ಮನುಷ್ಯನಿಗೆ ನಂಬಿಕೆ ಅಷ್ಟೇ ಮುಖ್ಯ...!

ಬೆಂಗಳೂರು, ಜ.30(ಕೆಎಂಶಿ)– ಮರಕ್ಕೆ ಬೇರು ಎಷ್ಟು ಮುಖ್ಯವೋ, ಮನುಷ್ಯನಿಗೆ ನಂಬಿಕೆಯೂ ಅಷ್ಟೇ ಮುಖ್ಯ ಎನ್ನುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರ ಹಂಚಿಕೆ ವಿಳಂಬಕ್ಕೆ ಪರೋಕ್ಷವಾಗಿ ಮತ್ತೆ ಬೇಸರ ವ್ಯಕ್ತಪಡಿಸಿದ್ದಾರೆ.



ಸಾರ್ವಜನಿಕ ವೇದಿಕೆಗಳಲ್ಲಿ ಒಂದಲ್ಲಾ ಒಂದು ರೀತಿ ನಂಬಿಕೆ ಮತ್ತು ಭರವಸೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೆನಪಿಸುತ್ತಿದ್ದಾರೆ. ಮನುಷ್ಯತ್ವ ಮೋಕ್ಷಕ್ಕೆ ಮೂಲ, ಮಾನವೀಯತೆಯನ್ನು ಎಂದಿಗೂ ಮರೆಯಬಾರದು. ತರಳಬಾಳು ಹುಣ್ಣಿಮೆ ಮಹೋತ್ಸವದಿಂದ ಎಲ್ಲಾ ಸಮಾಜಕ್ಕೂ ಬೆಳಕು, ಭರವಸೆ, ಬದಲಾವಣೆ ಸಿಗಬೇಕು. ನನಗೆ ಪೂರ್ವನಿಯೋಜಿತ ಕಾರ್ಯಕ್ರಮಗಳು ಇದ್ದರೂ ತರಳಬಾಳು ಹುಣ್ಣಿಮೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಧರ್ಮ ಯಾವುದಾದರೂ ತತ್ವವೊಂದೇ. ನಾಮ ನೂರಾದರೂ ದೈವವೊಂದೇ. ಪೂಜೆ ಯಾವುದಾದರೂ ಭಕ್ತಿಯೊಂದೇ. ಕರ್ಮ ಹಲವಾದರೂ ■10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ... ಯಾವುದಾದರೂ ದೆವ್ವದ ಸಿನಿಮಾ ನೋಡೋಣ್ವಾ?

ಗಂಡ : ಹೂ ಕಣೆ... ಹಾಗಾದ್ರೆ ನಮ್ಮ ಮದುವೆ ಸಿಡಿ ತಗೊಂಡ್ ಬಾ...

ಮೈಸೂರು ಮಿತ್ರ

ಶನಿವಾರ, ಜನವರಿ 31, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಜೊತೆಯಾಗಿರಲು ಗಟ್ಟಿಯಾದ ಭರವಸೆ ಬೇಕು.
ದೂರಾಗಲು ಚಿಕ್ಕದಾದ ಸಂಶಯ ಸಾಕು.

ವೇದ ಸುಳ್ಳಾದರೂ { ಆಪತ್ತಿಗಾದವನೇ
ಗಾದೆ ಸುಳ್ಳಾಗದು { ನಿಜವಾದ ಗೆಳೆಯ.

ನಿಮ್ಮ ಪತ್ರಗಳು

ಜಿಎಸ್‌ಟಿ ಇಳಿಕೆ ಲಾಭ ಗ್ರಾಹಕರಿಗೆ ನೀಡದ ಕಂಪನಿಗಳು

ಮಾನ್ಯರೆ,

ಕಳೆದ ವರ್ಷ ಸೆಪ್ಟೆಂಬರ್ 22ರಿಂದಲೇ ಕೇಂದ್ರ ಸರ್ಕಾರ ಹಲವು ವಸ್ತುಗಳ ಮೇಲೆ ಜಿಎಸ್‌ಟಿ ದರಗಳನ್ನು ಇಳಿಸಿದೆ. ಆದರೆ ದರ ಇಳಿಕೆಯ ಲಾಭವನ್ನು ಗ್ರಾಹಕರಿಗೆ ನೀಡದೆ ಕಂಪನಿಗಳು ವಂಚಿಸುತ್ತಿವೆ. ಉದಾ: ಖ್ಯಾತ ಬಿಸ್ಕೆಟ್ ಕಂಪನಿಯೊಂದು ತನ್ನ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಇಳಿಕೆ ಬಗ್ಗೆ ಇದೀಗ ಪತ್ರಿಕೆಗಳಲ್ಲಿ ಜಾಹೀರಾತು ನೀಡುತ್ತಿದೆ. 5 ರೂ. ಪೊಟ್ಟಣದಲ್ಲಿ ಹಿಂದೆ ಇದ್ದ 30.7 ಗ್ರಾಂಗೆ ಬದಲಾಗಿ 34.5 ಗ್ರಾಂ, 10 ರೂ. ಪೊಟ್ಟಣಗಳಲ್ಲಿ ಹಿಂದಿನ 44 ಗ್ರಾಂ ಬದಲಿಗೆ 73.8 ಗ್ರಾಂ, 60 ಗ್ರಾಂ ಬದಲಿಗೆ 66.6 ಗ್ರಾಂ ಕೊಡುತ್ತಿರುವುದಾಗಿ ಹೇಳಿದೆ. ಹೀಗೆ ಜಿಎಸ್‌ಟಿ ಕಡಿತದಿಂದಾಗಿ ನಿಮಗೆ ಬಿಸ್ಕೆಟುಗಳು ಹೆಚ್ಚು ಸಿಗುತ್ತಿವೆಯೇ? ಎಂದು ಜಾಹೀರಾತು ನೀಡುತ್ತಿದೆ. ಇದು ಗ್ರಾಹಕರನ್ನು ಬೇಸ್ತು ಬೀಳಿಸುವ ಕೆಲಸ. ಏಕೆಂದರೆ ನಿಜವಾಗಿ ಅವರು ಜಿಎಸ್‌ಟಿ ಇಳಿಕೆ ಲಾಭವನ್ನು ಗ್ರಾಹಕರಿಗೆ ನೀಡುವುದಿದ್ದರೆ 5 ರೂ. ಪೊಟ್ಟಣ ರೂ. ನಾಲ್ಕಕ್ಕೆ, ಹತ್ತು ರೂ ಪೊಟ್ಟಣ 8ಕ್ಕೆ ಇಳಿಯಬೇಕಿತ್ತು. ಅಂಗಡಿಗಳಲ್ಲಿ ಸಾರ್ವಜನಿಕರಿಗೆ ಒಂದು ರೂ ಎರಡು ರೂ ಚಿಲ್ಲರೆ ಕೊಡುವುದು ಸಮಸ್ಯೆಯೇನಲ್ಲ.

ಇದೊಂದು ಸಣ್ಣ ಉದಾಹರಣೆ ಅಷ್ಟೇ. ಅನೇಕ ದೊಡ್ಡ ದೊಡ್ಡ ಕಂಪನಿ, ಸಂಸ್ಥೆಗಳು ಕೂಡ ಜಿಎಸ್‌ಟಿ ಇಳಿಕೆ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸದೆ ವಂಚಿಸುತ್ತಿವೆ. ರಾಜ್ಯದ ಕೆಎಂಎಫ್ ಕೂಡ ಜಿಎಸ್‌ಟಿ ಇಳಿಕೆ ಕಾರಣ ಮೊಸರಿನ ಜಿಎಸ್‌ಟಿ ಶೇ.9 ರಿಂದ 5ಗೆ ಇಳಿಕೆಯಾಗಿದೆ. ಇದರಿಂದ ಮೊಸರಿನ ಲೀಟರ್ ಬೆಲೆಯಲ್ಲಿ 4 ರೂ ಕಡಿತ ಮಾಡುವುದಾಗಿ ಕೆಎಂಎಫ್ ವ್ಯವಸ್ಥಾಪಕರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು. ಆದರೆ ಮಾರನೇ ದಿನ ಉಲ್ಟಾ ಹೊಡೆದಿದ್ದರು. ಹಾಲಿ ಇರುವುದೇ ಶೇ.5 ಜಿಎಸ್‌ಟಿ ಎಂದು ಸುಳ್ಳು ಹೇಳಿದ್ದರು. ಇವು ಒಂದೆರಡು ಉದಾಹರಣೆ ಮಾತ್ರ. ಭಾರತದಲ್ಲಿ ಗ್ರಾಹಕರ ಪರವಾಗಿ ಹೋರಾಡುವವರು ಯಾರೂ ಇಲ್ಲ. ಅದಕ್ಕಿಂತ ಮೇಲಾಗಿ ಗ್ರಾಹಕರಿಗೆ ಜಾಗೃತಿಯೇ ಇಲ್ಲ. ಜಾಗೃತಿ ಇದ್ದರೂ ನಮಗೇಕೆ ಈ ಉಸಾಬರಿ ಎಂಬ ಉಡಾಫೆ. ಇದು ಇಡೀ ಭಾರತದ ಗ್ರಾಹಕರ ವ್ಯತೆಯ ಕತೆ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಎಂಡಿಎ ಆಡಳಿತ ಸಂಪೂರ್ಣ ನಿಷ್ಕ್ರಿಯ

ಮಾನ್ಯರೆ,


ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ. ಖಾಯಂ ನೌಕರರು ಹೊರತುಪಡಿಸಿ ಗುತ್ತಿಗೆ ಆಧಾರದ ಕೆಲಸಗಾರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಕ್ರಯಪತ್ರ (ಟೈಟಲ್ ಡೀಡ್), ಹಳೆಯ ದಾಖಲೆಗಳ ನಕಲುಗಳು, ಹೊಸ ಖಾಸಗಿ ಬಡಾವಣೆಗಳಿಗೆ ಅನ್ಯಕ್ರಾಂತದಂತಹ ಇನ್ನೂ ಹತ್ತು ಹಲವಾರು ಕೆಲಸಗಳು ಆಗದೆ ಪ್ರತಿನಿತ್ಯ ಸಾರ್ವಜನಿಕರು ತೀರಾ ತೊಂದರೆ ಅನುಭವಿಸುತ್ತಿದ್ದಾರೆ.

ಸಕಾಲದಲ್ಲಿ ಕಾರ್ಯದರ್ಶಿ ಮತ್ತು ಆಯುಕ್ತರ ಕಚೇರಿಗಳಿಂದ ನಿರ್ದೇಶನ ಲಭ್ಯವಾಗುತ್ತಿಲ್ಲ. ಜನಪ್ರತಿನಿಧಿಗಳು ಸಹ ಸಾರ್ವಜನಿಕರಿಗೆ ಪ್ರಾಧಿಕಾರದಲ್ಲಿನ ತೊಂದರೆ ನಿವಾರಿಸಲು ಸಹಕರಿಸುತ್ತಿಲ್ಲ. ಪ್ರಾಧಿಕಾರದ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಯವರು ಪ್ರಾಧಿಕಾರದಲ್ಲಿನ ಆಡಳಿತದ ಬಗ್ಗೆ ಕ್ರಮ ವಹಿಸುತ್ತಿಲ್ಲ. ಈ ಕೂಡಲೇ ಅದಾಲತ್ ನಡೆಸಿ ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸಲಿ. ಉಸ್ತುವಾರಿ ಸಚಿವರು ಮೈಸೂರು ಪ್ರಾಧಿಕಾರವನ್ನೇ ಮರೆತಿರುವಂತಿದೆ. ಇಲ್ಲಿನ ಆಯುಕ್ತರು ಹೊಸ ಯೋಜನೆಗಳಿಗೆ ಆಸಕ್ತಿ ವಹಿಸುವ ಬದಲು ಆಡಳಿತವನ್ನು ಸುಸೂತ್ರವಾಗಿ ಮುನ್ನಡೆಸಲಿ. ಇಲ್ಲವಾದಲ್ಲಿ ಸಾರ್ವಜನಿಕರೇ ಸಂಘಟಿತರಾಗಿ ಪ್ರತಿಭಟಿಸುವುದು ಅನಿವಾರ್ಯ.

– ಎಂ.ಎಸ್. ಶಾಂತಾರಾಂ, ಮೈಸೂರು.

ಅನಾಹುತಕ್ಕೆ ಮುನ್ನ ಕ್ರಮ ಕೈಗೊಳ್ಳಿ



ಮಾನ್ಯರೆ,

ಮೈಸೂರು ಮಹದೇಶ್ವರ ಬಡಾವಣೆ (ವಿಜಯನಗರ ವಾಟರ್ ಟ್ಯಾಂಕ್ ಎದುರು)ಯ ಮನೆಯೊಂದರ ಮುಂಭಾಗ ಅದೂ ಪ್ರತಿನಿತ್ಯ ಮನೆಯ ಕಾಂಪೌಂಡ್ ಹೊರಗೆ ಫುಟ್‌ಪಾತ್‌ನಲ್ಲಿ ಈ ಭಯಾನಕ ನಾಯಿಯನ್ನು ಸರಪಳಿಯಿಂದ ಕಟ್ಟಿ ಹಾಕಲಾಗುತ್ತದೆ. ಈ ರಸ್ತೆ ಕಿರಿದಾಗಿದೆ. ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳು ಹೆಚ್ಚಾಗಿ ಸಂಚರಿಸುತ್ತವೆ. ಜೊತೆಗೆ ಸ್ಕೂಲ್–ಕಾಲೇಜು ವಿದ್ಯಾರ್ಥಿಗಳು ದಿನವಿಡೀ ಓಡಾಡುತ್ತಾರೆ. ಅಕಸ್ಮಾತ್ ಪಕ್ಕಕ್ಕೆ ಮೈಮರೆತು ಸರಿದರೆ ಅವರ ಕಥೆ ಮುಗಿಯಿತು. ಮನೆ ಮಾಲೀಕರಿಗೆ ಇದರ ಗಂಭೀರತೆ ಅರಿವಿಲ್ಲ ಎಂದು ಕಾಣುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

– ನಾಗರಾಜು, ವಿಜಯನಗರ 2ನೇ ಹಂತ, ಮೈಸೂರು.

ಶಾಂತಿ ಸೌಹಾರ್ದತೆ ಸಭೆಗಳು ಹೆಚ್ಚು ನಡೆಯಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಜಾತಿ ಸಂಘರ್ಷ, ಧರ್ಮದ ಸಂಘರ್ಷ, ಜನಾಂಗೀಯ ಸಂಘರ್ಷ... ಈ ರೀತಿಯ ಕೋಮು ಸಂಘರ್ಷಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ಸರ್ವ ಜನಾಂಗದ ಶಾಂತಿಯ ತೋಟ' ಈ ನಮ್ಮ ನಾಡಿಗೆ ಕೆಲವು ಸಂಘರ್ಷಗಳಿಂದ ಕಪ್ಪು ಚುಕ್ಕೆ ಬಿದ್ದಂತಾಗಿದೆ. ಇಂಥ ಘಟನೆಗಳನ್ನು ಹತ್ತಿಕ್ಕಲು ಪೊಲೀಸರು ಶ್ರಮಿಸಿದರೂ ನಡೆಯುತ್ತಲೇ ಇರುತ್ತವೆ. ಇಂತಹ ಕೋಮು ಸಂಘರ್ಷವನ್ನು ಹೋಗಲಾಡಿಸಲು ಸಾಮಾಜಿಕ ಸಂಘಟನೆ ಹೋರಾಟಗಾರರು, ಪ್ರಗತಿಪರರು, ವಿದ್ಯಾವಂತರೂ, ಸ್ವಯಂ ಪ್ರೇರಿತ ಬುದ್ಧಿಜೀವಿಗಳು ಹಾಗೂ ಬುದ್ಧಿಜೀವಿಗಳು ನಗರಗಳ ಕೇಂದ್ರ ಭಾಗಗಳಲ್ಲಿ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚು ಶಾಂತಿ ಸೌಹಾರ್ದ ಸಭೆ ಹಾಗೂ ಸಮ್ಮೇಳನಗಳನ್ನು ನಡೆಸಿ ಶಾಂತಿ ಸೌಹಾರ್ದತೆಯ ಸಂದೇಶವನ್ನು ಸಾರುವ ಮೂಲಕ ಜನರ ಮನದಲ್ಲಿ ಶಾಂತಿಯ ಬೆಳಕನ್ನು ಹರಿಸುವ ಮೂಲಕ ಪರಿವರ್ತಿಸಲಿ.

–ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಜ್ಞಾನದೇಗುಲಗಳೀಗ ಭೂತಬಂಗಲೆಗಳು!







ಹೆಸರಾಂತ ಹಾಗೂ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಪದವಿಗಳನ್ನು ಪಡೆದವರಿಗೂ ತಾನು ಪ್ರೈಮರಿ ಶಾಲೆಗಳಲ್ಲಿ ಕಳೆದ ಹಾಗೂ ಕಲಿತ ದಿನಗಳನ್ನು ಎಂದಿಗೂ ಮರೆಯುವುದಿಲ್ಲ, ನೆನಪುಗಳು ಮಣ್ಣಿಗೆ ಹೋಗುವವರೆಗೂ ಕಾಡುತ್ತಿರುತ್ತವೆ.

ತಿದ್ದಿತೀಡಿ ಅಆಇಈ.... ಅಕ್ಷರಗಳನ್ನು ಕಲಿಸಿದ ಗುರುಗಳನ್ನಂತು ಮರೆಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಬಾಲ್ಯದ ಗೆಳೆಯರೊಟ್ಟಿಗೆ ಕುಳಿತು ಓದಿದ ಶಾಲಾ ಕಟ್ಟಡ ಬರೆ ಕಲ್ಲು ಇಟ್ಟಿಗೆಗಳ ಸೌಧವಲ್ಲ, ಅದೊಂದು ದಿವ್ಯ ಜ್ಞಾನದೇಗುಲ, ದೇವರಗುಡಿಗಿಂತಲೂ ದೊಡ್ಡದು, ಮುಂದೆ ಗರುಡಗಂಬ ಇಲ್ಲದಿರಬಹುದು ಆದರೆ ಬಾಗಿಲಲ್ಲಿ ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬನ್ನಿ ಎಂದು ಬರೆದಿರುವ ನುಡಿ ಅದೆಷ್ಟೊಂದು ಭಾವನೆಯನ್ನು ಮೂಡಿಸುತ್ತದೆಯಲ್ಲವೇ?

ಪ್ರೌಢಶಾಲೆಯನ್ನು ಬಿಟ್ಟು ನಲವತ್ತೈದು ವರ್ಷಗಳೇ ಕಳೆಯುತ್ತಾ ಬಂದಿದೆ. ನಾನು ಊರಿಗೆ ಹೋಗುವುದು ತೀರಾ ವಿರಳ, ಹೋಗುವ ಪ್ರತೀ ಬಾರಿಯೂ ನಾನು ಕಲಿತ ಮೂರೂ ಶಾಲಾ ಕಟ್ಟಡಗಳನ್ನು ನೋಡಬೇಕೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಿರುತ್ತೇನೆ.

ಆದರೆ ಮನೆಯ ಎದುರಿಗೇ ಇರುವ ಎರಡು ಪ್ರೈಮರಿ ಶಾಲೆಯ ಕಟ್ಟಡಗಳನ್ನು ಒಳಗೆ ಹೋಗಿ ನೋಡದೆ ಎತ್ತರದ ಕಾಂಪೌಂಡ್ ಹಿಂದೆ ಕಾಣುವ ಅವುಗಳ ತಲೆಗಳನ್ನಷ್ಟೆ ನೋಡುವುದಾಗಿತ್ತು, ಮತ್ತೊಂದು ಪ್ರೌಢಶಾಲಾ ಕಟ್ಟಡ ದೂರದ ಕೊಪ್ಪಲಿನಲ್ಲಿ ಊರೊಳಗೆ ಇರುವುದರಿಂದ ಅದನ್ನು ಒಮ್ಮೆಯೂ ನೋಡೇ ಇರಲಿಲ್ಲ.

ನಾನು ಈ ಮಟ್ಟಕ್ಕೆ ಬೆಳೆದು, ಬದುಕಿನಲ್ಲಿ ಏನೆಲ್ಲಾ ಬೇಕು ಅವುಗಳನ್ನೆಲ್ಲಾ ಗಳಿಸಿ, ಅನುಭವಿಸಿ ನೆಮ್ಮದಿಯ ವಿಶ್ರಾಂತ ಜೀವನಕ್ಕೆ ಬಂದು ನಿಲ್ಲುವವರೆಗೂ ಭದ್ರವಾದ ತಳಪಾಯ ಹಾಕಿ ಕೊಟ್ಟು ಅಕ್ಷರಗಳನ್ನು ನನ್ನದೆಗೆ ಬಿತ್ತಿ ಮೆದುಳಿಗೆ ಜ್ಞಾನ ತುಂಬಿ ಜೀವನದ ಪಾಠ ಕಲಿಸಿದ ಮೂರೂ ಜ್ಞಾನ ದೇಗುಲಗಳ ಗರ್ಭಗುಡಿಯ ಒಳಹೊಕ್ಕು ನೋಡುವ ಭಾಗ್ಯ ಕೆಲವು ದಿನಗಳ ಹಿಂದೆ ನನ್ನದಾಯಿತು.

ಮೊದಲು ಮಂಗಳೂರು ಹೆಂಚಿನ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ಬಳಿ ಬಂದೆ, ಕಟ್ಟಡದ ಎದುರು ನಿಂತು ನೋಡುತ್ತಿದ್ದಂತೆ ನನ್ನ ಎದೆಗೆ ಜೆಸಿಬಿ ಯಂತ್ರದಿಂದ ಬಗೆದಂತಾಯಿತು, ಕಟ್ಟಡದ ಪರಿಸ್ಥಿತಿಯನ್ನು ನೋಡಿ ದುಃಖ ಉಮ್ಮಳಿಸಿ ಬಂತು. ನೂರಾರು ವರ್ಷ ಬಾಳಿದ ಕಟ್ಟಡವು ನಿರ್ವಹಣೆ ಇಲ್ಲದೆ ತನ್ನ ಚಟುವಟಿಕೆಯನ್ನು ಕಳೆದುಕೊಂಡು ಸತ್ತು ಮಲಗಿದೆ.

ಅಪ್ಪನ ಜೊತೆ ಮೊದಲ ಬಾರಿ ಶಾಲೆಯ ಮೆಟ್ಟಿಲು ಏರಿದ ದಿನ ಇನ್ನೂ ನೆನಪಿದೆ ಸುಂದರವಾದ ಕಟ್ಟಡ, ಮಧ್ಯದ ಕೊಠಡಿಯಲ್ಲಿ ಮುಖ್ಯ ಶಿಕ್ಷಕರಾದ ರಂಗಯ್ಯನವರು ಕುಳಿತುಕೊಳ್ಳುತ್ತಿದ್ದರು, ಹುಟ್ಟಿದ ಪ್ರಮಾಣ ಪತ್ರ ಇಲ್ಲದಿದ್ದ ಕಾರಣ, ಜಾತಕ ಬರೆಸಿಕೊಳ್ಳುವುದಾಗಿ ಹೇಳಿ ಒಂದು ವರ್ಷ ಹೆಚ್ಚಾಗಿ ದಾಖಲಿಸಿದ್ದು, ಇಂದಿಗೂ ಬೇಸರವಿದೆ. ಕಟ್ಟಡದಲ್ಲಿ ಐದು ಕೊಠಡಿಗಳಿದ್ದವು ಎಲ್ಲವೂ ಮಕ್ಕಳಿಂದ ತುಂಬಿತುಳುಕುತ್ತಿತ್ತು.

ನಾನು ಕುಳಿತುಕೊಳ್ಳುತ್ತಿದ್ದ ನಾಲ್ಕೂ ತರಗತಿಗಳ ಜಾಗಗಳನ್ನು ನೋಡಿ, ಖುಷಿಗಿಂತ ನೋವಾಗುತ್ತಿತ್ತು. ಅಜ್ಜಪ್ಪ ಮೇಷ್ಟ್ರು, ನೀಲಕಂಠ ಮೇಷ್ಟ್ರು, ಕಮಲಮ್ಮ ಟೀಚರ್ ಹಾಗೂ ಸಮಯಕ್ಕೆ ಸರಿಯಾಗಿ ಗಂಟೆ ಬಾರಿಸುತ್ತಿದ್ದವನು ಎಲ್ಲರೂ ನನ್ನ ಮುಂದೆ ಹಾಯ್ದು ಹೋದಂತಾಯಿತು.

ಹಿಂದಿನ ಖಾಲಿ ಜಾಗದಲ್ಲಿ ಹಣ್ಣು–ತರಕಾರಿ ಗಿಡಗಳನ್ನು ಬೆಳೆಸುತ್ತಿದ್ದರು, ಮಕ್ಕಳಿಗೆ ಅರಿವು ಮೂಡಿಸುವುದಕ್ಕಾಗಿ ನಮ್ಮಿಂದಲೇ ಪಿಳಗಾಲುವೆಯಿಂದ ನೀರು ತರಿಸಿ ಹಾಕಿಸುತ್ತಿದ್ದರು.

ಒಂದು ಹಳೆಯ ಅಂಗಿಯು ಹರಿದು ಅದಕ್ಕೆ ನೂರೆಂಟು ಅಗಲವಾದ ತೂತುಗಳಿರುವ ಸ್ಥಿತಿಯನ್ನು ಕಲ್ಪಿಸಿಕೊಳ್ಳಿ, ಬಿಡಿ ಈಗ ಬಿಕ್ಷುಕನೂ ಸಹ ಹರಿದ ಬಟ್ಟೆಗಳನ್ನು ತೊಡುವುದಿಲ್ಲ. ನನ್ನ ದೇಗುಲದ ಸ್ಥಿತಿಯು ಹರಿದು ಛಿದ್ರವಾಗಿದ್ದ ಅಂಗಿಯಂತಿತ್ತು. ಹೆಂಚುಗಳೆಲ್ಲಾ ಉದುರಿ ಹೋಗಿವೆ ಫ್ಲೋರಿಂಗ್ ಕಿತ್ತು ಗುಂಡಿಗಳಾಗಿವೆ, ಗೋಡೆಗಳು ಬಿರುಕು ಬಿಟ್ಟು ಅಲ್ಲಲ್ಲಿ ಪ್ಲಾಸ್ಟರಿಂಗ್ ಉದುರಿದೆ. ಎಲ್ಲೆಡೆ ಕಸದ ಗುಡ್ಡೆಗಳು, ಒಟ್ಟಾರೆ ಅಣುಬಾಂಬ್ ಬಿದ್ದ ಉಕ್ರೇನ್‌ನಂತಿತ್ತು, ನನ್ನ ಕಣ್ಣುಗಳಿಂದ ಹರಿಯುತ್ತಿದ್ದ ನೀರನ್ನು ತಡೆಯಲಾಗಲಿಲ್ಲ.

ಆಗಿನ್ನೂ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ಕಾಲ, ಏಳನೇ ತರಗತಿಯ ಬಾಲಕ ನಾನು, ನಮ್ಮ ತರಗತಿ ಒಂದರಲ್ಲೇ ಸುಮಾರು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪಾಠಗಳು ಮೂರು ಕೊಠಡಿಗಳಲ್ಲಿ ನಡೆಯುತ್ತಿದ್ದವು, ಇಡೀ ಶಾಲೆಯಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರು.

ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಆಗಿತ್ತು, ಜೊತೆಯಲ್ಲಿ ಅರ್ಧದಷ್ಟು ಮಕ್ಕಳು ಫೇಲಾದವರೇ ಇದ್ದವರು. ಓದದೇ ಇದ್ದರೂ ಏಳು ಗೆದ್ದರೆ ಹತ್ತನೇ ತರಗತಿಯವರೆಗೆ ಸರಾಗವಾಗಿ ಹೋಗಿಬಿಡಬಹುದು ಎಂಬ ದುರಾಸೆ. ಊರೆಲ್ಲಾ ಹೇಳಿಕೊಳ್ಳುತ್ತಿದ್ದವ್ರ ನಮ್ಮದು ಪಬ್ಲಿಕ್ ಪರೀಕ್ಷೆ ಪಾಸು ಮಾಡುವುದು ಕಷ್ಟವೆಂದು. ಯಾಕೋ ಗೊತ್ತಿಲ್ಲಾ ಫಲಿತಾಂಶ ಬಂದಾಗ ಪಾಸಾದವರಷ್ಟೆ ಸಂಖ್ಯೆಯಲ್ಲಿ ಫೇಲಾದವರೂ ಇರುತ್ತಿದ್ದರು. ಈಗಿನ ಮಕ್ಕಳು ಎಲ್ಲರೂ ನೈಂಟಿ ಪ್ಲಸ್ ಅಂತಾರೆ. ಇವರಷ್ಟು ಬುದ್ಧಿವಂತರು ನಾವಾಗಿರಲಿಲ್ಲವೋ ಅಥವಾ ಮೇಷ್ಟ್ರುಗಳೇ ನಮಗೆ ಪಾಠ ಮಾಡುವಷ್ಟು ಬುದ್ಧಿವಂತರು ಇರಲಿಲ್ಲವೋ ತಿಳಿಯದಾಗಿದೆ.

ನಮ್ಮ ಗುರುಗಳಲ್ಲಿ ಇಬ್ಬರನ್ನು ಬಿಟ್ಟರೆ ಹತ್ತನೇ ತರಗತಿಯವರೆಗೆ ನನಗೆ ಪಾಠ ಹೇಳಿಕೊಟ್ಟವರಲ್ಲಿ ಎಲ್ಲರೂ ಸ್ವರ್ಗಸ್ಥರಾಗಿದ್ದಾರೆ. ಉಳಿದವರಲ್ಲಿ ಪ್ರೈಮರಿ ಶಾಲೆಯ ಗುರುಗಳಾದ ಪೂಜ್ಯ ಶ್ರೀಅಜ್ಜಪ್ಪನವರು ಇಂದಿಗೂ ನನ್ನ ಸಂಪರ್ಕದಲ್ಲಿದ್ದಾರೆ. ಅವರ ಜೊತೆ ಮೊಬೈಲ್‌ನಲ್ಲಿ ಮಾತನಾಡುವಾಗ ಇಂದಿಗೂ ನನಗೆ ಶಾಲೆಯಲ್ಲಿ ಇದ್ದಾಗಿನ ಅಂಜಿಕೆ, ಭಯ, ಭಕ್ತಿ, ಗೌರವ ಎಲ್ಲವೂ ಮಿಳಿತವಾದ ಭಾವನೆ ನನ್ನೊಳಗೆ ಆಗುತ್ತಿರುತ್ತದೆ. ಇವರು ನಾಲ್ಕನೇ ತರಗತಿಯಲ್ಲಿ ಪಾಠ ಮಾಡುತ್ತಿದ್ದವರು, ಕೈಯಲ್ಲಿ ಬೆತ್ತದ ಕೋಲು ಇದ್ದೇ ಇರುತ್ತಿತ್ತು, ಅಹಾಂ.. ಇವರಷ್ಟೇ ಅಲ್ಲ ಪೊಲೀಸ್‌ನವರು ದೊಣ್ಣೆ ಹಿಡಿದಿರುವಂತೆ ಎಲ್ಲಾ ಗುರುಗಳ ಕೈಯ್ಯಲ್ಲಿ ಕಡ್ಡಾಯವಾಗಿ ಬೆತ್ತ ಇದ್ದೇ ಇರುತ್ತಿತ್ತು, ಬೆತ್ತ ಇಲ್ಲದೆ ತರಗತಿಗೆ ಯಾವೊಬ್ಬ ಗುರುಗಳು ಬರುತ್ತಿರಲಿಲ್ಲ.

ಅಜ್ಜಪ್ಪನವರು ಕೊಠಡಿಯೊಳಕ್ಕೆ ಬರುತ್ತಾರೆಂದರೆ ಮೊದಲು ಕೋಲು ಒಳಕ್ಕೆ ಬರುತ್ತಿತ್ತು ನಂತರ ಅವರು ಕಾಲಿಡುತ್ತಿದ್ದದ್ದು. ಅವರು ಕುಳಿತು ಅಥವಾ ನಿಂತು ಪುಸ್ತಕ ಹಿಡಿದು ಪಾಠ ಮಾಡುತ್ತಿದ್ದವರಲ್ಲ, ನಮ್ಮ ಮೆದುಳನ್ನು ಬುರುಡೆಯಿಂದ ಹೊರಕ್ಕೆ ತೆಗೆದು ಪುಸ್ತಕದ ವಿಷಯವನ್ನೆಲ್ಲಾ ಅದಕ್ಕೆ ತುಂಬಿ ವಾಪಸ್ಸು ಇಡುತ್ತಿದ್ದರು ಎಂದರೆ ನಿಮಗೆ ಅತಿಶಯೋಕ್ತಿ ಎನಿಸಿಬಹುದು, ಅವರು ಅಭಿನಯಿಸಿ ತಮ್ಮೆಲ್ಲಾ ಆಂಗಿಕಭಾವದಿಂದ ಹೇಳುತ್ತಿದ್ದ ರೀತಿ ನೆನಪು ಆದಾಗಲೆಲ್ಲಾ ಇಂದಿಗೂ ನನ್ನ ಮನಸ್ಸಿನ ಪರದೆಯಲ್ಲಿ ಸ್ಪಷ್ಟವಾಗಿ ಮೂಡುತ್ತದೆ, ಅಷ್ಟು ಅದ್ಭುತವಾಗಿ ಪಾಠ ಮಾಡುತ್ತಿದ್ದರು.

> ಶಿಕ್ಷಣದ ಬೇರುಗಳು ಕಹಿ ಇರಬಹುದು, ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ ಎಂದು ಅರಿಸ್ಟಾಟಲ್ ಹೇಳಿದಂತೆ ಅಂದು ನಮ್ಮ ಗುರುಗಳು ಶಿಕ್ಷಿಸಿ ಕಲಿಸಿದ್ದಕ್ಕೆ ಇಂದು ಸಿಹಿಯಾದ ಫಲವನ್ನು ಉಣ್ಣುತ್ತಿದ್ದೇವೆ. ಅಕ್ಷರ ಕಲಿಸಿದ ಗುರುವರ್ಯರನ್ನು ಹಾಗೂ ಕಲಿಯಲು ಆಶ್ರಯ ನೀಡಿದ ಶಾಲೆಯನ್ನು ಕೊನೆತನಕ ಮರೆಯುವುದುಂಟೆ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಆಗ ನನಗಷ್ಟೇ ಅಲ್ಲ ನನ್ನ ಮಿತ್ರರಿಗೂ ಅವರ ಕಂಡರೆ ಭಯ ಮತ್ತು ಕೋಪ ಎರಡೂ ಇತ್ತು, ಏಕೆಂದರೆ ಶಿಸ್ತುಪಾಲನೆಯಲ್ಲಿ ಸಿಪಾಯಿಗಿಂತಲೂ ಹೆಚ್ಚು. ಅವರು ಕಲಿಸಿದ ಶಿಸ್ತಿನ ಪಾಠ ನಮ್ಮ ಬೆಳವಣಿಗೆಗೆ ಸಹಕಾರಿ ಆಗಿದೆಯಾದರೂ ಅಂದಿಗೆ ತಿಳಿಯುವ ವಯಸ್ಸು ನಮ್ಮದಲ್ಲ.

ಶಿಕ್ಷಣದ ಬೇರುಗಳು ಕಹಿ ಇರಬಹುದು, ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ ಎಂದು ಅರಿಸ್ಟಾಟಲ್ ಹೇಳಿದಂತೆ ಅಂದು ನಮ್ಮ ಗುರುಗಳು ಶಿಕ್ಷಿಸಿ ಕಲಿಸಿದ್ದಕ್ಕೆ ಇಂದು ಸಿಹಿಯಾದ ಫಲವನ್ನು ಉಣ್ಣುತ್ತಿದ್ದೇವೆ.

ಇದೇ ಆವರಣದಲ್ಲಿ ಕೆಲವೇ ಮೀಟರುಗಳ ದೂರದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ಪರಿಸ್ಥಿತಿ ಇದಕ್ಕಿಂತಲೂ ಶಿಥಿಲಾವಸ್ಥೆಯಲ್ಲಿತ್ತು. ನಮ್ಮ ಕಾಲಕ್ಕೆ ಅದೊಂದು ಸುಸಜ್ಜಿತ ಆರ್‌ಸಿಸಿ ಮೇಲ್ಛಾವಣಿಯ ಕಟ್ಟಡ, ಸದ್ಯದಲ್ಲೇ ಕುಸಿಯುವ ಹಂತದಲ್ಲಿದೆ, ಕಟ್ಟಡದ ಗೋಡೆಗಳ ಮೇಲೆ ಮರಗಳು ಬೆಳೆದು ನಿಂತಿವೆ, ನೋಡಿದರೆ ಸಿನಿಮಾಗಳಲ್ಲಿ ತೋರಿಸುವ ಭೂತಬಂಗಲೆಯಂತಿದೆ. ಇದು ಸಹ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಬಹಳ ವರ್ಷಗಳೇ ಕಳೆದಿವೆ. ಇರುವ ಕಟ್ಟಡಗಳನ್ನು ಪಾಳು ಬಿಟ್ಟು ಪಕ್ಕದಲ್ಲೇ ಅವೈಜ್ಞಾನಿಕವಾಗಿ ಕಟ್ಟಿರುವ ಕಟ್ಟಡದಲ್ಲಿ ಶಾಲೆ ನಡೆಯುತ್ತಿದೆ, ಅಂದು ಐನೂರಕ್ಕೂ ಹೆಚ್ಚು ಇದ್ದ ಮಕ್ಕಳ ಬದಲಾಗಿ ಕೇವಲ ಅರವತ್ತು ಮಕ್ಕಳು ಓದುತ್ತಿದ್ದಾರೆ, ಬಹುಶಃ ಇವರು ಸ್ಥಿತಿವಂತರಾಗಿದ್ದಿದ್ದರೆ ಸಮೀಪದಲ್ಲಿ ಡೊನೇಷನ್ ಮದದಿಂದ ಮೆರೆಯುತ್ತಿರುವ ಇಂಗ್ಲೀಷ್ ಕಾನ್ವೆಂಟ್‌ಗಳಿಗೆ ಸೇರುತ್ತಿದ್ದರು.

ಹೈಸ್ಕೂಲ್ ನೋಡಲು ಕೊಪ್ಪಲಿಗೆ ಬಂದರೆ ಮುಂದೆ ಮುಖ್ಯ ಗೇಟನ್ನು ಮುಚ್ಚಲಾಗಿತ್ತು, ಅಲ್ಲಿಯೂ ಪಕ್ಕದ ಹೊಸ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಿತ್ತು, ಅಂದು ಭಾನವಾರವಾದ್ದರಿಂದ ಪ್ರಶಾಂತವಾಗಿತ್ತು, ಗೇಟಿನ ಮುಂದೆ ನಿಂತು ಒಳಗೆ ಹೋಗುವ ಬಗ್ಗೆ ಚಿಂತಿಸುತ್ತಿದ್ದೆ, ಅಷ್ಟರಲ್ಲಿ ಒಬ್ಬರು ಮುರಿದ ಕಾಂಪೌಂಡ್ ಹಾರಿ ಒಳಗೆ ಹೋಗಿದ್ದು ಕಂಡೆ, ಇಣುಕಿ ನೋಡಿದೆ ಸೊಂಪಾಗಿ ಗಿಡಗಳಿದ್ದ ಆವರಣ ಕಸದಿಂದ ಆವರಿಸಿ ಕೊಂಡು ಸ್ಮಶಾನದಂತಿತ್ತು, ಕಾರಿಡಾರ್‌ನ ಮೂಲೆಯಲ್ಲಿ ಗುಂಪೊಂದು ಕುಳಿತು ಜೂಜಾಟ ಆಡುತ್ತಿದ್ದರು, ನನ್ನ ಜ್ಞಾನದೇಗುಲ ಜೂಜು ಅಡ್ಡಾ ಆಗಿರುವುದನ್ನು ಕಂಡು ಮೊದಲುಂಡ ನೋವಿಗಿಂತಲೂ ಹೆಚ್ಚು ಬಾಧಿಸತೊಡಗಿತು. ಈ ಕಟ್ಟಡವು ಅವುಗಳಿಗಿಂತ ಮೊದಲೇ ಸತ್ತು ಬಹಳ ವರ್ಷಗಳೇ ಕಳೆದಿವೆ.

ನಮ್ಮ ಶಾಲೆಗಳನ್ನು ನೋಡದೇ ಇದ್ದಿದ್ದರೇ ಒಳ್ಳೆಯದಿತ್ತೆಂದು, ಭೇಟಿ ನೀಡಿದ ಮೇಲೆ ಅನಿಸಿತು, ಮನಸ್ಸಿನಲ್ಲಿ ನನಗೆ ಬಾಲ್ಯದ ಕಲ್ಪನೆ ಇತ್ತು ಅದೇ ಗುಂಗಿನಲ್ಲೇ ಇರಬೇಕಾಗಿತ್ತು, ಕೆಲವನ್ನು ಬಹಳ ವರ್ಷಗಳಾದ ಮೇಲೆ ಮಹತ್ವಾಕಾಂಕ್ಷೆಯಿಂದ ನೋಡಲು ಹೋಗಲೇ ಬಾರದು ಭ್ರಮ ನಿರಶನವಾಧೀತು. ಬಾಲ್ಯದ ಗೆಳೆಯರೂ ಅಷ್ಟೇ ಅಲ್ಲವೆ?, ಬಹಳ ವರ್ಷಗಳ ನಂತರ ಭೇಟಿಯಾದರೆ, ಅವನು ಚೆಂದಿದ್ದರೆ ಓಕೆ ಆದರೆ ರೂಪವೇ ಬದಲಾಗಿ ಬೋಳು ತಲೆ, ಹಲ್ಲುಗಳಿರುವುದಿಲ್ಲ, ಸುಕ್ಕುಗಟ್ಟಿದ ಮುಖ, ಬೊಜ್ಜೊಟ್ಟೆ.... ಆಗಿದ್ದರೆ!, ಅದರಲ್ಲೂ ಬಾಲ್ಯದ ಗೆಳತಿಯರನ್ನಂತು ಸುದೀರ್ಘ ಕಾಲದ ನಂತರ ನೋಡುವುದಕ್ಕೆ ಹೋಗಲೇಬಾರದು, ಅಪ್ಪಿತಪ್ಪಿ ಕ್ರಷ್ ಆಗಿದ್ದ ಹುಡುಗಿಯಾಗಿದ್ದರೆ ಹೇಗಾಗಬೇಡ.

ನೋಡಲೇಬೇಕೆಂದು ಹಂಬಲಿಸಿದ್ದ ಮೂರೂ ದೇಗುಲಗಳನ್ನು ನೋಡಿ, ಮನನೊಂದು ನೋಡಬಾರದಿತ್ತು ಎನಿಸಿದ್ದು ಸುಳ್ಳಲ್ಲ, ಊರಿನ ಪ್ರಮುಖ ಸ್ಥಳಗಳಲ್ಲಿ ಹಾಳೂರು ಹಂಪೆಯ ರೀತಿ ಮಲಗಿವೆ, ಜ್ಞಾನದೇಗುಲಗಳು ಅಜ್ಞಾನದಿಂದ ಭೂತಬಂಗಲೆಗಳಾಗಿವೆ. ಇಲಾಖೆಯವರು ಇವುಗಳನ್ನು ತೆರವುಗೊಳಿಸಿದರೆ ಮಕ್ಕಳಿಗೆ ಆಟದ ಬಯಲಾದರೂ ಆಗುತ್ತದೆ, ಬಹುಶಃ ಮಕ್ಕಳ ಮೇಲೆ ಕಟ್ಟಡ ಬೀಳುವವರೆಗೂ ಮನಸ್ಸು ಮಾಡುವಂತೆ ಕಾಣುವುದಿಲ್ಲ. ನಮ್ಮ ವ್ಯವಸ್ಥೆಯು ಹೇಗಿದೆಯೆಂದರೆ ಇರುವ ಕಟ್ಟಡಗಳನ್ನು ವಾರ್ಷಿಕ ನಿರ್ವಹಣೆ ಮಾಡದೆ ಹಾಳು ಮಾಡಿಬಿಡುತ್ತೇವೆ, ಬರುವ ಅನುದಾನದಲ್ಲಿ ಸೂಕ್ತವಲ್ಲದ ಜಾಗದಲ್ಲಿ ಹೊಸ ಕಟ್ಟಡವನ್ನು ಕಟ್ಟುತ್ತೇವೆ, ಕೆಲವೇ ವರ್ಷಗಳಲ್ಲಿ ಅದನ್ನೂ ಹಾಳು ಮಾಡಿಬಿಡುತ್ತೇವೆ.

ಖಾಸಗಿ ಶಾಲೆಗಳಲ್ಲಿರುವ ಟೀಚರ್‌ಗಳಿಗಿಂತಲೂ ಉತ್ತಮವಾದ ಟೀಚರ್‌ಗಳು ಸರ್ಕಾರಿ ಶಾಲೆಗಳಲ್ಲಿ ಇದ್ದಾರೆ, ಪಾಠಗಳು ಅಲ್ಲಿಯಷ್ಟೇ ಚನ್ನಾಗಿ ನಡೆಯುತ್ತವೆ, ಆದರೂ ಖಾಸಗಿ ಆಂಗ್ಲ ಶಾಲೆಗಳಿಗೇ ಪೋಷಕರ ಒಲವು. ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಸರ್ಕಾರಿ ಶಾಲೆಗಳು ಇದ್ದಾಗ್ಯೂ ಶಿಕ್ಷಣ ಇಲಾಖೆ ಖಾಸಗಿ ಶಾಲೆಗಳನ್ನು ಸಮೀಪದಲ್ಲೇ ತೆರೆಯಲು ಅನುಮತಿ ಕೊಟ್ಟು ಸರ್ಕಾರಿ ಶಾಲೆಗಳನ್ನು ಕೊಲ್ಲುತ್ತಿದೆ. ಆಂಗ್ಲ ಶಾಲೆಗಳಿಂದ ಸ್ವಚ್ಛ ಕನ್ನಡ ಭಾಷೆಯ ಮೇಲೆ ಎಷ್ಟೊಂದು ದುಷ್ಪರಿಣಾಮ ಬೀರುತ್ತಿದೆ ಎಂಬ ಅರಿವು ಯಾರಿಗೂ ಇದ್ದಂತಿಲ್ಲ. ಶಿಕ್ಷಣ ಕ್ಷೇತ್ರವು ಖಾಸಗಿಯವರಿಗೆ ಲಾಭದಾಯಕ ಉದ್ಯಮವಾಗಿ ಬೆಳೆದಿರುವುದನ್ನು ಅಭಿವೃದ್ಧಿ ಎಂದು ಕರೆಯಬಹುದೇ?

ಜನಾನುರಾಗಿ ಯುವ ನಾಯಕ ಸಹಕಾರಿ–ಶಾಸಕ ಜಿ.ಡಿ.ಹರೀಶ್‌ಗೌಡ



ಬಾಲ್ಯದಿಂದಲೇ ಬೆರೆ(ಳೆ)ಯುವ ಗುಣ

ಹರೀಶ್‌ಗೌಡರಿಗೆ ಜನರೊಂದಿಗೆ ಬೆರೆಯುವ ಗುಣ ಬಾಲ್ಯದಿಂದಲೇ ಬೆಳೆದುಬಂದಿದೆ. ಮೈಸೂರು ತಾಲೂಕು, ಇಲವಾಲ ಸಮೀಪದ ಗುಂಗ್ರಾಲ್ ಛತ್ರದಲ್ಲಿ 1987ರ ಜ.31ರಂದು ಜನಿಸಿದ ಇವರು ಕುಟುಂಬ, ಸಂಬಂಧಿಕರು ಹಾಗೂ ಸ್ನೇಹಿತರೊಂದಿಗೆ ನಲ್ಮೆಯಿಂದ ಬೆಳೆದವರು. ಎಲ್ಲಾ ಮಕ್ಕಳೊಂದಿಗೆ ಶಾಲಾ ವಾಹನದಲ್ಲೇ ಮೈಸೂರಿಗೆ ಓಡಾಡಿಕೊಂಡು ಸೇಂಟ್ ಜೋಸೆಫ್ ಹಾಗೂ ಮರಿಮಲ್ಲಪ್ಪ ಶಾಲೆಯಲ್ಲಿ ಶಾಲಾ ಶಿಕ್ಷಣ, ಮಹಾಜನ ಪಿಯು ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಎನ್‌ಐಇ ಸಂಸ್ಥೆಯಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿ ಪೂರೈಸಿದರು. ಬಳಿಕ ವಿದೇಶದಲ್ಲೂ ಉನ್ನತ ವ್ಯಾಸಂಗ ಮಾಡಿದ್ದರೂ ಜನರೊಂದಿಗೆ ಬೆರೆಯುವ ಗುಣ ಕಡಿಮೆಯಾಗಿಲ್ಲ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗುವ ಮೂಲಕ ಸಹಕಾರ ಕ್ಷೇತ್ರಕ್ಕೆ ಅಡಿಯಿಟ್ಟು, ನಂತರ ರಾಜಕೀಯ ರಂಗಕ್ಕೂ ಪ್ರವೇಶಿಸಿದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡರು ಉಭಯ ಕ್ಷೇತ್ರಗಳಲ್ಲೂ ಈಗ ಯುವ ಜನತೆಗೆ ಸ್ಫೂರ್ತಿಯಾಗಿದ್ದಾರೆ.

ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜಿ.ಟಿ.ದೇವೇಗೌಡರು ಹಾಗೂ ಹಿರಿಯ ಸಹಕಾರಿ ಶ್ರೀಮತಿ ಲಲಿತಾ ದಂಪತಿ ಪುತ್ರ ಜಿ.ಡಿ.ಹರೀಶ್‌ಗೌಡರು, ಕುಟುಂಬದ ಸಹಕಾರ ಜೊತೆಗೆ ಸ್ವಂತ ಪರಿಶ್ರಮದಿಂದ ಬೆಳೆದು ಬಂದವರು. ರಾಜಕಾರಣದ ಯಶಸ್ಸಿಗೆ ಆಸರೆಯಾದ ಸಹಕಾರ ಕ್ಷೇತ್ರದಲ್ಲೂ ಸಕ್ರಿಯರಾಗಿ, ಶ್ರಮಿಕರ ಸಂಘಟನೆಗೆ ಆದ್ಯತೆ ನೀಡಿದ್ದಾರೆ. ಉಭಯ ಕ್ಷೇತ್ರಗಳಲ್ಲೂ ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸುವ ಮೂಲಕ ಜನಾನುರಾಗಿಯಾಗಿದ್ದಾರೆ.

ಮೈಸೂರು ಭಾಗದ ಜೆಡಿಎಸ್ ಯುವ ನಾಯಕರಾಗಿ ಗುರುತಿಸಿಕೊಂಡಿರುವ ಶಾಸಕ ಜಿ.ಡಿ. ಹರೀಶ್ ಗೌಡರು, ವಯಸ್ಸಿನಲ್ಲಿ ಕಿರಿಯರಾದರೂ ಸಂಘಟನಾ ನೈಪುಣ್ಯತೆಯನ್ನು ಕರಗತ ಮಾಡಿಕೊಂಡಿದ್ದಾರೆ. ಸಹಕಾರ ರಂಗದಲ್ಲಿ ಹಂತ–ಹಂತವಾಗಿ ಬೆಳೆದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್‌ನ ಅಧ್ಯಕ್ಷರಾಗಿ, ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುವ ಮೂಲಕ ಹಿರಿಯ ಸಹಕಾರಿಗಳ ಮೆಚ್ಚುಗೆ ಪಡೆದಿದ್ದಾರೆ. ಸದ್ಯ ಹುಣಸೂರು ಕ್ಷೇತ್ರದ ಶಾಸಕರಾಗಿ ಎರಡೂವರೆ ವರ್ಷಗಳಲ್ಲಿ ಹಲವು ಜನಪರ ಕಾರ್ಯಗಳ ಮೂಲಕ ಜನರ ವಿಶ್ವಾಸ ಉಳಿಸಿಕೊಂಡಿದ್ದಾರೆ.

ಹಲವು ಯೋಜನೆಗಳಿಗಾಗಿ ಪ್ರಯತ್ನ: ಸಹಕಾರ ಹಾಗೂ ರಾಜಕೀಯದ ತವರಾಗಿರುವ ಹುಣಸೂರು ಅಭಿವೃದ್ಧಿಗಾಗಿ ಜಿ.ಡಿ.ಹರೀಶ್‌ಗೌಡರು ಹಲವು ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ಜನೋಪಯೋಗಿ ಕಾರ್ಯಕ್ರಮಗಳನ್ನು ಆದ್ಯತೆ ಅನುಸಾರ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ. ಹುಣಸೂರು ಎಲ್ಲಾ ಧರ್ಮ, ಜಾತಿಗಳ ಜನರಿರುವ ವಿಶೇಷ ಕ್ಷೇತ್ರವಾಗಿದ್ದು, ಸರ್ವಜನಾಂಗದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಮೂಲ ಸೌಕರ್ಯಗಳ ಜೊತೆಗೆ ಆಶ್ರಯ ಬಡಾವಣೆಗಳ ನಿರ್ಮಾಣ, ಬಡವರಿಗೆ ನಿವೇಶನ ಹಾಗೂ ಮನೆ ಹಂಚಿಕೆ, ಕಾಲುವೆ, ಏರಿ, ರಸ್ತೆಗಳ ದುರಸ್ತಿ ಸೇರಿದಂತೆ ಆದ್ಯತೆಯ ಯೋಜನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಮಟ್ಟದಲ್ಲಿ ಪ್ರಯತ್ನ ನಡೆಸಿದ್ದಾರೆ. ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ತಮ್ಮ ಕ್ಷೇತ್ರದಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲೂ ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುತ್ತಿದ್ದಾರೆ. ಒಟ್ಟಾರೆ ಜನರ ಸುರಕ್ಷತೆ ಹಾಗೂ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬದುಕಿನ ದಿಕ್ಕು ಬದಲಿಸಿದ ಚುನಾವಣೆ: ಸಹಕಾರ ಮತ್ತು ರಾಜಕಾರಣದ ಹಿನ್ನೆಲೆಯ ಕುಟುಂಬದವರಾದರೂ ಜಿ.ಡಿ.ಹರೀಶ್‌ಗೌಡರು, ಶಿಕ್ಷಣದ ಬಳಿಕ ಸ್ವಂತ ಉದ್ದಿಮೆ ಸ್ಥಾಪಿಸಿ, ಯುವ ಜನತೆಗೆ ಉದ್ಯೋಗ ಕಲ್ಪಿಸುವುದರ ಜೊತೆಗೆ ಯಶಸ್ವಿ ಉದ್ಯಮಿಯಾಗಬೇಕು ಎಂಬ ಕನಸು ಹೊಂದಿದ್ದರು. ಆದರೆ ಒಂದು ಚುನಾವಣೆ ಬದುಕಿನ ದಿಕ್ಕನ್ನೇ ಬದಲಿಸಿತು. ಇಂಜಿನಿಯರಿಂಗ್ ಪದವಿ ನಂತರ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್‌ಗೆ ಹೋಗಿದ್ದರಾದರೂ 2010ರಲ್ಲಿ ನಡೆದ ಮೈಸೂರು ಜಿಲ್ಲಾ ಪಂಚಾಯ್ತಿ ಚುನಾವಣೆ ಅವರ ಲೆಕ್ಕಾಚಾರಗಳನ್ನು ಬದಲಾಯಿಸಿತು. ಹುಣಸೂರು ತಾಲೂಕು ಹನಗೋಡು ಜಿಪಂ ಕ್ಷೇತ್ರದಿಂದ ಅವರ ತಾಯಿ ಲಲಿತಾ ಅವರು ಸ್ಪರ್ಧಿಸಿದ್ದರಿಂದ ಅನಿವಾರ್ಯವಾಗಿ ಇಂಗ್ಲೆಂಡ್‌ನಿಂದ ವಾಪಸ್ಸಾಗಿ ತಾಯಿ ಪರ ಪ್ರಚಾರಕ್ಕಿಳಿದಿದ್ದರು. ಆ ವೇಳೆ ಜನರ ಪ್ರೀತಿ–ವಿಶ್ವಾಸ ದಿಕ್ಕರಿಸಲಾಗದೆ ಇಲ್ಲಿಯೇ ಉಳಿದರು. ತಂದೆ–ತಾಯಿಯೊಂದಿಗೆ ರಾಜಕೀಯದಲ್ಲಿ ಸಕ್ರಿಯರಾದರು. ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲಿ ದಶಕದಿಂದ ಕೆಲಸ ಮಾಡಿದರು. ಹಲವು ಚುನಾವಣೆಗಳಲ್ಲಿ ಹರೀಶ್‌ಗೌಡರ ಸ್ಪರ್ಧೆಗೆ ಜನ ಒತ್ತಾಯಿಸಿದ್ದರಾದರೂ ಕೆಲವೊಂದು ಕಾರಣಕ್ಕೆ ಸಾಧ್ಯವಾಗಿರಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ರಾಜಕೀಯಕ್ಕೆ ಅಡಿಯಿಟ್ಟು, ಹುಣಸೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, 94,666 ಮತಗಳೊಂದಿಗೆ ಗೆಲುವು ದಾಖಲಿಸಿದರು.

ಉತ್ತಮ ಸಹಕಾರಿ, ಸಂಘಟಕ: ಹುಣಸೂರು ತಾಲೂಕು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕನಾಗುವ ಮೂಲಕ 2012ರಲ್ಲಿ ಸಹಕಾರ ಕ್ಷೇತ್ರಕ್ಕೆ ಅಧಿಕೃತವಾಗಿ ಪ್ರವೇಶಿಸಿದ ಜಿ.ಡಿ.ಹರೀಶ್‌ಗೌಡರು, ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. 2013ರಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿದ್ದಾಗ ಸಹಕಾರ ಬ್ಯಾಂಕ್‌ವೊಂದರಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ನಡೆದಿದ್ದನ್ನು ಪತ್ತೆ ಹಚ್ಚಿ, ಅದಕ್ಕೆ ಕಾರಣರಾದವರಿಗೆ ಶಿಕ್ಷೆ ಕೊಡಿಸುವಲ್ಲಿ ಸಫಲರಾದರು. 2018ರಲ್ಲಿ ಮತ್ತೆ ನಿರ್ದೇಶಕರಾದಾಗ ಇವರಿಗೆ ಅಧ್ಯಕ್ಷ ಸ್ಥಾನ ಒಲಿದು ಬಂದಿತು. ಐದು ವರ್ಷಗಳ ಅಧಿಕಾರಾವಧಿಯಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನ ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಸಫಲರಾದರು. ಸದ್ಯ ಹಾಲಿ ನಿರ್ದೇಶಕರಾಗಿ ರೈತರು, ಸಹಕಾರ ಸಂಘಗಳ ಸದಸ್ಯರ ನೆರವಿಗೆ ಶ್ರಮಿಸುತ್ತಿದ್ದಾರೆ. ಸಹಕಾರ ಹಾಗೂ ರಾಜಕೀಯ ಕ್ಷೇತ್ರದ ಮೂಲಕ ಜನರನ್ನು ಸಂಘಟಿಸುವಲ್ಲೂ ನಿಪುಣರಾಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

NOTICE

Notice is hereby given that **M/s Sightsee Holidays** a Partnership Firm being registered with Registrar of Companies with registration number RJP-F753-2022-23 and having its registered/principal office at # 2&6, 1st Main Road, Near Shardamba Temple, Jalahalli, Bangalore–560013 proposes to register itself as a Company Limited by Shares under Part I of the Companies Act, 2013, in the name of Sightsee Holidays Private Limited to carry on the business of tour operators, travel agents and travel organizers, and to plan, organize, promote, operate and conduct tours, travels, holidays and excursions within India and abroad, including inbound, outbound and domestic tourism, and to provide all kinds of travel related services such as booking of Air, Rail, Road and Sea Transport, Hotel and Accommodation arrangements, sightseeing, guides, cruise tours, adventure tours, pilgrimage tours, corporate tours, leisure tours and customized travel packages for individuals, groups, corporates and institutions.

Any person objecting to such registration may communicate his/her objection in writing, together with the grounds of objection, to the Registrar of Companies, Karnataka within twenty-one (21) days from the date of publication of this notice.

If no objection is received within the aforesaid period, it shall be presumed that no person has any objection to the proposed registration.

Sd/- S. Kamala, B.A., LL.B.,
Reg. No. 12350, Mysore District

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹೆಚ್.ಡಿ.ಕೋಟೆ

ಹುಣಸೂರು–ಬೇಗೂರು ರಸ್ತೆ, ಹೆಚ್.ಡಿ.ಕೋಟೆ ತಾಲ್ಲೂಕು–571114
Email address: eotphdkote@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:01/2025–26 ದಿನಾಂಕ: 30.01.2026

ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಹೆಗ್ಗಡದೇವನಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ ರವರಿಗೆ ಸರಬರಾಜುದಾರರಿಂದ Supply and Installation of Laptop for taluk Technical Support Agency to Heggadadevanakote taluk, Mysuru District ಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 2.0 kppp.karnataka.gov.in ಮೂಲಕ ಸಲ್ಲಿಸಬೇಕಾಗುತ್ತದೆ. ಈ ಟೆಂಡರಿನ ಒಟ್ಟು ಮೊತ್ತ ರೂ.11.89 ಲಕ್ಷಗಳು, EMD ಮೊತ್ತ ರೂ.29725/–ಟೆಂಡರ್ ಪ್ರಕಟಣೆಯ ದಿನಾಂಕ ಮತ್ತು ಸಮಯ 31.01.2026 ರಂದು 11:00 ಗಂಟೆಗೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿ: 14.02.2026 ರಂದು 16:00 ಗಂಟೆಗೆ. ತಾಂತ್ರಿಕ ಮತ್ತು ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 16.02.2026 ರಂದು ಬೆಳಗ್ಗೆ 11:00 ಗಂಟೆಗೆ. ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ

DIPR/DDMYS/1584/KSMCA/897/2025-26

ಹಸಿರು ನಮ್ಮ ಉಸಿರು







ಆದಿಶಕ್ತಿ ದೇವಾಲಯ ಉದ್ಘಾಟಿಸಿದ ಶಾಸಕ ಜಿಟಿಡಿ



ಮೈಸೂರು, ಜ.30– ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀ ಸಿದ್ದಪ್ಪಾಜಿ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿದ ಆದಿಶಕ್ತಿ ದೇವಾಲಯವನ್ನು ಶಾಸಕ ಜಿ.ಟಿ.ದೇವೇಗೌಡ ಶುಕ್ರವಾರ ಉದ್ಘಾಟಿಸಿದರು. ಶುಕ್ರವಾರ ಬೆಳಿಗ್ಗೆ ಆದಿಶಕ್ತಿ ದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿ,ವಿಶೇಷ ಪೂಜೆ ಸಲ್ಲಿಸಿ, ಮಹಾಮಂಗಳಾರತಿ ನಡೆಯಿತು. ಭಕ್ತರು ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದರು. ಈ ವೇಳೆ ಅನ್ನ ಸಂತರ್ಪಣೆ ನೆರವೇರಿತು.

ಇದೇ ವೇಳೆ ಗ್ರಾಮಸ್ಥರು ಶಾಸಕ ಜಿ.ಟಿ ದೇವೇಗೌಡರನ್ನು ಸನ್ಮಾನಿಸಿದರು. ಮುಖಂಡರಾದ ಕೋಟೆಹುಂಡಿ ಮಹದೇವು, ಜವರನಾಯಕ, ಸಮಾಜ ಸೇವಕರಾದ ಎಸ್. ಶ್ರೀಕಾಂತ್, ಮಾದೇವಯ್ಯ, ದಾರಿಪುರ ಬಸವಣ್ಣ, ಎಂ.ನಾಗರಾಜು, ಮರಿಸಿದ್ದೇಗೌಡ, ಸುಜುಕಿ ಸಿದ್ದೇಗೌಡ, ಬರಡನಪುರ ಬಸವಣ್ಣ, ಅಬ್ದುಲ್ ಮುಜಾಹಿದ್, ನಿಂಗರಾಜು, ಅಭಿಷೇಕ್, ಬೈರೇಶ್, ಮೂಗನಾಯಕ, ರಂಗಸ್ವಾಮಿ, ದೇವಪ್ಪ, ಶಿವರಾಜು, ಚಿಕ್ಕಣ್ಣ, ಗುಜ್ಜನಾಯಕ, ಲೋಕೇಶ್ ಮತ್ತು ಸಿದ್ದಪ್ಪಾಜಿ ಬಡಾವಣೆ ಗ್ರಾಮಸ್ಥರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA SITE FOR SALE
ದಟ್ಟಗಳ್ಳಿ ಆದಿತ್ಯ ಸರ್ಕಲ್ ಪಕ್ಕ "ಅಶ್ವತ್ಥಾಮ ಲೇಔಟ್"ನಲ್ಲಿ 40 ಅಡಿ ರಸ್ತೆಗೆ 40x60 East Face ಸೈಟ್.
Call: 9886048471

ಬೇಕಾಗಿದ್ದಾರೆ
ಗುಂಡ್ಲುಪೇಟೆ ಸಿಟಿಗೆ ಸೇರಿದಂತೆ ಇರುವ ಜಮೀನಿನಲ್ಲಿ 3 ಹುಣಸೇ ಮರ ಹತ್ತಿ ಹುಣಸೇ ಹಣ್ಣು ಉದುರಿಸುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9988327999

ಬಾಡಿಗೆಗೆ ದೊರೆಯುತ್ತದೆ
ಶಾರದಾದೇವಿನಗರ ಧಾರ್ಮಿಕ ಕೇಂದ್ರ ದೇವಸ್ಥಾನದ ಹಾಲ್, 100 ಜನ ಒಟ್ಟಿಗೆ ಕುಳಿತು ಊಟ ಮಾಡಲು ದೊಡ್ಡ ಹಾಲು ವಿಶಾಲವಾದ ಅಡಿಗೆಮನೆ 2 ರೂಮು ವರಾಂಡ ಹಾಗು 3 ಬಾತ್‌ರೂಂ ಇರುವ ಎಲ್ಲಾ ಸೌಲಭ್ಯ ಸಹಿತ ಎಲ್ಲಾ ಕಾರ್ಯಗಳನ್ನು ಮಾಡಲು ದಿನದ ಲೆಕ್ಕದಲ್ಲಿ ಬಾಡಿಗೆಗೆ ದೊರೆಯುತ್ತದೆ.
8088799540 8861998817

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST, 2. RECEPTIONIST, 3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022.

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ, ಇಚ್ಛೆಯುಳ್ಳವರು ಸಂಪರ್ಕಿಸಿ
ಸಮಯ : 8 ರಿಂದ 4 ರವರೆಗೆ
ವಿಳಾಸ : ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್, ಕರ್ನಾಟಕ ಬ್ಯಾಂಕ್ ಹತ್ತಿರ, ಸಬರ್ಬನ್, ಮೈಸೂರು.

RAI ESTATES (RERA APPROVED, MUDA APPROVED, E-KHATA)
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ.
King City, Golden Palms, Green Park, Vardaman Nagar, Paradise Enclave, Green Acres, Spring Meadows, Dream City, Dream Valley, Eastern Hills
9448181488, 9945061604
#18, 1st Floor, New Sayyaji Rao Road, Bamboo Bazar, Mysuru - 570 001

ಪ್ರವಾಸ
* 9 ದಿನಗಳ ರಾಜಸ್ಥಾನ್ ಪ್ರವಾಸ 5/3/26
* 4 ದಿನಗಳ ಕಾಶಿ 6/2/26
* 9 ದಿನಗಳ ಅಯೋಧ್ಯ ಮತ್ತು ನೇಪಾಳ ಪ್ರವಾಸ 18/2/26
ಸುವರ್ಣ ಯಾತ್ರಾ
6360146483 9019462508

ಸೈಟು ಮಾರಾಟಕ್ಕಿದೆ
30x40 W/F, 87 Lakhs
ರಾಜರಾಜೇಶ್ವರಿನಗರ, ದಟ್ಟಗಳ್ಳಿ ಪಕ್ಕ
30x40 E/F, 35 Lakhs
ಸರ್ವಜ್ಞನಗರ
Mob: 9845765573

'R' ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು/ಮಾರಲು ಸೈಟುಗಳು ಮಾರಾಟಕ್ಕಿದೆ.
30x40 : ಸಪ್ತಮಾತೃಕ ಲೇಔಟ್
25x30 : ಜ್ಞಾನ ಭಾರತಿ ಲೇಔಟ್
9538412881

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC Pass)
12 ಘಂಟೆ ಪಾಳಿ 16 ಸಾವಿರ ESI & PF ಸೌಲಭ್ಯ, ಮೇಟಗಳ್ಳಿ ಸುತ್ತಮುತ್ತ ಪ್ರದೇಶ,
9035367083 6361548626

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿಯಲ್ಲಿರುವ ಮನೆಗೆ ಗಾರ್ಡನರ್ ಕೆಲಸಕ್ಕೆ ಅನುಭವಸ್ಥ ಒಂದು ಕುಟುಂಬ ಬೇಕಾಗಿದೆ
ಉತ್ತಮ ಸಂಬಳ ನೀಡಲಾಗುವುದು.
ಸಂಪರ್ಕಿಸಿ: 81234 50066

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

WANTED HOUSE
2 BHK Independent House for rent in and around Dattagalli, R R Nagara, Bogadi, Vijayanagara 2nd / 3rd / 4th Stage, Roopa Nagara, R T Nagara, Somnath Nagara
Contact: 95130 17195

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

HOUSE FOR SALE
Own built 3 BHK (EF) near KBL Gardenia, Vijayanagar 4th Stage, Mysore. (Reasonable price).
Mob: 9986014168 (Owner)
BROKERS EXCUSE

LEASE FOR HOUSE
30x50 Duplex 3 bhk, near University layout 26 lakhs
9886281713

ಸೈಟು/ಮನೆ ಮಾರಾಟಕ್ಕಿದೆ
40x60 RT ನಗರ ನೇಸರ ಲೇಔಟ್
50x80 ಭುಗತಳ್ಳಿ ಬನ್ನೂರು ರೋಡ್, ಪರಶುರಾಮನಗರ
40x60 E/S Cornar CFTRI Layout ಬೋಗಾದಿ
20x30 3 BHK Duplex ಲಲಿತಾದ್ರಿನಗರ G/F ರಾಮಕೃಷ್ಣನಗರ,
30x40 G/F, 1st Floor, 2nd Floor Duplex CFTRI Layout
9448938989 / 7892035789

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಂ ಹೋಂ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್, ಫೇಲ್ ಆದವರು ಸಂಪರ್ಕಿಸಿ:
HR: 9964311522

WANTED
Male candidate only.
SSLC / PUC / any ITI (Pass / fail).
Mob: 7975368452

ಮನೆ ಮಾರಾಟಕ್ಕಿದೆ
30x40 G/F, North face, No. 38/G, Siddalingeswara Layout, J.P. Nagar, Mysore.
ಬೆಲೆ: 1.30 Cr. (Negotiable)
Mob: 9448271349

RUNNING PROVISION STORE FOR SALE
Fully furnished with all essential products.
Address: Near Madhegowda Circle, Hebbal Main Road.
Mob: 7795283074

SITES FOR SALE
Near RT Nagar surround 600 Mtrs and layout, vishwapragna Vishwajith Brahmins layout and other layout, contact
9886281713

ಬೇಕಾಗಿದ್ದಾರೆ
ಪತ್ತಿನ ಚೆಲಿಂಗ್‌ಗೆ ಮಾಡಲು ಹುಡುಗರು ಬೇಕಾಗಿದ್ದಾರೆ. (ಸಂಬಳ 10000+Incentive)
ಸ್ಥಳ : ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ, Field Executives ಬೇಕಾಗಿದ್ದಾರೆ. (ಸಂಬಳ 17000+ Incentive), Collection Department, Field Collection Manager ಬೇಕಾಗಿದ್ದಾರೆ. (ಸಂಬಳ – 22000)
8150005111

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SHOP FOR SALE
Good running hotel, grocery and tea shop in same premises is for sale.
Mob: 8747933845

WANTED
Our food manufacturing company Earn Oven is looking for an Accountant cum Production Manager. Experienced staffs with talent is preferable. Contact:
Mob: 9611690101

SITE FOR SALE
MUDA Approved Corporation Limit. Bogadi Main Road, Jattihundi.
30x40, 20x40, 20x30
80% BANK LOAN.
Mob: 9738884777

SITES FOR SALE
30x40, 30x50, 40x60
Approved sites for sale. Bank loan available. Near MIT College, from city only 8.5 kms. Please contact:
9606975149, 8453344566

ಸೈಟ್ ಮಾರಾಟಕ್ಕೆ ಇದೆ
ಟಿ.ನರಸೀಪುರ ಟೌನ್‌ನಲ್ಲಿ 30x40 ಮತ್ತು 30x25 ವಿಸ್ತೀರ್ಣ, ತಾಲ್ಲೂಕು ಕಚೇರಿ ಹಿಂಭಾಗ ಮಾರಾಟಕ್ಕಿದೆ.
Sqft- 1600/- ಮಾತ್ರ, ಸಂಪರ್ಕಿಸಿ
9972445558
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

SITE FOR SALE
30x40 East Facing 2 sites, Muda Approved Per Sq Ft. 4800/- Rainbow school back side Martikyathanalli Gaddige main road, Mysore
9844189895 7892948089

New house for sale
@ MUDA Layout 2+1 BHK 20x30 South facing site East facing door, Shanthaveri Gopala Gowda Nagar, Mysore.
9740019514, 9738884777

Home for the Aged
Providing care for all senior citizens with comfortable accommodation, vegetarian food, professional nursing support in a homely environment & day care facility also available.
9607172737, 7353430309

SITE BUY & SALE
MUDA Approved Anandasagara Pragathi Nagar Nityananda Sagara Paramananda Sagara Kuberananda Sagara
30x40, 50x80 & 40x60
JK, 8951144240

House, site sale
30x40 house for slae at Ramakrishnanagar.
30x40 site sale at Dattagalli & Siddartha Layout.
40x60 site sale at Dattagalli, Gokulam, Kuvempunagar & Saraswathipuram.
Call: 7353430309

ಸೈಟ್ ಮಾರಾಟಕ್ಕಿದೆ
Site No. 3025, (Corner Site) Vijayanagar 2nd Stage, 24th Cross, 24th Main
Brokers Excuse
8884929415

ತಿ.ನರಸೀಪುರದಲ್ಲಿ
30x61, ಕಮರ್ಷಿಯಲ್ ಸೈಟು ಮಾರಾಟಕ್ಕಿದೆ. ಲಿಟಲ್ ಫ್ಲವರ್ ಕಾನ್ವೆಂಟ್ ಹತ್ತಿರ, ಬಿ.ಬಿ. ಮಾರ್ಟ್ ಪಕ್ಕ, ಸಾರ್ವಜನಿಕ ಆಸ್ಪತ್ರೆ ಮುಖ್ಯ ರಸ್ತೆ, ವಿವೇಕಾನಂದನಗರ.
60x30 (1800 sq.ft.) ಹಾಲ್ ಬಾಡಿಗೆಗೆ / ಭೋಗ್ಯಕ್ಕೆ ದೊರೆಯುತ್ತದೆ.
9448390643, 6366511883

ಬೇಕಾಗಿದ್ದಾರೆ
ಮೈಸೂರಿನ(ನಂಜುಮಳಿಗೆ) ಹೆಸರಾಂತ ಜ್ಯೂಸ್ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು 18 ರಿಂದ 35 ಸಂಬಳ 13,000 ರಿಂದ 15,000
9738117713

ಜಮೀನು ಮಾರಾಟಕ್ಕೆ ಇದೆ
ನಂಜನಗೂಡು ತಾ, ಬಿಚಗಯ್ಯನಹುಂಡಿಯಲ್ಲಿ 1 ¼ ಎಕರೆ(50 ಗುಂಟೆ) ಬೋರ್‌ವೆಲ್ ಇರುವ ಜಮೀನು ಮಾರಾಟಕ್ಕೆ ಇದೆ.
9379259093

ಬೇಕಾಗಿದ್ದಾರೆ
ತೋಟದ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
Ph- 9845920613

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3 BHK ಡ್ಯೂಪ್ಲೆಕ್ಸ್ ಫುಲ್ ಫರ್ನಿಶ್ಡ್, ಓನ್ ಬೋರ್‌ವೆಲ್ MUDA APPROVED, NORTH ಫೇಸ್ ಮನೆ ಮಾರಾಟಕ್ಕಿದೆ. ಬೆಲೆ: 69 ಲಕ್ಷ
9483862050 8660625801

ಕೆಲಸಕ್ಕೆ ಬೇಕಾಗಿದ್ದಾರೆ
Experienced Workers XEROX and Binding work Computer Work
9886356651

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅಡುಗೆ ಭಟ್ರು, ಸೌತ್ ಅಸಿಸ್ಟೆಂಟ್, ಕೌಂಟರ್ (Counter), ಕ್ಲೀನಿಂಗ್ / ವಾಷಿಂಗ್, ಚಾಟ್ ಮಾಸ್ಟರ್ (Chats Master) ಸಪ್ಲೆಯರ್ (ವೈಟರ್), ಸಂಪರ್ಕಿಸಿ
8884066266

ತಕ್ಷಣ ಬೇಕಾಗಿದ್ದಾರೆ
ಬದನಗುಪ್ಪೆ ಇಂಡಸ್ಟ್ರಿಯಲ್ ಏರಿಯಾದಲ್ಲಿ (ಚಾಮರಾಜನಗರ), ಸೆಕ್ಯೂರಿಟಿ ಕೆಲಸ ಮಾಡಲು, ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ, ESIC+PF+ ಕ್ಯಾಂಟೀನ್ ವ್ಯವಸ್ಥೆ ಇರುತ್ತದೆ. 12 ಗಂಟೆಗಳ ಕೆಲಸದ ಸಮಯ, ವಿದ್ಯಾರ್ಹತೆ : SSLC + PUC.
7019378337

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ. ಇರ್ವಿನ್ ರಸ್ತೆ, ಮೈಸೂರು. ಸಮಯ : 10.30 ರಿಂದ 7 ರವರೆಗೆ, ಸಂಬಳ : 12 ರಿಂದ 20 ಸಾವಿರದವರೆಗೆ
8050744784

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಸೂಪರ್‌ಮಾರ್ಕೆಟ್ ಪ್ರಾರಂಭವಾಗಲಿದ್ದು ಈ ಕೆಳಕಂಡ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ
CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ ಆಸಕ್ತ ಯುವಕ, ಯುವತಿಯರು ಬೇಕಾಗಿದ್ದಾರೆ.
EDUCATION SSLC, PUC, ITI, DIPLOMA, DEGREE SALARY (18k -38k),
Contact: 6366718368
9632659609, 7899627704

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ & ಹೌಸ್ ಕೀಪಿಂಗ್ ಮಹಿಳೆಯರು ಹಾಗೂ SSLC & ITI ಓದಿರುವ ಹುಡುಗರು ಫ್ಯಾಕ್ಟರಿ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ : ಮೈಸೂರು.
8792537093 7676948164 9900747093

ಕೆಲಸಕ್ಕೆ ಬೇಕಾಗಿದ್ದಾರೆ
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಸ್ಥಳ : ಡಾ. ರಾಜ್‌ಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್
ADC CAR SPA
8861221755

HOUSE FOR SALE
INDEPENDENT DUPLEX (30'X50') 4 BHK HOUSE AMPLE CAR PARKING; CLEAR DOCUMENTS S.A. LAYOUT, RAJIVNAGARA 2ND STAGE, MYSORE, BROKERS EXCUSE.
CONTACT : 7760145560

ವಧು ಬೇಕಾಗಿದ್ದಾರೆ
ಇಂಜಿನಿಯರ್ 30, ಬ್ರಾಹ್ಮಣ ವರನಿಗೆ ಸಸ್ಯಾಹಾರಿ ವಧು ಬೇಕಾಗಿದೆ. ಮದುವೆ ಮತ್ತು ಇತರ ಖರ್ಚುಗಳನ್ನು ಭರಿಸಲಾಗುವುದು.
8431597521

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು (ಪುರುಷರು) ಬೇಕಾಗಿದ್ದಾರೆ ವಸತಿ ಮತ್ತು ಊಟದ ಸೌಲಭ್ಯ ಹಾಗೂ ಆಕರ್ಷಕ ಸಂಬಳವಿರುತ್ತದೆ.
8431315761

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

COMMERCIAL SPACE FOR RENT
N/F,1000 Sqft, Newly Constructed, Corner Building, First Floor, New Kantharaje Urs Road, Mysore.
Mob: 98805 81377

ಹೊಸ ಮನೆ ಮಾರಾಟಕ್ಕಿದೆ
30x40 4 BHK – ಜಿಮ್ ರೂಮ್ ಕೂಡ ಇದೆ. ವಿಜಾಸ–ಶ್ರೀರಾಂಪುರ 2ನೇ ಹಂತ, ರಿಂಗ್ ರೋಡ್, ಪ್ರೀತಿ ಲೇಔಟ್ ಹತ್ತಿರ–ಮೈಸೂರು.
99456 15736
SITE - WEST FACE DOOR - NORTH FACE

ಬೇಕಾಗಿದ್ದಾರೆ
ಗಿರ್ ಹಸುಗಳು ಮಾರಾಟಕ್ಕೆ ಇವೆ.
9945215789

ಬೇಕಾಗಿದ್ದಾರೆ
ಪಿರಿಯಾಪಟ್ಟಣ & ಗೋಣಿಕೊಪ್ಪದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ, ಉಚಿತ ಊಟ, ವಸತಿ ಹಾಗೂ ESI, PF ಆಕರ್ಷಕ ವೇತನ ನೀಡಲಾಗುವುದು.
9535784363 9901236401

STAFF REQUIRED
CIVIL CONSULTANCY, CIVIL ENGINEERS, SITE SUPERVISOR, AUTOCAD, DRAFTSMAN & JUNIOR ENGINEERS REQUIRED FOR MYSORE & BENGALORE, QUALIFICATION : BE/ DIPLOMA(CIVIL), EXPERIENCE : MINIMUM 2 YEARS, SALARY: AS PER NORMS, CONTACT:
9008366792
email: nishadilip35@gmail.com

ಕೇರ್ ಟೇಕರ್ ಕೆಲಸ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ ಮೈಸೂರ್‌ನಲ್ಲಿ ಪ್ರತಿಯೊಂದು ಏರಿಯಾದಲ್ಲೂ ಕೆಲಸ ಲಭ್ಯ
8951717070

ಸೈಟುಗಳು ಮಾರಾಟಕ್ಕಿದೆ
ಮುಡಾ ಅನುಮೋದನೆ ಪಡೆದ ನಿವೇಶನ 20x30, 30x40 ಜಯಪುರ ಹತ್ತಿರ
9945623596

ತಕ್ಷಣ ಮಹಿಳೆ /ಪುರುಷ ಸಹಾಯಕರು ಬೇಕಾಗಿದ್ದಾರೆ
ನೇರ ನೇಮಕಾತಿ, ಸಂದರ್ಶನದ ದಿನಾಂಕ -31.01.2026, ಸಂದರ್ಶನದ ಸಮಯ : 10 AM, ಮಹಿಳೆಯರಿಗೆ 14500/–, ಪುರುಷರಿಗೆ ವೇತನ 18000/–, ಆಹಾರ ಲೋಡಿಂಗ್, ಆಫೀಸ್ ಸ್ಟಾಫ್ / ಡ್ರೈವರ್ ಬೇಕಾಗಿದ್ದಾರೆ. ಸ್ಥಳ – ಹೂಟಗಳ್ಳಿ, ಸಂಪರ್ಕಿಸಿ
7795452233

ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಸಂಬಳ : 18,000/-(26 days) ESI, PF ಸೌಲಭ್ಯವಿರುತ್ತದೆ.
9620667819 9880727819

JOB'S IN MYSORE
Impulse ನ ವಿವಿಧ ವಿಭಾಗಕ್ಕೆ 10th, PUC, Any Degree, Age (18-25) Earn (10,400 ರಿಂದ 20,800/- Pm) No Fee, ಪರಸ್ಪರ ಳದವರಿಗೆ ಮಾತ್ರ ವಸತಿ, ವಿವರಗಳೊಂದಿಗೆ,
KAVYA: 9342827788

WANTED
1. Architects (B. Arch/ D.Arch), 2. Site Engineer (Exp) Civil / B.E / Diploma 3. Driver (Exp)
9916266181 9844648590

CHANGE OF NAME
I, Rajashekhara N S/o Late Nagaraja Setty, Residing at "Swethadri Nilaya" 16th Ward, Ashwini Layout, Dara Bendra Nagara, Gundlupet 571111, Chamaraja Nagara Dist, Have changed my name from Rajashekhar N to Rajashekhara .N Sworn before notary Sathyanarayan by my own will and wish. Chamarajanagar Dist. Dated 22-01-2026
Sd/- Rajashekhara N

MAN POWER ಆಫೀಸ್‌ನಲ್ಲಿ
ಕೆಲಸ ಮಾಡಲು ಅನುಭವ ಇರುವ ಹಾಗೂ ಜನಗಳನ್ನು ಸಂಭಾಳಿಸಲು ಮಾಡಲು ನುರಿತ ಹುಡುಗರು field officer ಹಾಗೂ officeನಲ್ಲಿ ಇದ್ದು ಕೆಲಸ ಮಾಡಬೇಕು. ದ್ವಿಚಕ್ರ ವಾಹನ ಕಡ್ಡಾಯ ಸ್ಥಳ: ಸಿದ್ಧಾರ್ಥನಗರ, ಮೈಸೂರು ಸಂಬಳ : 15,000 ರಿಂದ 20,000
8951717070

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ 'Technical Helper' ಕೆಲಸ ಮಾಡಲು Diploma (Mechanical / Automobile) ಮಾಡಿರುವ ಯುವಕರು ಬೇಕಾಗಿದ್ದಾರೆ
Ph No: 9945537353
Email ID : lokeshms.ms70@gmail.com

ವಿತರಕರು ಬೇಕಾಗಿದ್ದಾರೆ
ನಮ್ಮದೇ ಬ್ರಾಂಡ್ ಇರುವ ಟೀ ಪೌಡರ್, ಕಾಫಿ ಪೌಡರ್, ಆಗ್ಗರ್‌ಬಿ ಜೆಲ್ಲದ ಪೌಡರ್, ಅಗರಬತ್ತಿ, ಕರ್ಪೂರ ಮುಂತಾದ ವಸ್ತುಗಳಿಗೆ ಪ್ರತಿ ತಾಲೂಕು, ಹೋಬಳಿ ಮತ್ತು ಜಿಲ್ಲೆಗಳಿಗೆ ವಿತರಕರು ಬೇಕಾಗಿದ್ದಾರೆ. ಆಸಕ್ತರು ನೇರ ಸಂಪರ್ಕಿಸಿ, ಅಧಿಕ ಲಾಭ ಪಡೆಯಿರಿ
6361740552 9449408551



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಸಪ್ಲೆಯರ್ ಮತ್ತು ಅಡುಗೆ ಕೋಣೆ ನಿರ್ವಹಣೆ ಸಿಬ್ಬಂದಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
9986669892/ 6362610799

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೆಂದೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ


PASSION FOR CARING

4th ANNIVERSARY

ನಾಲ್ಕನೇ ವಾರ್ಷಿಕೋತ್ಸವದ ಸಂಭ್ರಮ

ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ





ಕರ್ನಾಟಕ ಮುಕ್ತ ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿರುವ ತಮ್ಮ ಆರಾಧ್ಯ ಗುರುಗಳಾದ ಭಾಷ್ಯಂ ಸ್ವಾಮೀಜಿಯವರನ್ನು ಕೆ.ಬಿ. ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು. ಡಾ॥ ಯೋಗಣ್ಣ ಇತರರು ಉಪಸ್ಥಿತರಿದ್ದಾರೆ.

ಆರೋಗ್ಯ ವಿಮೆ

- ಯಶಸ್ವಿನಿ ಆರೋಗ್ಯ ವಿಮೆ
- ಅಯಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ
- ಜ್ಯೋತಿ ಸಂಜೀವಿನಿ ಆರೋಗ್ಯ ವಿಮೆ
- ಆರೋಗ್ಯ ಭಾಗ್ಯ ಯೋಜನೆ
- ರೈಲ್ವೆ ನೌಕರರ ಆರೋಗ್ಯ ವಿಮೆ
- ನೌಕರರ ರಾಜ್ಯ ವಿಮಾ ಯೋಜನೆ

ವಿಶೇಷ ರಿಯಾಯಿತಿ

ಡಯಾಲಿಸಸ್ ಪಡೆಯುತ್ತಿರುವ ರೋಗಿಗಳಿಗೆ ವಿಶೇಷ ರಿಯಾಯಿತಿ ದರದಲ್ಲಿ ಡಯಾಲಿಸಸ್ ಸೌಲಭ್ಯ ಒದಗಿಸಲಾಗುತ್ತಿದೆ.

ಕಡಿಮೆ ವೆಚ್ಚದಲ್ಲಿ ಜನ ಸಾಮಾನ್ಯರಿಗೂ ಉತ್ತಮದರ್ಜೆಯ ಆರೋಗ್ಯ ಸೇವೆ ನೀಡುತ್ತಿರುವ ಏಕೈಕ ಆಸ್ಪತ್ರೆಯಾಗಿದೆ


ಸೌಲಭ್ಯಗಳು

- 24X7 ಅಪಘಾತ ಮತ್ತು ತುರ್ತು ಚಿಕಿತ್ಸೆ
- 24X7 ಲ್ಯಾಬ್ ಸೇವೆಗಳು
- 24X7 ಆ್ಯಂಬ್ಯುಲೆನ್ಸ್ ಸೇವೆ
- 24X7 ಔಷದಾಲಯ
- 24X7 ರೇಡಿಯಾಲಜಿ ಸಿ.ಟಿ. ಸ್ಕ್ಯಾನ್
- ಅಲ್ಟ್ರಾಸೌಂಡ್ ಕಲರ್ ಡಾಪ್ಲರ್
- 2ಡಿ ಎಕೋ । ಐ.ಸಿ.ಯು
- ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳು
- ಕೊಲೊನೋಸ್ಕೋಪಿ । ಎಂಡೋಸ್ಕೋಪಿ
- ನವಜಾತ ಶಿಶುಗಳ ತೀವ್ರ ನಿಗಾ ಘಟಕ
- ಲಾಪರೋಸ್ಕೋಪಿ & ಲೇಸರ್ ಶಸ್ತ್ರಚಿಕಿತ್ಸೆ
- ಡಯಾಲಿಸಸ್ ಸೆಂಟರ್
- ಕಂಪ್ಯೂಟರೈಸ್ಡ್ ರೇಡಿಯೋಗ್ರಫಿ ಸಿಸ್ಟಮ್
- ಕಾರ್ಪೊರೇಟ್ & ಫ್ಯಾಮಿಲಿ ಹೆಲ್ತ್ ಪ್ಯಾಕೇಜ್‌ಗಳು



ಕೆ.ಬಿ. ಕುಮಾರ್ & ಶ್ರೀಮತಿ ಗೀತಾ ಕುಮಾರ್
ಛೇರ್‌ಮನ್
ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಬಡವರು ಹಾಗೂ ಎಲ್ಲಾ ವರ್ಗದವರಿಗೂ ಉತ್ತಮ ಆರೋಗ್ಯ ಸೇವೆ ದೊರಕಬೇಕೆಂಬ ಸೇವಾ ಮನೋಭಾವದಿಂದ ಆಸ್ಪತ್ರೆ ಪ್ರಾರಂಭಿಸಿದ್ದೇವೆ. ಯಾವುದೇ ಲಾಭದ ಆಕಾಂಕ್ಷ ಇಲ್ಲದೇ "ಜನರ ಸೇವೆಯೆ ಜನಾರ್ಧನ ಸೇವೆ" ಎಂಬಂತೆ ನಮ್ಮ ಆಸ್ಪತ್ರೆ ಸೇವೆ ನೀಡುತ್ತಾ ನಾಲ್ಕು ವರ್ಷವನ್ನು ಪೂರೈಸಿದೆ. ಈ ಯಶಸ್ಸಿಗೆ ಶ್ರಮಿಸಿದ ಎಲ್ಲಾ ವೈದ್ಯವೃಂದ ಹಾಗೂ ಸಿಬ್ಬಂದಿವರ್ಗವನ್ನು ಅಭಿನಂದಿಸುತ್ತೇವೆ.





10,000 ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳ ಯಶಸ್ವಿ ಪೂರೈಕೆ.

ಲಕ್ಷಕ್ಕೂ ಹೆಚ್ಚು ಹೊರರೋಗಿಗಳಿಗೆ ಯಶಸ್ವಿ ಚಿಕಿತ್ಸೆ

ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯು ಎಲ್ಲಾ ಬಗೆಯ ಆರೋಗ್ಯ ಸೇವೆಗಳನ್ನು ಮೈಸೂರಿನ ಜನತೆಗೆ ಅತೀ ಕಡಿಮೆ ದರದಲ್ಲಿ ಒದಗಿಸುತ್ತಿದೆ. ಆಸ್ಪತ್ರೆಯಲ್ಲಿ ರೋಗಿಗಳ ಆರೈಕೆಗೆ ಮನೆಯ ವಾತಾವರಣ ನೀಡುತ್ತಿದ್ದು ಸದಾ ಶುಚಿತ್ವ ಕಾಪಾಡಲು ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಅತ್ಯುತ್ತಮ ಅನುಭವ ಹೊಂದಿರುವ ವೈದ್ಯರ ತಂಡ, ತಂತ್ರಜ್ಞರು ಹಾಗೂ ಇನ್ನಿತರ ಸಿಬ್ಬಂದಿ, ಹೊರರೋಗಿಗಳು ಹಾಗೂ ಒಳರೋಗಿಗಳ ವಿಭಾಗದಲ್ಲಿ ರೋಗಿಗಳ ಸೇವೆಗೆ ಸದಾ ಸಜ್ಜಾಗಿದೆ. ಆಸ್ಪತ್ರೆಯು 150 ಹಾಸಿಗೆಯುಳ್ಳದ್ದಾಗಿದ್ದು, 65 ಐಸಿಯು ಹಾಸಿಗೆಗಳು ಪ್ರತ್ಯೇಕ. ಡಿಲಕ್ಸ್ ವಾರ್ಡ್‌ಗಳು, ಎಕ್ಸಿಕ್ಯೂಟಿವ್ ಸೂಟ್, ಸೆಮಿ ಡಿಲಕ್ಸ್ ವಾರ್ಡ್‌ಗಳು, 3 ಸುಸಜ್ಜಿತ ಅತ್ಯಾಧುನಿಕ ಆಪರೇಷನ್ ಥಿಯೇಟರ್‌ಗಳನ್ನು ಒಳಗೊಂಡಿದೆ. ಎಕ್ಸ್ ರೇ, ಸಿಟಿ ಸ್ಕ್ಯಾನ್, ಅಲ್ಟ್ರಾಸೌಂಡ್ ಸ್ಕ್ಯಾನ್ ಸೌಲಭ್ಯವೂ ಉಂಟು. ಅಲ್ಲದೆ 24 ಗಂಟೆಯೂ ಡಯಾಲಿಸಿಸ್ ಸೇವೆ, ಪ್ಯಾಥಾಲಜಿ ಲ್ಯಾಬ್ ಚಾಲು ಇದೆ. ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಹೊಂದಿದ್ದು ಯಾವುದೇ ಚಿಕಿತ್ಸೆಗಳು ಕಡಿಮೆ ದರದಲ್ಲಿ ಲಭ್ಯವಿದೆ.

ಮಕ್ಕಳ ವಿಭಾಗದ ಐಸಿಯು, ಪ್ರತ್ಯೇಕ NICU and PICU ಸೌಲಭ್ಯವನ್ನೂ ಹೊಂದಿದೆ. ಡಯಾಲೀಸಸ್ ರೋಗಿಗಳಿಗೆ ಪ್ರತ್ಯೇಕ ಯೂನಿಟ್ ಇದೆ. ರಿಯಾಯಿತಿ ದರದಲ್ಲಿ ಸೇವೆಯೂ ಲಭ್ಯ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

0821-2371000 | 95133 10100 | 95133 10102 | 95133 10103

ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಮೈಸೂರು – 570022

FOR LOCATION PLEASE SCAN

info@nkhospitals.com | www.nkhospitals.com | nayana_kumars_hospitals

ಶುಭ ಹಾರೈಕೆ

ವಿನಾಯಕ ಶಿಕ್ಷಣ ಸಂಸ್ಥೆ, ಕೆ. ಬೆಟ್ಟಹಳ್ಳಿ
ವಿವೇಕಾನಂದ ಪ್ರೌಢಶಾಲೆ, ಕೆ. ಬೆಟ್ಟಹಳ್ಳಿ

ಮುಡಾದಲ್ಲಿ 50:50 ಅನುಪಾತದಡಿ ಹಂಚಿಕೆ ಆದ ನಿವೇಶನ ವಶಪಡಿಸಿಕೊಳ್ಳದಿದ್ದಲ್ಲಿ ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲು

● ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್. ಕೌಟಿಲ್ಯ ಎಚ್ಚರಿಕೆ ● ಕೂಡಲೇ ಇಂತಹ ನಿವೇಶನ ಪಡೆದವರ ಪಟ್ಟಿ ಬಿಡುಗಡೆ; ಅವುಗಳಲ್ಲಿ 'ಎಂಡಿಎ ಆಸ್ತಿ' ಫಲಕ ಅಳವಡಿಕೆಗೂ ಆಗ್ರಹ

ಮೈಸೂರು, ಜ.30(ಎಂಟಿವೈ)– ಮುಡಾದಲ್ಲಿ 50:50ರ ಅನುಪಾತದಲ್ಲಿ ಹಂಚಿಕೆಯಾಗಿರುವ ಎಲ್ಲಾ ನಿವೇಶನವನ್ನು ಶೀಘ್ರವೇ ವಶಪಡಿಸಿಕೊಳ್ಳುವ ಪ್ರಕ್ರಿಯೆ ನಡೆಸದಿದ್ದರೆ, ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸುವುದಾಗಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ ಎಚ್ಚರಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2024ರಲ್ಲಿ ಬೆಳಕಿಗೆ ಬಂದ ಮುಡಾ ನಿವೇಶನ ಹಗರಣ ಕರ್ನಾಟಕದ ಚರಿತ್ರೆಯಲ್ಲಿ ಕರಾಳ ಅಧ್ಯಾಯವಾಗಿದ್ದು, ಬಹುದೊಡ್ಡ ಹಗರಣವಾಗಿದೆ. 50:50 ಅನುಪಾತದಲ್ಲಿ ಸಾವಿರಾರು ಕೋಟಿ ಮೌಲ್ಯದ 5 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಲೂಟಿ ಮಾಡಲಾಗಿದೆ. ಇದರಿಂದ ಹಲವು ವರ್ಷಗಳಿಂದ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಕಾಯುತ್ತಿರುವವರಿಗೆ ಅನ್ಯಾಯವಾಗಿದೆ. ಮುಡಾ ನಿವೇಶನ ಹಗರಣದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಚಾರಿತ್ರಿಕ 'ಮೈಸೂರು ಚಲೋ' ನಡೆಸಿ ದೊಡ್ಡಮಟ್ಟದಲ್ಲಿ ಹೋರಾಟ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬಕ್ಕೆ ನೀಡಿದ್ದ 14 ನಿವೇಶನಗಳನ್ನು ವಾಪಸ್ ನೀಡುವ ಮೂಲಕ ಮಾದರಿಯಾಗಿದ್ದಾರೆ. ಸಿಎಂ ಕುಟುಂಬದ ನಿವೇಶನ ಹಿಂದಿರುಗಿಸಿದ ಹಿನ್ನೆಲೆಯಲ್ಲಿ ಮುಡಾ 50:50 ಅನುಪಾತದಲ್ಲಿ ಹಂಚಿಕೆ ಮಾಡಿದ್ದ ಎಲ್ಲಾ ನಿವೇಶನಗಳನ್ನು ಹಿಂಪಡೆಯಬೇಕಾಗಿತ್ತು. ಆದರೆ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಆರ್.ಕೌಟಿಲ್ಯ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರ ಬಳಿಕ ಮುಡಾವನ್ನು ಸ್ವಚ್ಛಗೊಳಿಸುವುದಾಗಿ ಹೇಳಿ, ಅದನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ವಾಗಿ ಮಾರ್ಪಡಿಸಿ, ಅದಕ್ಕೆ ಜಿಲ್ಲಾಧಿಕಾರಿಯನ್ನೇ ಅಧ್ಯಕ್ಷರನ್ನಾಗಿ ಮಾಡಿದೆ. ಆದರೆ ಎಂಡಿಎ ಇದುವರೆಗೂ ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನಗಳನ್ನು ವಶಕ್ಕೆ ಪಡೆಯುವ, ತನ್ನ ಆಸ್ತಿ ರಕ್ಷಣೆ ಮಾಡುವ ಪ್ರಕ್ರಿಯೆ ಆರಂಭಿಸಿಲ್ಲ. ಮನಿ ಲ್ಯಾಂಡಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಡಿ ಈಗಾಗಲೇ ಹಲವು ನಿವೇಶನಗಳನ್ನು ವಶಕ್ಕೆ ಪಡೆದಿದೆ. ಆದರೆ, ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನ ವಶಕ್ಕೆ ಪಡೆಯಲು ಎಂಡಿಎ ಮುಂದಾಗಿಲ್ಲ. ಇದರಿಂದ ನಿವೇಶನ ಹಂಚಿಕೆಯಲ್ಲಿ ಸರ್ಕಾರದ ಪಾಲುದಾರಿಕೆ ಇದೆ ಎಂಬ ಅನುಮಾನ ವ್ಯಕ್ತವಾಗಿದೆ ಎಂದು ಆರೋಪಿಸಿದರು.

ಇಸಿಯಲ್ಲಿ ಎಂಡಿಎ ಆಸ್ತಿ ನಮೂದಿಸಿ: ಕೂಡಲೇ ಎಂಡಿಎ 50:50ರ ಅನುಪಾತದಲ್ಲಿ ಹಂಚಿಕೆ ಮಾಡಿರುವ ನಿವೇಶನಗಳನ್ನು ಗುರುತಿಸಬೇಕು. ಯಾರಿಂದ ಯಾರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಪಟ್ಟಿ ಬಿಡುಗಡೆ ಮಾಡಬೇಕು. ಅಂತಹ ನಿವೇಶನಗಳಲ್ಲಿ ಎಂಡಿಎ ಆಸ್ತಿ ಎಂದು ಫಲಕ ಅಳವಡಿಸಬೇಕು. ಆ ನಿವೇಶನಗಳ ಮಾರಾಟ, ಖಾತೆ, ಅಡಮಾನ ಮಾಡುವುದಕ್ಕೆ ಅವಕಾಶ ನೀಡಬಾರದು. ಮನೆ ಕಟ್ಟಲು ನಕ್ಷೆ ಅನುಮೋದಿಸಬಾರದು. ಅಲ್ಲದೆ, ಪತ್ರಿಕೆಗಳಿಗೆ ಜಾಹೀರಾತು ನೀಡಿ, ಇಂತಹ ನಿವೇಶನಗಳ ಖರೀದಿ ಹಾಗೂ ಯಾವುದೇ ವ್ಯವಹಾರ ಮಾಡದಂತೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ಇಸಿ ದಾಖಲೆಯಲ್ಲಿ ಎಂಡಿಎ ಆಸ್ತಿ ಎಂದು ನೋಂದಾಯಿಸಬೇಕು ಎಂದು ಆಗ್ರಹಿಸಿದರು.

ಅಕ್ರಮವಾಗಿ ಹಂಚಿಕೆಯಾಗಿರುವ ನಿವೇಶನಗಳನ್ನು ವಶಕ್ಕೆ ಪಡೆಯುವಂತೆ ಜಿಲ್ಲಾಧಿಕಾರಿಗಳು, ಸರ್ಕಾರಕ್ಕೆ, ನಗರಾಭಿವೃದ್ಧಿ ಇಲಾಖೆ, ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದ್ದು, ನಿವೇಶನ ಹಿಂಪಡೆಯುವ ಪ್ರಕ್ರಿಯೆ ಆರಂಭಿಸದಿದ್ದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದಾಗಿ ಎಚ್ಚರಿಸಿದರು.

ಚೇಲಾಗಳಿಗೆ ಅಕ್ರಮ ನಿವೇಶನ: ಮುಡಾ ಹಗರಣದಲ್ಲಿ ಶಾಸಕರು ತಮ್ಮ ಚೇಲಾಗಳಿಗೆ ಅಕ್ರಮವಾಗಿ ನಿವೇಶನ ಕೊಡಿಸಿದ್ದಾರೆ. ಮಾಜಿ ಪಾಲಿಕೆ ಸದಸ್ಯರೊಬ್ಬರು 1978ರಲ್ಲಿ ಭೂಮಿ ನೀಡಿರುವುದಕ್ಕೆ ಈಗ ಕುವೆಂಪುನಗರ, ಸರಸ್ವತಿಪುರಂನಲ್ಲಿ ನಿವೇಶನ ಪಡೆದಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಬಿಡುಗಡೆ ಮಾಡಿ, ಹೋರಾಟ ಮುಂದುವರೆಸುವುದಾಗಿ ಹೇಳಿದರು.

ಕಾಂಗ್ರೆಸ್ ಸುಳ್ಳು ಆರೋಪ: ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಬಿಜೆಪಿ ಸಂಸದರು, ಶಾಸಕರು ಮೈಸೂರಿನ ಅಭಿವೃದ್ಧಿಗೆ ಏನೂ ಮಾಡಿಲ್ಲ. ಸಂಸದರು ನಯಾ ಪೈಸೆ ಅನುದಾನ ತಂದಿಲ್ಲ ಎಂದು ಸುಳ್ಳು ಆರೋಪ ಮಾಡಿದ್ದಾರೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಲಕ್ಷ್ಮಣ ತೀರ್ಥ ನದಿ ಅಭಿವೃದ್ಧಿಗೆ 85 ಕೋಟಿ ರೂ., ಚನ್ನರಾಯಪಟ್ಟಣ ರಸ್ತೆ ಅಭಿವೃದ್ಧಿಗೆ 45 ಕೋಟಿ ರೂ., ಹಿನಕಲ್ ಜಂಕ್ಷನ್ ಬಳಿ ರಸ್ತೆ ಅಭಿವೃದ್ಧಿಗೆ 77 ಕೋಟಿ, ಮೈಸೂರು–ಕುಶಾಲನಗರ ಹೆದ್ದಾರಿ ನಿರ್ಮಾಣಕ್ಕೆ 3500 ಕೋಟಿ ರೂ., ಕೊಡಗಿನಲ್ಲಿ ರಿಟರ್ನಿಂಗ್ ವಾಲ್ ನಿರ್ಮಾಣಕ್ಕೆ 711 ಕೋಟಿ ರೂ., ಮೈಸೂರಿನ ರಿಂಗ್ ರಸ್ತೆಯ ಜಂಕ್ಷನ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಕೋಟ್ಯಾಂತರ ಅನುದಾನ ತಂದಿದ್ದಾರೆ. ಈ ಮಾಹಿತಿಯನ್ನು ಅರಿಯದೇ ಲಕ್ಷ್ಮಣ್ ಅವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ವಕ್ತಾರ ಮೋಹನ್, ಮಾಧ್ಯಮ ವಕ್ತಾರ ಮಹೇಶ್‌ರಾಜೇ ಅರಸ್ ಇದ್ದರು.

ಇನ್ನೂ ವಿಚಾರಣೆ ನಡೆಯುತ್ತಿದೆ

ಮುಡಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಹೆಸರಿಗೆ 50:50 ಅನುಪಾತದಲ್ಲಿ ನೀಡಿದ್ದ 14 ನಿವೇಶನಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ನ್ಯಾಯಾಲಯ ಸ್ವೀಕರಿಸಿದ ಮಾತ್ರಕ್ಕೆ ಪ್ರಕರಣ ಇತ್ಯರ್ಥವಾಗಿದೆ ಎಂದರ್ಥವಲ್ಲ. ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಹಾಗೂ ಕೆಲ ಕಾರ್ಯಕರ್ತರು 'ಸತ್ಯಮೇವ ಜಯತೇ' ಫಲಕ ಹಿಡಿದು ಪ್ರಕರಣವನ್ನು ಗೆದ್ದಿರುವಂತೆ ಸಂಭ್ರಮಿಸಿದ್ದಾರೆ. ಮುಡಾ ಹಗರಣ ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿದೆ. ಇಡಿ ವಿಚಾರಣೆ ಮುಂದುವರೆಸಿದೆ. ಜನಪ್ರತಿನಿಧಿಗಳ ನ್ಯಾಯಾಲಯ ಬಿ–ರಿಪೋರ್ಟ್ ಸ್ವೀಕರಿಸಿದ್ದಕ್ಕೆ ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸಿರುವುದು ಸಮಂಜಸವಲ್ಲ.

– ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ, ಮೈಸೂರು

ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ



ಮದ್ದೂರು ಮತ್ತು ಮದ್ದೂರು ಹುಂಡಿ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು, ಜ.30– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮದ್ದೂರು ಗ್ರಾಮದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಶಾಸಕರ ಅನುದಾನದಲ್ಲಿ 56 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮದ್ದೂರು ಮತ್ತು ಮದ್ದೂರು ಹುಂಡಿ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನವನ್ನು ಶುಕ್ರವಾರ ಉದ್ಘಾಟಿಸಿ, ಅವರು ಮಾತನಾಡಿದರು.

ಮದ್ದೂರು ಗ್ರಾಮದಲ್ಲಿ 1.50 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲಾಗಿದೆ. 20 ಲಕ್ಷ ವೆಚ್ಚದಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, 5 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣ, 17 ಲಕ್ಷ ವೆಚ್ಚದಲ್ಲಿ ಅಂಗನವಾಡಿ ಕೊಠಡಿ ನಿರ್ಮಿಸಲಾಗಿದೆ, 30 ಲಕ್ಷ ವೆಚ್ಚದಲ್ಲಿ 2 ಶಾಲಾ ಕೊಠಡಿಗಳ ನಿರ್ಮಾಣ, 5 ಲಕ್ಷ ವೆಚ್ಚದಲ್ಲಿ ಕನಕ ಸಮುದಾಯ ಭವನದ ಮುಂದುವರಿದ ಕಾಮಗಾರಿ, 5 ಲಕ್ಷ ವೆಚ್ಚದಲ್ಲಿ ಬಸವೇಶ್ವರ ದೇವಸ್ಥಾನದ ಮುಂದುವರಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

40 ಲಕ್ಷ ವೆಚ್ಚದಲ್ಲಿ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ನಿರ್ಮಾಣ ಕಾಮಗಾರಿಗೆ 20 ಲಕ್ಷ ಅನುದಾನ ನೀಡಲಾಗಿದ್ದು, ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು, ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ರಿಪೇರಿ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಲಾಗುವುದು ಎಂದೂ ಹೇಳಿದರು.

ಇದೇ ವೇಳೆ ಗೋಪಾಲಪುರ ಗ್ರಾಮದಲ್ಲಿ ಶಾಸಕರ ಅನುದಾನದಲ್ಲಿ 26 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಶ್ರೀ ರೇವಣ್ಣ ಸಿದ್ದೇಶ್ವರ ಮಠದ ಉದ್ಘಾಟನೆಯನ್ನು ಶಾಸಕ ಜಿಟಿಡಿ ನೆರವೇರಿಸಿದರು. ಗೋಪಾಲಪುರ ಗ್ರಾಮದಲ್ಲಿ ಬಾಕಿ ಇರುವ ರಸ್ತೆಗಳ ಅಭಿವೃದ್ಧಿಗೆ 1.20 ಕೋಟಿ ಅನುದಾನವನ್ನು ನೀಡಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿದ್ದು ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಮಾರಂಭದಲ್ಲಿ ಜಯಪುರ, ಮದ್ದೂರು, ಮದ್ದೂರುಹುಂಡಿ, ಗೋಪಾಲಪುರ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ದಂಧೆ ವಿರುದ್ಧ ಕ್ರಮಕ್ಕೆ ಎಂಎಲ್ಸಿ ವಿವೇಕಾನಂದರ ಆಗ್ರಹ



ವಿವೇಕಾನಂದ



ಚಲುವರಾಯಸ್ವಾಮಿ

ಮೈಸೂರು, ಜ.30– ಪ್ರಸ್ತುತ ಯಾವುದೇ ರಸಗೊಬ್ಬರದ ಕೊರತೆ ಇಲ್ಲ ಎಂದು ಕೃಷಿ ಸಚಿವ ಎನ್.ಚಲುವರಾಯ ಸ್ಪಷ್ಟಪಡಿಸಿದ್ದಾರೆ.

ಸದನದಲ್ಲಿ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು, ರೈತರಿಗೆ ಮಳೆಗಾಲ ಸಂದರ್ಭದಲ್ಲಿ ಬಿತ್ತನೆಗೆ ಯಾವುದೇ ತೊಂದರೆಯಾಗದಂತೆ ರಾಸಾಯನಿಕ ಗೊಬ್ಬರವನ್ನು ಸರಬರಾಜು ಮಾಡಬೇಕು ಹಾಗೂ ಸಬ್ಸಿಡಿ ದರದಲ್ಲಿ ನೀಡಿರುವ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ಮಾಡುವ ದಂಧೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಕಳೆದ ಮುಂಗಾರು ಹಂಗಾಮು ಸೇರಿದಂತೆ ಕಳೆದ ಎರಡೂವರೆ ವರ್ಷಗಳಲ್ಲಿ ಮಾತ್ರ ರಸಗೊಬ್ಬರ ಕೊರತೆಯಾಗಿತ್ತು. ಯೂರಿಯಾ ಮತ್ತು ಡಿಎಪಿ ಉತ್ಪಾದನೆ ಹಾಗೂ ಪೂರೈಕೆಯಲ್ಲಿ ಸ್ವಲ್ಪ ಸಮಸ್ಯೆ ಆಗಿತ್ತು. 3.5 ಲಕ್ಷ ಮೆಟ್ರಿಕ್ ಟನ್ ಕೊರತೆ ನಡುವೆಯೂ ಸಾಧ್ಯವಾದಷ್ಟು ರಸಗೊಬ್ಬರ ಪೂರೈಸಲಾಯಿತು. ಆದರೆ ಈ ವರ್ಷ ಯಾವುದೇ ಸಮಸ್ಯೆ ಇಲ್ಲ. ರೈತರಿಗೆ ಅಗತ್ಯವಾದಷ್ಟು ರಾಸಾಯನಿಕ ಗೊಬ್ಬರ ಪೂರೈಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸಿದ್ಧವಾಗಿವೆ ಎಂದು ತಿಳಿಸಿದರು.

ಇದೇ ವೇಳೆ ಕೆ.ವಿವೇಕಾನಂದ, ಮೂರು ವರ್ಷದಲ್ಲಿ 3014 ಮೆಟ್ರಿಕ್ ಟನ್ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ಆಗಿದೆ. ಇದರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ, ಎಷ್ಟು ಆರೋಪಿಗಳನ್ನು ಜೈಲಿಗೆ ಕಳುಹಿಸಿದ್ದೀರಿ, ಅನ್ನದಾತರಿಗೆ ನ್ಯಾಯ ಒದಗಿಸಲು ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಇದಕ್ಕೆ ಸಚಿವರು, ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ತಡೆಗೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ 2022–23ರಿಂದ ಈವರೆಗೆ 530 ಪ್ರಕರಣ ದಾಖಲಿಸಿ, 4174 ಮೆಟ್ರಿಕ್ ಟನ್ ವಶಪಡಿಸಿಕೊಳ್ಳಲಾಗಿದೆ. ಅಕ್ರಮದಲ್ಲಿ ಭಾಗಿಯಾದ ಮಾರಾಟಗಾರರ ಲೈಸೆನ್ಸ್ ರದ್ದುಪಡಿಸಿ, ದಂಡ ವಿಧಿಸಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯದ ವಿಜಿಲೆನ್ಸ್‌ಗಳು ಪರಿಣಾಮಕಾರಿಯಾಗಿ ಕ್ರಮ ವಹಿಸುತ್ತಿವೆ. ಆರೋಪಿಗಳನ್ನು ಜೈಲಿಗೆ ಹಾಕುವುದು ನ್ಯಾಯಾಲಯಕ್ಕೆ ಸಂಬಂಧಿಸಿದ ವಿಚಾರ ಎಂದು ಹೇಳಿದರು.

ನಾವಿಬ್ಬರೂ ಕೃಷಿಕರೆ: ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗಿರುವ ಬಗ್ಗೆ ಕೆ.ವಿವೇಕಾನಂದ ಅವರು ಪತ್ರಿಕಾ ವರದಿ ಉಲ್ಲೇಖಿಸಿದಾಗ ಸಚಿವರು, ಹೌದಪ್ಪಾ ನೀನು ಕೃಷಿಕನಲ್ಲದಿದ್ದರೂ ರೈತರ ಬಗ್ಗೆ ಇಷ್ಟೊಂದು ಮಾತನಾಡುತ್ತಿರುವುದಕ್ಕೆ ಖುಷಿಯಾಗುತ್ತಿದೆ ಎಂದರು. ಆಗ ವಿವೇಕಾನಂದ ನಾವಿಬ್ಬರೂ ಕೃಷಿಕರೆ, ಸದನಕ್ಕೆ ತಪ್ಪು ಮಾಹಿತಿ ನೀಡಬೇಡಿ ಎಂದರು. ಅದಕ್ಕೆ ಸಚಿವರು, ಮೈಸೂರಿಗೆ ಹೋದ ಮೇಲೆ ಕೃಷಿ ಬಿಟ್ಟಿದ್ದೀಯಲ್ಲಾ ಎಂದಾಗ ನೀವೂ ಕೃಷಿ ಬಿಟ್ಟು ಬೆಂಗಳೂರಿನಲ್ಲಿದ್ದೀರಲ್ಲಾ ಎಂದು ವಿವೇಕಾನಂದ ಹೇಳಿದರು. ಕಡೆಗೆ ಸಚಿವರು ನನಗೆ ಕೃಷಿ ಖಾತೆ ಕೊಟ್ಟಿದ್ದಾರಲ್ಲಾ? ಎಂದು ಹಾಸ್ಯಮಯ ವಾದ–ಪ್ರತಿವಾದಕ್ಕೆ ತೆರೆ ಎಳೆದರು.

ಮಂಚೇಗೌಡನಕೊಪ್ಪಲು ಪಿಯು ಕಾಲೇಜು ಸ್ವಾಗತ ಕಮಾನು, ಗೇಟ್ ಇಂದು ಉದ್ಘಾಟನೆ

ಮೈಸೂರು,ಜ.30–ಮೈಸೂರಿನ ಮಂಚೇಗೌಡನಕೊಪ್ಪಲಿನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿಗೆ ನಿರ್ಮಿಸಿರುವ ಸ್ವಾಗತ ಕಮಾನು, ಗೇಟ್ ಅನ್ನು ಶಾಸಕ ಕೆ.ಹರೀಶ್‌ಗೌಡ ಜ.31 (ಶನಿವಾರ)ರಂದು ಬೆಳಗ್ಗೆ 11.30ಕ್ಕೆ ಉದ್ಘಾಟಿಸಿ, ಪರೀಕ್ಷೆ ತಯಾರಿಯಲ್ಲಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಶಾಲೆಯ ಮುಖ್ಯ ಶಿಕ್ಷಕ ಶುಭ, ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಬಿ.ಸಿ.ಶಿವಮಲ್ಲು ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಾದಕ ವಸ್ತು ಮಾರಾಟ ಆರೋಪಿಗಳಿಗೆ ಜೈಲು ಶಿಕ್ಷೆ

ಮೈಸೂರು, ಜ.30 (ಆರ್‌ಕೆ,ಎಂಕೆ)– ಮಾದಕ ವಸ್ತು ಮಾರಾಟ ಮಾಡಿ ಸಿಕ್ಕಿಬಿದ್ದಿದ್ದ ಆರೋಪಿಗಳಿಬ್ಬರಿಗೆ ಮೈಸೂರು ನ್ಯಾಯಾಲಯವು ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ರಾಜೀವ್‌ನಗರ ನಿವಾಸಿಗಳಾದ ಮುದಾಸೀರ್ ಅಹಮ್ಮದ್ ಅಲಿಯಾಸ್ ಮುದ್ದು(37) ಹಾಗೂ ಮಹಮ್ಮದ್ ಇಮ್ರಾನ್ ಅಲಿಯಾಸ್ ಬಬನ್ ಅಮೀರ್(38) ಶಿಕ್ಷೆಗೊಳಗಾದವರು. 2023 ರಲ್ಲಿ ಮಾದಕ ವಸ್ತು ಮಾರಾಟ ಮತ್ತು ಸಾಗಣೆ ಮಾಡುತ್ತಿದ್ದಾಗ, ಉದಯಗಿರಿ ಠಾಣೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಅವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಉದಯಗಿರಿ ಠಾಣೆ ಅಂದಿನ ಇನ್ಸ್‌ಪೆಕ್ಟರ್ ಕೆ.ಎನ್. ಸುಧಾಕರ್ ಅವರು ತನಿಖೆ ಪೂರ್ಣಗೊಂಡ ನಂತರ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಸಾಕ್ಷ್ಯಾಧಾರಗಳಿಂದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಿಗೆ 5 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 50,000 ರೂ. ದಂಡ ವಿಧಿಸಿ ಇಂದು ತೀರ್ಪು ನೀಡಿದೆ. ದಂಡ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿಯಾಗಿ 1 ವರ್ಷ ಜೈಲು ಶಿಕ್ಷೆ ಅನುಭವಿಸುವಂತೆಯೂ ಆದೇಶ ನೀಡಲಾಗಿದೆ.

ಇಂದು ಮುಕ್ತ ವಿವಿ ಘಟಿಕೋತ್ಸವ

10,691 ಮಂದಿಗೆ ವಿವಿಧ ಪದವಿ ಪ್ರದಾನ



ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜ.30(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 21ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ 10,691 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ(ಜ.31) ಬೆಳಗ್ಗೆ 11.30ಕ್ಕೆ ಘಟಿಕೋತ್ಸವ ಭವನದಲ್ಲಿ ನಡೆಯುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ 2013–14, 2014–15 ಹಾಗೂ 2023–24ನೇ ಸಾಲಿನ ವಿದ್ಯಾರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಗುತ್ತಿದೆ. 23 ಮಹಿಳೆಯರು, 45 ಪುರುಷರು ಸೇರಿದಂತೆ 65 ಜನರಿಗೆ ಪಿಹೆಚ್‌ಡಿ ಪದವಿ ನೀಡಲಾಗುತ್ತಿದೆ. 65 ಅಭ್ಯರ್ಥಿಗಳಿಗೆ ಚಿನ್ನದ ಪದಕ, 62 ಜನರಿಗೆ ನಗದು ಬಹುಮಾನ ವಿತರಿಸಲಾಗುತ್ತಿದೆ. ವಿವಿಧ ಪದವಿ ಪಡೆದುಕೊಳ್ಳುವ ಅಭ್ಯರ್ಥಿಗಳಲ್ಲಿ 6704 ಮಹಿಳಾ, 3987 ಪುರುಷ ಅಭ್ಯರ್ಥಿಗಳಿದ್ದಾರೆ. ವಿವಿಧ ಪದವಿ, ಚಿನ್ನದ ಪದಕ, ನಗದು ಬಹುಮಾನ ಪಡೆದವರಲ್ಲಿ ಮಹಿಳೆಯರೇ ಮುಂಚೂಣಿಯಲ್ಲಿದ್ದಾರೆ ಎಂದರು.

2021–22 ಜನವರಿ ಆವೃತ್ತಿಯಿಂದ 2023–24ರ ವರೆಗೆ ಮಾನವಿಕ ವಿಷಯಗಳಲ್ಲಿ ಸ್ನಾತಕ ಪದವಿ, ಸ್ನಾತಕೋತ್ತರ ಪದವಿಯನ್ನು 2814 ಅಭ್ಯರ್ಥಿಗಳು ಸ್ವೀಕರಿಸಲಿದ್ದಾರೆ. ಈ ಪೈಕಿ 1810 ಮಹಿಳೆಯರು, 1004 ಪುರುಷರಿದ್ದಾರೆ. 1044 ಅಭ್ಯರ್ಥಿಗಳಿಗೆ ಬಿಎ ಪದವಿ ನೀಡಲಾಗುತ್ತಿದೆ. 78 ವರ್ಷದ ಲಕ್ಷ್ಮೀ ನಾರಾಯಣ ಅವರು ಎಂಎ(ಸಂಸ್ಕೃತ) ಪದವಿ ಪಡೆದುಕೊಳ್ಳುವ ಹಿರಿಯ ನಾಗರಿಕರಿದ್ದಾರೆ.

ಸಮಾಜ ವಿಜ್ಞಾನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು 2822 ಅಭ್ಯರ್ಥಿಗಳು ಪಡೆದುಕೊಳ್ಳಲಿದ್ದು, ಇದರಲ್ಲಿ 1165 ಪುರುಷರು, 1657 ಮಹಿಳೆಯರು ಎಂಬುದು ವಿಶೇಷ. ಬಿ.ಎಡ್ ಸ್ನಾತಕ ಪದವಿಯನ್ನು 473 ಮಂದಿ ಅಭ್ಯರ್ಥಿಗಳು ಸ್ವೀಕರಿಸಲಿದ್ದಾರೆ. ವಾಣಿಜ್ಯಶಾಸ್ತ್ರವಾದ ಎಂ.ಕಾಂ., ಬಿ.ಕಾಂ. ಪದವಿಯನ್ನು 1482 ಪಡೆದುಕೊಳ್ಳಲಿದ್ದಾರೆ. 349 ಪುರುಷರು, 461 ಮಹಿಳೆಯರು ಸೇರಿದಂತೆ 810 ಅಭ್ಯರ್ಥಿಗಳು ಎಂಬಿಎ ಪದವಿಗೆ ಭಾಜನರಾಗಿದ್ದಾರೆ. ವಿಜ್ಞಾನ ಮತ್ತು ಗ್ರಂಥಾಲಯ, ಮಾಹಿತಿ ವಿಜ್ಞಾನ ವಿಷಯದಲ್ಲಿ 750 ಪುರುಷರು, 1472 ಮಹಿಳೆಯರು ಸೇರಿದಂತೆ 2222 ಅಭ್ಯರ್ಥಿಗಳು ಸ್ನಾತಕ, ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಿದ್ದಾರೆ ಎಂದು ವಿವರಿಸಿದರು.

12 ವರ್ಷದ ಬಳಿಕ: ಯುಜಿಸಿ ಮಾನ್ಯತೆ ರದ್ದುಗೊಂಡಿರುವುದರಿಂದ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದ 2013–14, 2014–15ನೇ ಸಾಲಿನ ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಲಾಗುತ್ತಿದೆ. 12 ವರ್ಷಗಳ ನಂತರ ಘಟಿಕೋತ್ಸವ ಪ್ರಮಾಣಪತ್ರ ನೀಡಲಾಗುತ್ತಿದೆ.

ಉಭಯ ಸಾಲಿನ ಇನ್‌ಹೌಸ್(ವಿಶ್ವವಿದ್ಯಾಲಯದಿಂದ ನೇರವಾಗಿ ನೋಂದಾಯಿತವಾಗಿರುವ ವಿದ್ಯಾರ್ಥಿಗಳು) 96 ಸಾವಿರ ಅಭ್ಯರ್ಥಿಗಳು ಪದವಿ ನೀಡಲು ರಾಜ್ಯಪಾಲರು ಅನುಮತಿ ಕೊಟ್ಟಿದ್ದು, ಈ ವಿಷಯ ನ್ಯಾಯಾಲಯದಲ್ಲೂ ಇತ್ಯರ್ಥವಾಗಿದೆ. ಹೀಗಾಗಿ, ತಾಂತ್ರಿಕೇತರ ವಿಷಯಗಳಿಗೆ ಪದವಿ ಕೊಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಉಭಯ ಸಾಲಿನ 64102 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 30515 ಜನರು ತೇರ್ಗಡೆಯಾಗಿದ್ದು, ಒಟ್ಟಾರೆ ಫಲಿತಾಂಶ ಶೇ.47.60ರಷ್ಟಾಗಿದೆ. ಮಾನವಿಕ ವಿಷಯಗಳಲ್ಲಿ 2061 ಪುರುಷರು, 4051 ಮಹಿಳೆಯರು ಸೇರಿದಂತೆ 6112 ಸ್ನಾತಕೋತ್ತರ ಪದವಿ, 2928 ಅಭ್ಯರ್ಥಿಗಳಿಗೆ ಸ್ನಾತಕ ಬಿಎ ಪದವಿಯನ್ನು ನೀಡಲಾಗುತ್ತಿದೆ. ಸಮಾಜ ವಿಜ್ಞಾನದ 10671 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ, ಬಿ.ಎಡ್(ಸ್ಪೆಷಲ್) 597, ಬಿ.ಎಡ್ 475, 8103 ಅಭ್ಯರ್ಥಿಗಳಿಗೆ ಎಂ.ಕಾಂ, 308 ಜನರಿಗೆ ಬಿ.ಕಾಂ. ಪದವಿ, 358 ಜನರಿಗೆ ಎಂಬಿಎ ಪದವಿ ಕೊಡಲಾಗುತ್ತದೆ. ವಿಜ್ಞಾನ–ಗ್ರಂಥಾಲಯ, ಮಾಹಿತಿ ವಿಜ್ಞಾನ ವಿಷಯದಲ್ಲಿ 963 ಅಭ್ಯರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ಪದವಿ ನೀಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ(ಆಡಳಿತ) ಪ್ರೊ.ಎಸ್.ಕೆ. ನವೀನ್‌ಕುಮಾರ್, ಮೌಲ್ಯಮಾಪನ ಕುಲಸಚಿವ ಡಾ. ಸಿ.ಎಸ್.ಆನಂದಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಭಾಷ್ಯಂ ಸ್ವಾಮೀಜಿ, ಕೆ.ಬಿ.ಲಿಂಗರಾಜು, ಡಾ. ಸಿ.ಸೋಮಶೇಖರ್ ಸೇರಿ ಎಂಟು ಮಂದಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್



ಭಾಷ್ಯಂ ಸ್ವಾಮಿ ಲಕ್ಷ್ಮೀಜಿ ಲಿಂಗರಾಜು ಸೋಮಶೇಖರ್ ಸತೀಶ್ ಶಿವಕುಮಾರ್ ನಾಗಭೂಷಣ ಶಿವಶಂಕರ್

ಮೈಸೂರು, ಜ.30(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 21ನೇ ಘಟಿಕೋತ್ಸವದಲ್ಲಿ ಈ ಬಾರಿ ವಿವಿಧ ಕ್ಷೇತ್ರದ 8 ಮಂದಿ ಸಾಧಕ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲು ನಿರ್ಧರಿಸಲಾಗಿದೆ ಎಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಜ.31ರಂದು ನಡೆಯುವ ಘಟಿಕೋತ್ಸವದಲ್ಲಿ ಬೆಂಗಳೂರಿನ ಹರ್ಷ ಸಂಸ್ಥೆಯ ಎಸ್.ಶಿವಕುಮಾರ್, ತುಮಕೂರಿನ ಕಿಡ್ಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಸಂಸ್ಥಾಪಕ ಸತೀಶ್‌ಕುಮಾರ್ ಡಿ.ಕೆಗ್ಗೆರೆ, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಲಕ್ಷ್ಮೀಜಿ, ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಯೋಗನರಸಿಂಹಸ್ವಾಮಿ ದೇವಸ್ಥಾನದ ಪ್ರೊ.ಭಾಷ್ಯಂ ಸ್ವಾಮಿ, ಬೀದರ್‌ನಲ್ಲಿನ ಐಟಿಐ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಶಿವಶಂಕರ್ ಟೊಕರೆ, ಹಾಸನದ ಜ್ಯೋತಿಷಿ ಬಿ.ಎಸ್.ನಾಗಭೂಷಣ ಅತ್ರಿ, ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ.ಸೋಮಶೇಖರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲಾಗುತ್ತಿದೆ. 2013–14ನೇ ಸಾಲಿಗೆ ಮೂವರು, 2014–15ನೇ ಸಾಲಿಗೆ ಇಬ್ಬರು, 2023–24ನೇ ಸಾಲಿಗೆ ಮೂವರಂತೆ ಒಟ್ಟು 8 ಮಂದಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ. ಆಯ್ಕೆ ಸಮಿತಿ ಒಟ್ಟು 20 ಮಂದಿ ಪಟ್ಟಿಯನ್ನು ಸಿದ್ಧಪಡಿಸಿತ್ತು. ಅವರಲ್ಲಿ 8 ಮಂದಿಗೆ ಪದವಿ ನೀಡಲು ರಾಜ್ಯಪಾಲರು ಅಂಕಿತ ಹಾಕಿದ್ದಾರೆ ಎಂದರು

ಶನಿವಾರ(ಜ.31) ಬೆಳಗ್ಗೆ 11.30ಕ್ಕೆ ಘಟಿಕೋತ್ಸವ ಭವನದಲ್ಲಿ ನಡೆಯುವ 21ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮುಕ್ತ ವಿವಿಯ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರ್‌ಚಂದ್ರ ಗೆಹ್ಲೋಟ್ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಮಕುಲಾಧಿಪತಿಯೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಭಾಗವಹಿಸಲಿದ್ದು, ಕೇಂದ್ರ ಶಿಕ್ಷಣ, ಈಶಾನ್ಯ ಪ್ರದೇಶದ ಅಭಿವೃದ್ಧಿ ಖಾತೆಯ ರಾಜ್ಯ ಸಚಿವ ಡಾ.ಸುಕಾಂತ ಮಜುಂದಾರ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ನಿಧನ

ಮೈಸೂರಿನ ಹೆಸರಾಂತ ಕುಸ್ತಿಪಟು ಟೈಗರ್ ಬಾಲಾಜಿ ಜೆಟ್ಟಿ ನಿಧನ



ಮೈಸೂರು, ಜ.30– ಮೈಸೂರು ಸುಣ್ಣದಕೇರಿ ನಿವಾಸಿ, ಹೆಸರಾಂತ ಕುಸ್ತಿ ಪಟು ಟೈಗರ್ ಬಾಲಾಜಿ ಜೆಟ್ಟಿ (67) ಶುಕ್ರವಾರ ನಿಧನರಾದರು.

ಇವರಿಗೆ ಪುತ್ರ ಬಲರಾಮ ಇದ್ದಾರೆ. ಇತ್ತೀಚೆಗೆ ಒಬ್ಬ ಪುತ್ರ, ಪತ್ನಿ ಮೃತಪಟ್ಟಿದ್ದರು. ಕಳೆದ ನಾಲ್ಕು ದಿನಗಳ ಹಿಂದೆ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಇವರು ಕುಸ್ತಿ ಪಂದ್ಯಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಗೆದ್ದು ಖ್ಯಾತಿ ಗಳಿಸಿದ್ದರು. ಕುಸ್ತಿ ಆಖಾಡದಲ್ಲಿ ತಮ್ಮ ಕುಸ್ತಿ ನೈಪುಣ್ಯತೆಯಿಂದ ಅಸಂಖ್ಯಾತ ಕುಸ್ತಿ ಪ್ರಿಯರ ಪಾಲಿಗೆ 'ಟೈಗರ್' ಎಂದೇ ಪರಿಚಿತರಾಗಿದ್ದರು. ಸುಮಾರು 350ಕ್ಕೂ ಹೆಚ್ಚು ರಾಜ್ಯ, ರಾಷ್ಟ್ರಮಟ್ಟದ ಕುಸ್ತಿ ಪಂದ್ಯಗಳಲ್ಲಿ ಪಾಲ್ಗೊಂಡು ಜನರ ಗಮನ ಸೆಳೆದಿದ್ದರು.

ಅಂತೆಯೇ ಹಲವಾರು ವರ್ಷಗಳಿಂದ ಮೈಸೂರು ಅರಮನೆಯಲ್ಲಿ ನಡೆಯುವ ನಾಡಹಬ್ಬ ದಸರಾ ಉತ್ಸವದ ವಿಜಯದಶಮಿಯಂದು ನಡೆಯುವ ವಜ್ರಮುಷ್ಟಿ ಕಾಳಗದಲ್ಲಿ ಮೈಸೂರಿನ ಉಸ್ತಾದ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರಲ್ಲದೇ ಮೈಸೂರಿನಲ್ಲಿ ಹಲವಾರು ಕುಸ್ತಿ ಪೈಲ್ವಾನರನ್ನು ತರಬೇತಿಗೊಳಿಸಿದ್ದಾರೆ. ಇವರ ನಿಧನಕ್ಕೆ ಜೆಟ್ಟಿ ಜನಾಂಗದ ಹಲವಾರು ಮುಖಂಡರು ಸಂತಾಪ ಸೂಚಿಸಿದ್ದಾರೆ. ಶನಿವಾರ ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಮಂಜುಳಾ



ಮೈಸೂರು, ಜ.30– ಮೈಸೂರಿನ ಗಾಂಧಿನಗರದ ನಿವಾಸಿ ಮತ್ತು ಶ್ರೀ ದುರ್ಗಾದೇವಿ ಸೇವಾ ಸಮಿತಿಯ ಕಾರ್ಯದರ್ಶಿ ಲೇಟ್. ಎಂ.ಪಿ. ಶ್ರೀರಾಮ್ ಅವರ ಧರ್ಮಪತ್ನಿ ಶ್ರೀಮತಿ ಮಂಜುಳಾ(63 ವರ್ಷ) ಅವರು ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಮಕ್ಕಳಾದ ಸುಮಿತ್ರಾ, ಶಿಲ್ಪ, ಪ್ರಮೋದ್, ಸೊಸೆಯಂದಿರಾದ ಲಕ್ಷ್ಮೀ, ಸುಶ್ಮಿತಾ, ಅಳಿಯಂದಿರಾದ ಸುರೇಂದ್ರ, ಮಹೇಶ್ ಮತ್ತು ಬಂಧು ಬಳಗವನ್ನು ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಮಧ್ಯಾಹ್ನ 4–00 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಿತು ಎಂದು ಹೇಳಲಾಗಿದೆ.


ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡ ರವರಿಗೆ
ಜನ್ಮ ದಿನದ ಶುಭಾಶಯಗಳು
ಶುಭಕೋರುವವರು: ಜಿ.ಡಿ.ಹರೀಶ್‌ಗೌಡ ಅಭಿಮಾನಿ ಬಳಗ, ಕೆ.ಆರ್.ಮಿಲ್, ಮೈಸೂರು

ಮೂರನೇ ಪುಟದಿಂದ

ಶೋಧ ನಡೆಯುತ್ತಿದೆ...

ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಗುಂಡಿನ ದಾಳಿ ಘಟನೆ ಸಂಭವಿಸಿದೆ. ಮೇಲ್ನೋಟಕ್ಕೆ, ಕಾನ್ಫಿಡೆಂಟ್ ಗ್ರೂಪ್‌ನ ಅಧ್ಯಕ್ಷ ಮತ್ತು ಸಂಸ್ಥಾಪಕ ಸಿಜೆ ರಾಯ್ ಗುಂಡು ಹಾರಿಸಿಕೊಂಡು ಸಾವನ್ನಪ್ಪಿದ್ದಾರೆ ಎಂದು ತೋರುತ್ತದೆ. ಅವರ ಮೃತದೇಹ ಎಚ್‌ಎಸ್‌ಆರ್ ಲೇಔಟ್‌ನ ನಾರಾಯಣ ಆಸ್ಪತ್ರೆಯಲ್ಲಿದೆ ಎಂದು ಸಿಂಗ್ ಸ್ಥಳ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು. ಇಂದು ಮಧ್ಯಾಹ್ನ 3 ರಿಂದ 3.30 ರ ನಡುವೆ ಈ ಘಟನೆ ನಡೆದಿದೆ. ಈ ಸಂಬಂಧ ಕಾನ್ಫಿಡೆಂಟ್ ಗ್ರೂಪ್‌ನ ನಿರ್ದೇಶಕರು ದೂರು ದಾಖಲಿಸಿದ್ದಾರೆ. ಅದರ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ ಎಂದರು.

ನಮ್ಮ ಆರಂಭಿಕ ವರದಿಗಳ ಪ್ರಕಾರ, ಕಳೆದ ಮೂರು ದಿನಗಳಿಂದ ಶೋಧ ಕಾರ್ಯ ನಡೆಯುತ್ತಿದೆ. ಇಂದು ಸೇರಿದಂತೆ ಐ-ಟಿ ತಂಡ ಅವರನ್ನು ವಿಚಾರಣೆ ನಡೆಸುತ್ತಿದೆ. ಪೊಲೀಸ್ ತನಿಖೆಯಿಂದ ಮಾತ್ರ ನಿಜವಾಗಿಯೂ ಅಲ್ಲಿ ಏನಾಯಿತು ಎಂಬು ದನ್ನು ಬಹಿರಂಗಪಡಿಸಲು ಸಾಧ್ಯ ಎಂದು ಸಿಂಗ್ ಹೇಳಿದರು.

ಈ ಪ್ರಕರಣವನ್ನು ಆತ್ಮಹತ್ಯೆಗೆ ಪ್ರಚೋದನೆ ಎಂದು ಪರಿಗಣಿಸಬಹುದೇ ಎಂದು ಕೇಳಿದಾಗ, ದೂರಿನ ಆಧಾರದ ಮೇಲೆ ತನಿಖೆ ಮುಂದುವರಿಯುತ್ತದೆ ಎಂದು ಅವರು ಹೇಳಿದರು. ಕೇರಳದ ಐ-ಟಿ ತಂಡದ ನೇತೃತ್ವದಲ್ಲಿ ಶೋಧ ಕಾರ್ಯ ನಡೆಸಲಾಗಿದ್ದು, ಪೊಲೀಸರು ಇನ್ನೂ ಅವರೊಂದಿಗೆ ಮಾತನಾಡಿಲ್ಲ ಎಂದು ಸಿಂಗ್ ತಿಳಿಸಿದರು.

ಪ್ರಸ್ತುತ, ಯಾವುದೇ ಐ-ಟಿ ಅಧಿಕಾರಿಗಳು ಸ್ಥಳದಲ್ಲಿ ಇಲ್ಲ. ನಾವು ಅವರೊಂದಿಗೆ ಮಾತನಾಡುತ್ತೇವೆ ಎಂದು ಅವರು ಹೇಳಿದರು. ರಾಯ್ ಅವರ ಕುಟುಂಬ ಸದಸ್ಯರಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದ್ದು, ಅವರು ದುಬೈನಿಂದ ಇಂದು ರಾತ್ರಿ ಇಲ್ಲಿಗೆ ಆಗಮಿಸುವ ನಿರೀಕ್ಷೆಯಿದೆ ಎಂದಿದ್ದಾರೆ.

ಸಿ.ಜೆ.ರಾಯ್ ಆತ್ಮಹತ್ಯೆ



ಪತ್ನಿ ಲಿನಿ ರಾಯ್, ಪುತ್ರ ರೋಹಿತ್ ರಾಯ್, ಪುತ್ರಿ ರಿಯಾ ರಾಯ್ ಅವರೊಂದಿಗೆ ಸಿ.ಜೆ. ರಾಯ್.

ಅಧಿಕಾರಿಗಳು ದಾಳಿ ನಡೆಸುವ ವೇಳೆ ಅಗತ್ಯವಿರುವ ಎಲ್ಲಾ ವಸ್ತುಗಳನ್ನ ವಶಕ್ಕೆ ಪಡೆಯುತ್ತಾರೆ. ಆದರೆ ರಾಯ್ ಬಳಿಯಿದ್ದ ಗನ್ ವಶಕ್ಕೆ ಪಡೆಯದಿರುವ ಬಗ್ಗೆ ಅನುಮಾನ ಹುಟ್ಟುಹಾಕಿದೆ. ಘಟನೆ ಬಳಿಕ ಬೆಂಗಳೂರು ಕೇಂದ್ರ ವಿಭಾಗ ಡಿಸಿಪಿ ಅಕ್ಷಯ್ ಅವರು ಐಟಿ ಅಧಿಕಾರಿಗಳ ವಿಚಾರಣೆ ನಡೆಸಿದ್ದಾರೆ. ನಂತರ ಅಧಿಕಾರಿಗಳು ದಾಳಿ ವೇಳೆ ಸಿಕ್ಕ ದಾಖಲೆಗಳನ್ನು ವಶಕ್ಕೆ ಪಡೆದು ತೆರಳಿದ್ದಾರೆ. ಮುಂದಿನ ತನಿಖೆ ಪ್ರಗತಿಯಲ್ಲಿದೆ.

ಭಾರತದ ಶ್ರೀಮಂತ ಉದ್ಯಮಿಗಳಲ್ಲಿ ಒಬ್ಬರು: ಸಿ.ಜೆ.ರಾಯ್ ಅವರು ಕಾನ್ಫಿಡೆಂಟ್ ಗ್ರೂಪ್‌ನ ಅಧ್ಯಕ್ಷ ಮತ್ತು ಸಂಸ್ಥಾಪಕರಾಗಿದ್ದರು. ಅವರು ಭಾರತದ ಶ್ರೀಮಂತ ಉದ್ಯಮಿಗಳಲ್ಲಿ ಒಬ್ಬರಾಗಿದ್ದು, ಹಲವು ಕ್ಷೇತ್ರಗಳಲ್ಲಿ ತಮ್ಮ ವ್ಯಾಪಾರ ಸಾಮ್ರಾಜ್ಯವನ್ನ ವಿಸ್ತರಿಸಿದ್ದಾರೆ. ಅಲ್ಲದೇ, ಅವರು ಸ್ಲೋವಾಕ್ ಗಣರಾಜ್ಯದ ಗೌರವ ಕಾನ್ಸಲ್ ಆಗಿಯೂ ಕರ್ನಾಟಕ ಮತ್ತು ಕೇರಳದಲ್ಲಿ ಸೇವೆ ಸಲ್ಲಿಸಿದ್ದರು. ಆಟೋರಿಕ್ಷಾ ಚಾಲಕನಾಗಿ ವೃತ್ತಿ ಆರಂಭಿಸಿದ ರಾಯ್, ಈಗ ಬಹುಕೋಟಿ ಆಸ್ತಿಯ ಒಡೆಯರಾಗಿದ್ದಾರೆ. ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಜನಾನು ರಾಗಿಯೂ ಆಗಿದ್ದರು. ಬಡವರ ಬಗ್ಗೆ ಅತೀವ ಕಳಕಳಿಯುಳ್ಳ ಇವರು, ಅದೆಷ್ಟೋ ಜನರ ಜೀವನಕ್ಕೆ ದಾರಿ ಮಾಡಿಕೊಟ್ಟಿದ್ದಾರೆ. ಪ್ರತಿಯೊಂದು ವಿಚಾರದಲ್ಲೂ ಸಾಮಾಜಿಕ ಜಾಲ ತಾಣದಲ್ಲಿ ಬಿಂಬಿಸಿಕೊಳ್ಳುತ್ತಿದ್ದ ಇವರು, ತಮ್ಮ ಆಸಕ್ತಿಯಿಂದಲೇ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಕಾರುಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ರಾಯ್, ದುಬೈ ಮತ್ತು ಭಾರತದಲ್ಲಿ ಹಲವು ದುಬಾರಿ ಐಷಾರಾಮಿ ಮತ್ತು ಸ್ಪೋರ್ಟ್ಸ್ ಕಾರುಗಳನ್ನೂ ಹೊಂದಿದ್ದರು. ರೋಲ್ಸ್ ರಾಯ್ಸ್‌ಗಳು, ಲ್ಯಾಂಬೋರ್ಗಿನಿಗಳು, ಮತ್ತು ಬಗ್ಗಾಟಿ ವೆರಾನ್‌ನಂತಹ ಕಾರುಗಳು ಅವರ ಸಂಗ್ರಹವಾಗಿವೆ ಎಂದು ತಿಳಿದು ಬಂದಿದೆ.

11 ಸಿನಿಮಾ ನಿರ್ಮಾಣ: ಕಾನ್ಫಿಡೆಂಟ್ ಗ್ರೂಪ್ ಕೇವಲ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ. ಡಾ. ರಾಯ್ ಅವರ ಬಹುಮುಖ ಪ್ರತಿಭೆ ಮತ್ತು ಆಸಕ್ತಿಗಳು ಸಂಸ್ಥೆಯನ್ನ ವಿವಿಧ ಕ್ಷೇತ್ರಗಳಲ್ಲಿ ವಿಸ್ತರಿಸಲು ಕಾರಣವಾಗಿವೆ. ಮಲಯಾಳಂ ಮತ್ತು ಕನ್ನಡದಲ್ಲಿ 11 ಚಿತ್ರಗಳನ್ನು ಇವರು ನಿರ್ಮಿಸಿದ್ದಾರೆ. 'ಮರಕ್ಕಾರ್' ಎಂಬ ಅತೀ ದೊಡ್ಡ ಬಜೆಟ್‌ನ ಮಲಯಾಳಂ ಚಿತ್ರವನ್ನು ಸಹ ನಿರ್ಮಿಸಿದ್ದಾರೆ. 2006ರಲ್ಲಿ, 'ಐಡಿಯಾ ಸ್ಟಾರ್ ಸಿಂಗರ್' ಜನಪ್ರಿಯ ಟಿವಿ ಕಾರ್ಯಕ್ರಮಕ್ಕೆ ಹಣಕಾಸು ಒದಗಿಸುವ ಮೂಲಕ ಕಾನ್ಫಿಡೆಂಟ್ ಗ್ರೂಪ್ ಅನ್ನು ಪ್ರಚಾರ ಮಾಡುವ ಅವರ ಆಲೋಚನೆ ಯಶಸ್ವಿಯಾಗಿತ್ತು.

ಅಧಿಕಾರಿಗಳು ಏನೂ ಕ್ರಮ ಕೈಗೊಂಡಿಲ್ಲ

ವಿರುದ್ಧ ಎಫ್‌ಐಆರ್ ಮಾಡಿಲ್ಲ ಎಂದು ತಿಳಿಸಿದರು.

ಕಾಯ್ದೆ ಬಗ್ಗೆ ಅಪಪ್ರಚಾರ: 2013ರ ಬಜೆಟ್‌ನಲ್ಲಿ ಮನ್ರೇಗಾ ಯೋಜನೆಗೆ 33 ಸಾವಿರ ಕೋಟಿ ಹಣವನ್ನು ಮೀಸಲಿಡಲಾಗಿತ್ತು. ಪ್ರಸ್ತುತ 2.86 ಲಕ್ಷ ಕೋಟಿ ಮೀಸಲಿಡಲಾಗಿದೆ. ವಿಬಿ ಜಿ-ರಾಮ್ ಜಿ ಕಾಯ್ದೆಯಿಂದ 100 ದಿನಗಳ ಉದ್ಯೋಗ ಖಾತ್ರಿ ಇರುವುದಿಲ್ಲ, ಸುಗ್ಗಿ ಕಾಲದಲ್ಲಿ ಕೆಲಸ ಸಿಗುವುದಿಲ್ಲ, ಮೋದಿ ಸರ್ಕಾರವೇ ಎಲ್ಲವನ್ನೂ ನಿರ್ಧರಿಸುತ್ತದೆ ಎಂದೆಲ್ಲಾ ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ಉದ್ಯೋಗ ಖಾತ್ರಿ ದಿನಗಳನ್ನು 125 ದಿನಕ್ಕೆ ಏರಿಕೆ ಮಾಡುವುದರ ಜೊತೆಗೆ ಬೇಡಿಕೆಗೆ ಅನುಗುಣವಾಗಿ ಉದ್ಯೋಗ ಸೃಷ್ಟಿಗೆ ಅವಕಾಶ ನೀಡಲಾಗಿದೆ. ಇನ್ನೂ 60 ದಿನಗಳ ರಜಾ ಘೋಷಣೆಗೆ ರಾಜ್ಯ ಮಟ್ಟದಲ್ಲಿ ಅವಕಾಶ ನೀಡಿರುವುದರಿಂದ ಕೃಷಿ ಚಟುವಟಿಕೆಗೆ ಅನುಕೂಲವಿದೆ. ಶಾಶ್ವತವಾದ ಆಸ್ತಿಗಳ ನಿರ್ಮಾಣದ ಜೊತೆಗೆ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿರುವ ಯೋಜನೆಗಳ ಕಾಮಗಾರಿ ಸ್ಥಳೀಯ ಗ್ರಾಮ ಸಭೆಗಳಲ್ಲೇ ನಿರ್ಧರಿತವಾಗುತ್ತದೆ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ ಅನುದಾನದ ಶೇ.40ರಷ್ಟು ಭಾಗವನ್ನು ಭರಿಸಬೇಕಿರುವ ಕಾರಣಕ್ಕೆ ಈ ಕಾಯ್ದೆಯನ್ನು ವಿರೋಧಿಸಲಾಗುತ್ತಿದೆ ಎಂದರು.

ಮನುಷ್ಯನಿಗೆ ನಂಬಿಕೆ ಅಷ್ಟೇ ಮುಖ್ಯ...!

ನಿಷ್ಠೆಯೊಂದೆ. ದೇವನೊಬ್ಬ ನಾಮ ಹಲವು. ಇದರ ಮೇಲೆ ನಂಬಿಕೆ ಇಟ್ಟು ಇಂತಹ ಭವ್ಯ ಸಭೆಯಲ್ಲಿ ನಾವು ಸೇರಿದ್ದೇವೆ. ನಾನು ಶ್ರೀ ಗಂಗಾಧರ ಅಜ್ಜಯ್ಯ ಅವರ ಶಿಷ್ಯ, ಅವರು ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಸಿಗಲಿ ಎಂಬ ಸಂದೇಶ ಕೊಟ್ಟಿದ್ದಾರೆ. ನಾನು ಅದನ್ನು ಪಾಲನೆ ಮಾಡಿಕೊಂಡು ಬರುತ್ತಿದ್ದೇನೆ. ಅಮ್ಮನ ನೆನಪು ಪ್ರೀತಿಯ ಮೂಲ, ದೇವರ ನೆನಪು ಭಕ್ತಿಯ ಮೂಲ, ಗುರುವಿನ ನೆನಪು ಜ್ಞಾನದ ಮೂಲ. ಈ ಮೂರರ ನೆನಪು ಮನುಷ್ಯತ್ವದ ಮೂಲ. ಮನುಷ್ಯತ್ವ ಮೋಕ್ಷಕ್ಕೆ ಮೂಲ, ಮೋಕ್ಷ ಪಡೆಯಲು ಲಕ್ಷಾಂತರ ಜನ ಶ್ರೀಗಳ ಮಾತು ಕೇಳಲು ಬಂದಿದ್ದೀರಿ.

ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ, ಈ ಹುಟ್ಟು ಸಾವಿನ ನಡುವೆ ನಾವು ಏನು ಮಾಡುತ್ತೇವೆ ಎಂಬುದು ಬಹಳ ಮುಖ್ಯ. ಉಳಿ ಪೆಟ್ಟು ಬೀಳದೆ ಕಲ್ಲು ಶಿಲೆಯಾಗುವುದಿಲ್ಲ. ನೇಗಿಲಿನಿಂದ ಉಳುಮೆ ಮಾಡದೇ ಯಾವುದೇ ಭೂಮಿ ಮಟ್ಟ ಮಾಡಲು ಆಗುವುದಿಲ್ಲ. ನಿಮ್ಮ ಬದುಕಿನಲ್ಲಿ ನೀವು ಶ್ರಮಪಟ್ಟರೆ ಮಾತ್ರ ಫಲ ಅನುಭವಿಸಲು ಸಾಧ್ಯ ಎಂದರು.

ದೇವರು ನಮಗೆ ವರ, ಶಾಪ ನೀಡುವುದಿಲ್ಲ. ಕೇವಲ ಅವಕಾಶ ಮಾತ್ರ ನೀಡುತ್ತಾನೆ. ನಮಗೆ ಸಿಕ್ಕ ಅವಕಾಶದಲ್ಲಿ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯ. ನಮಗೆ ಅವಕಾಶ ಸಿಕ್ಕಾಗ ಸಾಕ್ಷಿಗುಡ್ಡೆ ಬಿಟ್ಟು ಹೋಗಬೇಕು. ಅಲೆಗ್ಸಾಂಡರ್ ಭಾರತಕ್ಕೆ ಬರುವಾಗ ಅವರ ಗುರು ಭಾರತದಿಂದ ಐದು ವಸ್ತು ತೆಗೆದುಕೊಂಡು ಬಾ, ಆಗ ನೀನು ಇಡೀ ಭಾರತ ಗೆದ್ದಂತೆ ಎಂದು ಹೇಳುತ್ತಾನೆ. ಆ ಐದು ವಸ್ತುಗಳೆಂದರೆ, ರಾಮಾಯಣ, ಮಹಾಭಾರತ ಗ್ರಂಥ, ಗಂಗಾ ಜಲ, ಕೃಷ್ಣನ ಕೊಳಲು, ತತ್ವಜ್ಞಾನ ತಂದರೆ ಇಡೀ ಭಾರತವನ್ನೇ ತಂದಂತೆ ಎಂದಿದ್ದರು. ರಾಜಕೀಯದಲ್ಲಿ ಧರ್ಮ ಇರಬೇಕು. ಧರ್ಮದಲ್ಲಿ ರಾಜಕಾರಣ ಇರಬಾರದು. ಯಾವುದೇ ಧರ್ಮ ಬೇರೆಯವರಿಗೆ ತೊಂದರೆ ಮಾಡು ಎಂದು ಹೇಳುವುದಿಲ್ಲ. ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನ ಸಂಪದ, ಜ್ಞಾನ ಶಕ್ತಿ ಸ್ವರೂಪಸ್ಯ ದೀಪ ಜ್ಯೋತಿ ಪ್ರಕಾಶಿತ. ಎಲ್ಲರಿಗೂ ಮಂಗಳವಾಗಲಿ, ಶುಭವಾಗಲಿ, ಆರೋಗ್ಯವಾಗಿರಿ ಎಂಬುದಾಗಿ ಹಾರೈಸಿ ಶ್ರೀಗಳು ಹಚ್ಚಿದ ಜ್ಯೋತಿ ಬೆಳಗುತ್ತಿದೆ. ನಾನು ಮಠದ ಅಭಿಮಾನಿಯಾಗಿ, ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದೇನೆ. ಗುರುಗಳ ಮಾರ್ಗದರ್ಶನವನ್ನು ನಾವು ಯಾವ ರೀತಿ ಪಡೆದುಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ ಎಂದು ತಿಳಿಸಿದರು.

FORM NO. URC-2

Advertisement giving notice about registration under Part I of Chapter XXI [Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application is proposed to be made after twenty-one days to the Registrar at Bangalore that KAFFEEKLASTCH HOSPITALITY LLP may be registered under Part I of Chapter XXI of the Companies Act 2013, as a company limited by shares in the name of KAFFEEKLASTCH HOSPITALITY PRIVATE LIMITED.
2. The principal objects of the company are as follows: To conduct the business of confectionery, pastries, handcrafted sourdough breads and European-style pastries, offer a wide range of fine pastries, including classic croissants, eclairs, doughnuts, and tarts that blend German, French, and Italian techniques and activity incidental to restaurants, hotels, accommodation and hospitality.
3. A copy of the draft memorandum and articles of association of the proposed company may be inspected at the office at 636, 4th Stage Vijaynagar, 1st Phase, Mysuru, Karnataka, India, 570030.
4. Notice is hereby given that any person objecting to this application may communicate their objection in writing to the Registrar at 'E' Wing, 2nd Floor, Kendriya Sadana, Koramangala, Bengaluru - 560034, Karnataka, within twenty-one days from the date of publication of this notice, with a copy to the KAFFEEKLASTCH HOSPITALITY LLP at its registered office 636, 4th Stage Vijaynagar, 1st Phase, Mysuru, Karnataka, India, 570030.

Place: Mysore

Dated this 31st day of January 2026

For and on behalf of
KAFFEEKLASTCH HOSPITALITY LLP
Dina Weber
Designated Partner

PAPER PUBLICATION

This is to inform the general public at large that, our client Smt. MANJULA, aged about 72 years, D/o Late. K. Mariyappa, residing at No.LIG-47, K.H.B. Colony, 3rd Stage, Kuvempunagara, Mysuru-570023 hereby notify the public as follows: Our client obtained a decree for partition of the schedule property in R.A.No.322/2019 on the file of Principal District Judge, Mysuru, where under our client has been given with a share of 30/243 in the schedule property, Likewise the sisters of our client namely, M. Sulochana, M. Nandini and Triveni are also been given with similar share in the schedule property. Our client along with her sisters have filed a petition for physical division of the schedule property in F.D.P. No.68/2025 which is pending on the file of the Hon'ble II Addl. Senior Civil Judge, Mysuru. In the meantime it is learnt that there are attempts to make construction over the schedule property by third parties. Any such effort will be seriously resisted and if such constructions are being made in the property to be allocated to share of our client, the same will be demolished.

This is for the interest of the public at large.

SCHEDULE

The land bearing Sy.No.181/4, New Sy.No.181/BL5, New Sy.No.266, measuring 5 Acres of land situated at K.Hemmanahalli Village, Yelawala Hobli, Mysuru Taluk, bounded on :East by: Road and property of Devara Gudda Setty, West by: Land of Harish, North by : Property of Chandrashekhar, South by : Road.

Sd/- O. Shama Bhat, B.A., LL.B
O. Sathisha, B.Sc., LL.B
Advocates
20/C, nd Floor Near Airlines Hotel
Jayalakshmi Vilas Road,
Chamarajapuram, MUSURU - 570005
Mob: 9900788245

Date : 24-01-2026


ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡ ರವರಿಗೆ
ಜನ್ಮ ದಿನದ ಶುಭಾಶಯಗಳು
ಶುಭಕೋರುವವರು : ದುರ್ಗಾ ಗ್ರೂಪ್ಸ್
VISMAYA
8050302424



ಜಿ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡ ರವರಿಗೆ
ಜನ್ಮ ದಿನದ ಶುಭಾಶಯಗಳು
ಶುಭಕೋರುವವರು:
ಎಸ್. ಶ್ರೀಕಾಂತ್ ರವರು
ಸಮಾಜ ಸೇವಕರು. ಹಾಗೂ ಮಾಲೀಕರು,
ಎಸ್.ಆರ್ ವೈನ್ಸ್ ಜಯಪುರ. ಮತ್ತು
ಎಸ್.ಡಿ ವೈನ್ಸ್ ತಳೂರು ಸರ್ಕಲ್. ಮತ್ತು ಜಯಪುರ
ಗ್ರಾಮಸ್ಥರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಜನವರಿ 31 ಶನಿವಾರ 2026

ಪುಟಗಳು: IV

ಮೈಸೂರಿನ ರಾಸಾಯನಿಕ ಕಾರ್ಖಾನೆ ಮೇಲೆ ದೆಹಲಿಯ ಎನ್‌ಸಿಬಿ ದಾಳಿ ಫಾಲೋ ಅಪ್ ಅಷ್ಟೇ...

ಮೈಸೂರಿನಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ

● ದಾಳಿ ವೇಳೆ ಇಲ್ಲಿ ಡ್ರಗ್ಸ್ ಪತ್ತೆಯಾಗಿಲ್ಲ ● ಡ್ರಗ್ಸ್ ತಯಾರಿಕೆಯ ಕಚ್ಚಾ ವಸ್ತು ಕೂಡ ಸಿಕ್ಕಿಲ್ಲ ● ಬೇರೆ ರಾಜ್ಯದಲ್ಲಿ ಸೆರೆ ಸಿಕ್ಕವರ ಸಂಬಂಧಿಗಳು ಮೈಸೂರಿನಲ್ಲಿದ್ದಾರೆ ● ಕೋರ್ಟ್‌ಗೆ ಹೀಗೇ ವಿಚಾರಣೆ ಮಾಡಿ ಎಂದು ಹೇಳಲು ಸಾಧ್ಯವಿಲ್ಲ

ಮೈಸೂರು, ಜ.30(ಬಿಎಲ್‌ಯು)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆ ಮೇಲೆ ದೆಹಲಿಯ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೊ (ಎನ್‌ಸಿಬಿ) ನಡೆಸಿದ ದಾಳಿಯು ಬೇರೊಂದು ರಾಜ್ಯದಲ್ಲಿ ಡ್ರಗ್ಸ್ ವಶಪಡಿಸಿಕೊಂಡ ತನಿಖೆಯ ಮುಂದುವರೆದ ಭಾಗ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.



ಮೈಸೂರಿನಲ್ಲಿ ಶುಕ್ರವಾರ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಸಂಕಲ್ಪ್ ಗ್ರೂಪ್ ಅಭಿವೃದ್ಧಿಪಡಿಸುತ್ತಿರುವ "42 ಕಾಳಿದಾಸ" ಗ್ಲೋಬಲ್ ಟೆಕ್ ಪಾರ್ಕ್ ನಿರ್ಮಾಣಕ್ಕೆ ಇಂದು ಭೂಮಿ ಪೂಜೆ ನೆರವೇರಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೆಹಲಿಯ ಎನ್ ಸಿಬಿ ಅಧಿಕಾರಿಗಳು ಮೈಸೂರಿನ ರಾಸಾಯನಿಕ ಕಾರ್ಖಾನೆ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಯಾವುದೇ ರೀತಿಯ ಡ್ರಗ್ಸ್ ಪತ್ತೆಯಾಗಿಲ್ಲ ಎಂದು ಸ್ಪಷ್ಟನೆ ನೀಡಿದರು.

ಬೇರೊಂದು ರಾಜ್ಯದಲ್ಲಿ ನಡೆದ ದಾಳಿಯ ಫಾಲೋ ಅಪ್ ಇಲ್ಲಿ ಮಾಡಲಾಗಿದೆ ಅಷ್ಟೆ ಅಲ್ಲಿ ಯಾವುದೇ ರೀತಿಯ ಮಾದಕ ವಸ್ತುಗಳು ಸಿಕ್ಕಿಲ್ಲ ಎಂದು ಡಾ.ಪರಮೇಶ್ವರ್ ಅವರು ಪುನರುಚ್ಚರಿಸಿದರು. ಅದು ಫಿನಾಯಿಲ್ ತಯಾರು ಮಾಡುವ ಕಾರ್ಖಾನೆಯಾಗಿದ್ದು, ಡ್ರಗ್ಸ್ ತಯಾರು ಮಾಡುವ ಯಾವುದೇ ರೀತಿಯ ರಾ ಮೆಟಿರಿಯಲ್ಸ್ (ಕಚ್ಚಾ ವಸ್ತುಗಳು) ಇಲ್ಲಿ ಸಿಕ್ಕಿಲ್ಲ ಎಂದು ಹೇಳಿದರು.

ಬೇರೆ ರಾಜ್ಯದಲ್ಲಿ ಸಿಕ್ಕ ಆರೋಪಿಗಳ ಸಂಬಂಧಿಕರು ಇಲ್ಲಿರುವ ಕಾರಣದಿಂದ ಅಲ್ಲಿನ ಪೊಲೀಸರು ಇಲ್ಲಿ ಬಂದು ವಿಚಾರಣೆ ಮಾಡಿದ್ದಾರೆ. ಆದರೆ ಇಲ್ಲಿ ಯಾರನ್ನು ವಶಕ್ಕೆ ಪಡೆದಿಲ್ಲ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಹೀಗೇ ವಿಚಾರಣೆ ಮಾಡಿ ಎಂದು ಹೇಳಲಾಗದು: ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಕೂಗಿದ ಪ್ರಕರಣಗಳು ಬಾಕಿ ಇರುವ ಬಗ್ಗೆ ಸದನದಲ್ಲಿ ಶಾಸಕರು ಪ್ರಶ್ನೆ ಮಾಡಿದ್ದಾರೆ. ಆದರೆ ನ್ಯಾಯಾಲಯದಲ್ಲಿ ಈ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಯುತ್ತಿದೆ. ಹೀಗಿರುವಾಗ ಹೀಗೆ ವಿಚಾರಣೆ ಮಾಡಿ ಎಂದು ತಾಕೀತು ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಮಾಹಿತಿ ಇಲ್ಲ: ಕರ್ನಾಟಕ ಮತ್ತು ಗೋವಾ ಗಡಿ ಚೋರ್ಲಾ ಘಾಟ್‌ನಲ್ಲಿ 400 ಕೋಟಿ ದರೋಡೆಯಾಗಿದೆ ಎಂಬ ವಿಚಾರದ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ನಮ್ಮ ಪೊಲೀಸರು ಈ ಪ್ರಕರಣದ ವಿಚಾರಣೆಯಲ್ಲಿ ಭಾಗಿಯಾಗಿಲ್ಲ. ಈ ಬಗ್ಗೆ ತನಿಖೆ ನಡೆಸುತ್ತಿರುವ ಮಹಾರಾಷ್ಟ್ರದ ಎಸ್‌ಐಟಿ ವರದಿ ನೀಡಿದ ನಂತರ ಹೆಚ್ಚಿನ ವಿವರ ತಿಳಿಯಲಿದೆ ಎಂದು ಡಾ.ಪರಮೇಶ್ವರ್ ಹೇಳಿದರು.

ಓಲ್ಡ್ ಅಂಡ್ ನ್ಯೂ ಫ್ರೆಂಡ್ಸ್ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ


ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ರಾಜೀನಾಮೆ ನೀಡಿದ್ದಾರೆಂದು ಅವರ ಓಲ್ಡ್ ಅಂಡ್ ನ್ಯೂ ಫ್ರೆಂಡ್ಸ್ ಸುಳ್ಳು ಸುದ್ಧಿ ಹಬ್ಬಿಸಿದ್ದಾರೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಜಾರ್ಜ್ ಅವರು ರಾಜೀನಾಮೆ ನೀಡಿದ್ದರು, ರಾಜೀನಾಮೆ ನೀಡಲು ಮುಂದಾಗಿದ್ದರು ಎಂಬುದೆಲ್ಲಾ ಸುಳ್ಳು. ಬೇರೆ ಬೇರೆ ಕಾರಣಕ್ಕೆ ಕೆಲವು ಸ್ನೇಹಿತರು ವದಂತಿ ಹಬ್ಬಿಸಿದ್ದಾರೆ. ಆದರೆ ವಾಸ್ತವವಾಗಿ ಇಂತಹ ಯಾವುದೇ ಬೆಳವಣಿಗೆ ಆಗಿಲ್ಲ ಎಂದರು.

ಸುಳ್ಳು ಸುದ್ದಿ ಹಬ್ಬಿಸಿರುವ ಅವರ ಸ್ನೇಹಿತರು ಯಾರು ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಡಾ. ಪರಮೇಶ್ವರ್, ಬಹಳಷ್ಟು ಸ್ನೇಹಿತರು ಇದ್ದಾರೆ, ಓಲ್ಡ್ ಅಂಡ್ ನ್ಯೂ ಫ್ರೆಂಡ್ಸ್ ಎಂದರು. ಆದರೆ ಜಾರ್ಜ್ ಅವರು ರಾಜೀನಾಮೆ ನೀಡಿಲ್ಲ, ನೀಡಲು ಮುಂದಾಗಿರಲಿಲ್ಲ. ಇದನ್ನು ಸ್ವತಃ ಜಾರ್ಜ್ ಅವರೇ ಸ್ಪಷ್ಟನೆ ನೀಡಿದ್ದಾರೆ. ಇಂತಹ ಊಹಾಪೋಹವನ್ನು ಯಾರೂ ನಂಬಬಾರದು ಎಂದು ಡಾ.ಪರಮೇಶ್ವರ್ ಅಭಿಪ್ರಾಯಪಟ್ಟರು.

ಶಿಥಿಲಗೊಂಡಿದ್ದ ಮೈಸೂರು ಅರಮನೆ ಕೋಟೆ ಗೋಡೆ ದುರಸ್ತಿ ಆರಂಭ

ಸೋಮೇಶ್ವರ ದೇವಸ್ಥಾನದ ಬಳಿ ಬಿರುಕು ಬಿಟ್ಟಿದ್ದ ಕೋಟೆ ಗೋಡೆ



ಮೈಸೂರು ಅರಮನೆಯ ಸೋಮೇಶ್ವರ ದೇವಸ್ಥಾನದ ಬಳಿ ಬಿರುಕು ಬಿಟ್ಟು, ಶಿಥಿಲಗೊಂಡಿದ್ದ ಕೋಟೆ ಗೋಡೆಯನ್ನು ದುರಸ್ಥಿ ಮಾಡುವ ಕಾರ್ಯ ಆರಂಭಿಸಲಾಗಿದೆ.

ಮೈಸೂರು, ಜ.30(ಬಿಎಲ್‌ಯು)– ಸೋಮೇಶ್ವರ ದೇವಸ್ಥಾನ ಬಳಿ ಬಿರುಕು ಬಿಟ್ಟಿರುವ ವಿಶ್ವ ವಿಖ್ಯಾತ ಮೈಸೂರು ಅರಮನೆಯ ಕೋಟೆ ಗೋಡೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಸೋಮೇಶ್ವರ ದೇವಸ್ಥಾನ ಬಳಿಯ ಕೋಟೆ ಗೋಡೆ ಬಿರುಕು ಬಿಟ್ಟಿತ್ತು. ಮುಂದಿನ ಮಳೆಗಾಲದ ವೇಳೆ ಕೋಟೆ ಹಾಗೂ ಭತೇರಿ (ಕೋಟೆ ಗೋಡೆ ಮೇಲೆ ಫಿರಂಗಿ ಇಡುವ ಸ್ಥಳ) ಮತ್ತಷ್ಟು ಶಿಥಿಲಗೊಳ್ಳುವ ಸಾಧ್ಯತೆಯೂ ಇತ್ತು.

ಈ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಮಂಡಳಿಯ ಸಭೆಯಲ್ಲಿ ಕೋಟೆ ಗೋಡೆ ದುರಸ್ಥಿ ಮಾಡುವ ವಿಚಾರ ಮಂಡಿಸಿ ಚರ್ಚೆ ಮಾಡಲಾಯಿತು. ನಂತರ ದುರಸ್ತಿ ಮಾಡಲು ಅನುಮೋದನೆ ಕೂಡ ಪಡೆಯಲಾಯಿತು. ತರುವಾಯ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಆಹ್ವಾನಿಸಿ ಬಿ.ಹೆಚ್. ರೇವಣಿಪ್ರಸಾದ್ ಕನ್ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಗೆ ಕಾಮಗಾರಿ ನಡೆಸಲು ಕಾರ್ಯಾದೇಶ ನೀಡಲಾಯಿತು.

ಗುತ್ತಿಗೆ ಪಡೆದಿರುವ ಕಂಪನಿ ಕೋಟೆ ಗೋಡೆ ದುರಸ್ಥಿ ಮಾಡುವ ಕಾಮಗಾರಿಯನ್ನು ಈಗಾಗಲೇ ಆರಂಭಿಸಿದ್ದು, ಇನ್ನು 20 ದಿನದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಿದೆ ಅರಮನೆಯ ಪಾರಂಪರಿಕತೆಗೆ ಧಕ್ಕೆ ಬಾರದಂತೆ ಕೋಟೆ ಗೋಡೆ ದುರಸ್ತಿಪಡಿಸಿ ಅರಮನೆ ಅಂದ ಮತ್ತು ಭದ್ರತೆಯನ್ನು ಕಾಪಾಡಲಾಗುವುದು ಎಂದು ಮೈಸೂರು ಅರಮನೆ ಮಂಡಳಿ ತಿಳಿಸಿದೆ.

ಜಿಎಸ್‌ಟಿ ದರ ಇಳಿಕೆಗೆ ಆಗ್ರಹ

ಮೈಸೂರು, ಜ.30– ಇತ್ತೀಚಿನ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿ ದರದಲ್ಲಿ ಗಣನೀಯ ಏರಿಕೆಯಿಂದ ಗ್ರಾಹಕರಿಗೆ ಹೊರೆ ಆಗುತ್ತಿದೆ. ಶೇ.3ರಷ್ಟು ಹೊಂದಿದ ಜಿಎಸ್‌ಟಿ ದರವನ್ನು ಶೇ.1ಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಇಳಿಸಬೇಕು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಉಪಾಧ್ಯಕ್ಷ ವಿಕ್ರಂ ಅಯ್ಯಂಗಾರ್ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಜಿಎಸ್‌ಟಿ ದರ ಹೆಚ್ಚಳದಿಂದ ಚಿನ್ನ, ಬೆಳ್ಳಿ ಬೆಲೆ ಅಧಿಕವಾಗಿದೆ. ಇದರಿಂದ ಗ್ರಾಹಕರು ಹಾಗೂ ವ್ಯಾಪಾರಸ್ಥರಿಗೆ ತೊಂದರೆ ಆಗುತ್ತಿದೆ. ಸರ್ಕಾರಗಳು ಈ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ದೆಹಲಿ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋದಿಂದ ಮೈಸೂರು ಸೇರಿದಂತೆ ಅಂತಾರಾಜ್ಯ ಡ್ರಗ್ಸ್ ಜಾಲ ಬಯಲು

ನವದೆಹಲಿ: ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆ ಮೇಲಿನ ದಾಳಿ ಸೇರಿದಂತೆ ಅಂತಾರಾಜ್ಯ ಮಾದಕ ದ್ರವ್ಯ ಜಾಲ ಪ್ರಕರಣದಲ್ಲಿ ಈವರೆಗೆ ಸುಮಾರು 10 ಕೋಟಿ ರೂ. ಮೌಲ್ಯದ ಡ್ರಗ್ಸ್, 25.6 ಲಕ್ಷ ನಗದು, ಕರ್ನಾಟಕ ನೋಂದಣಿಯ ಟೊಯೋಟಾ ಫಾರ್ಚೂನರ್ ವಾಹನ ಮತ್ತು 500 ಕೆಜಿಗಿಂತ ಹೆಚ್ಚು ತೂಕದ ವಿವಿಧ ರಾಸಾಯನಿಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೆಹಲಿಯ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೊ(ಎನ್‌ಸಿಬಿ) ಪ್ರಕಟಿಸಿದೆ.


ಕೇಂದ್ರ ಸರ್ಕಾರದ 'ನಶಾ ಮುಕ್ತ ಭಾರತ' ಉಪಕ್ರಮದ ಭಾಗವಾಗಿ ಎನ್‌ಸಿಬಿ ನಡೆಸಿರುವ ಈ ಕಾರ್ಯಾಚರಣೆಯಲ್ಲಿ ನಾಲ್ವರನ್ನು ಬಂಧಿಸಿ, ಗೌಪ್ಯ ಉತ್ಪಾದನಾ ಘಟಕವನ್ನು ಪತ್ತೆಹಚ್ಚುವ ಮೂಲಕ ಅಂತಾರಾಜ್ಯ ಮಾದಕ ದ್ರವ್ಯ ಜಾಲವನ್ನು ತುಂಡರಿಸಲಾಗಿದೆ. ಈ ವೇಳೆ ಕೋಟ್ಯಾಂತರ ಮೌಲ್ಯದ ಮಾದಕ ದ್ರವ್ಯ, ದುಬಾರಿ ಬೆಲೆಯ ವಾಹನ, ನಗದು ಮತ್ತು ಬೃಹತ್ ಪ್ರಮಾಣದ ರಾಸಾಯನಿಕಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ಎನ್‌ಸಿಬಿ ಮಾಹಿತಿ ಹಂಚಿಕೊಂಡಿದ್ದು, ಇದರೊಂದಿಗೆ ಮಾದಕ ವಸ್ತು ಮಾರಾಟದ ಬೃಹತ್ ಜಾಲಕ್ಕೆ ದೊಡ್ಡ ಹೊಡೆತ ಬಿದ್ದಿರುವುದಾಗಿ ರಾಷ್ಟ್ರೀಯ ಮಟ್ಟದಲ್ಲಿ ವರದಿಯಾಗಿದೆ.

ಜನವರಿ 28 ರಂದು ಗುಜರಾತ್‌ನ ಸೂರತ್ ಜಿಲ್ಲೆಯ ಪಲ್ಸಾನಾದಲ್ಲಿ ಎನ್‌ಸಿಬಿ ಅಧಿಕಾರಿಗಳು ನಿಖರ ಗುಪ್ತಚರ ಮಾಹಿತಿಯ ಮೇರೆಗೆ ಕರ್ನಾಟಕ ನೋಂದಣಿಯ ಟೊಯೋಟಾ ಫಾರ್ಚೂನರ್ ವಶಕ್ಕೆ ಪಡೆದು, ತನಿಖೆ ನಡೆಸಿದ ವೇಳೆ 35 ಕೆಜಿ ಮೆಫೆಡ್ರೋನ್(MD) ಪತ್ತೆಯಾಯಿತು. ಬಳಿಕ ರಾಜಸ್ಥಾನಕ್ಕೆ ಮಾದಕ ವಸ್ತು ಸಾಗಿಸುತ್ತಿದ್ದ ಮೂವರನ್ನು ಬಂಧಿಸಲಾಗಿತ್ತು. ಹಲವು ಪ್ರಕರಣಗಳಿರುವ ರಾಜಸ್ಥಾನದ ಜಲೋರ್ ನಿವಾಸಿ ಮಹೀಂದ್ರ ಕುಮಾರ್ ವಿಷ್ಣೋಯ್, ಈ ಜಾಲದ ಕಿಂಗ್‌ಪಿನ್ ಎಂಬುದನ್ನು ಪತ್ತೆ ಹಚ್ಚಲಾಯಿತು.



ಎನ್‌ಸಿಬಿ ಅಧಿಕಾರಿಗಳು ದಾಳಿ ನಡೆಸಿದ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿನ ರಾಸಾಯನಿಕ ಕಾರ್ಖಾನೆ ಹಾಗೂ ವಶಪಡಿಸಿಕೊಂಡ ರಾಸಾಯನಿಕವನ್ನು ಚಿತ್ರಗಳಲ್ಲಿ ಕಾಣಬಹುದು.

10 ಕೋಟಿ ಮೌಲ್ಯದ ಡ್ರಗ್ಸ್, ವಾಹನ, 25 ಲಕ್ಷ ನಗದು, ಅಪಾರ ಪ್ರಮಾಣದ ರಾಸಾಯನಿಕ ವಶಕ್ಕೆ



ಎನ್‌ಡಿಪಿಎಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ವಿಷ್ಣೋಯ್, ಮಾದಕ ದ್ರವ್ಯ ತಯಾರಿಸುವ ಯೋಜನೆ ರೂಪಿಸಿ, ಇತರೆ ಕೈದಿಗಳೊಂದಿಗೆ ಸಂಪರ್ಕ ಸಾಧಿಸಿಕೊಂಡು ಮಾದಕ ವಸ್ತು ಜಾಲವನ್ನು ನಿರ್ವಹಿಸುತ್ತಿರುವುದರ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಎನ್‌ಸಿಬಿ ಅಧಿಕಾರಿಗಳು ಮಾದಕ ದ್ರವ್ಯ ಉತ್ಪಾದನೆ, ಮಾರಾಟ ಜಾಲ, ಪೂರೈಕೆ ಸರಪಳಿ ಹಾಗೂ ರಹಸ್ಯ ಪ್ರಯೋಗಾಲಯಗಳ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದರು.

ವಿಷ್ಣೋಯ್, ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಬೇರೆಯವರ ಮೂಲಕ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಉತ್ಪಾದನಾ ಘಟಕ ನಡೆಸುತ್ತಿರುವ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಕಳೆದ ಬುಧವಾರ ಎನ್‌ಸಿಬಿ ಅಧಿಕಾರಿಗಳು ಇಲ್ಲಿನ ರಾಸಾಯನಿಕ ಉತ್ಪಾದನಾ ಕೈಗಾರಿಕೆ ಮೇಲೆ ದಾಳಿ ನಡೆಸಿದ್ದಾರೆ. ಅತ್ಯಾಧುನಿಕ ಉಪಕರಣಗಳನ್ನು ಒಳಗೊಂಡ ರಾಸಾಯನಿಕಗಳನ್ನು ತಯಾರಿಸುವ ಸೋಗಿನಲ್ಲಿ ಮಾದಕ ದ್ರವ್ಯ ತಯಾರಿಸುತ್ತಿದ್ದ ಶಂಕೆ ಮೇಲೆ ಸುಮಾರು 500 ಕೆಜಿ ರಾಸಾಯನಿಕವನ್ನು ವಶಕ್ಕೆ ಪಡೆದಿದ್ದಾರೆ. ಇದೇ ವೇಳೆ ಕಟ್ಟಡ ಬಾಡಿಗೆ ಪಡೆದು ರಾಸಾಯನಿಕ ಕಾರ್ಖಾನೆ ನಡೆಸುತ್ತಿದ್ದ ರಾಜಸ್ಥಾನ ಮೂಲದ ಗಣಪತ್ ಲಾಲ್‌ನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದರು. ನಂತರ ಗುರುವಾರ ಸಂಜೆ ಆತನನ್ನು ಮೈಸೂರಿನ ಜಯನಗರದ ಜಿಲ್ಲಾ ನ್ಯಾಯಾಲಯದ 5ನೇ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಟ್ರಾನ್ಸಿಟ್ ವಾರಂಟ್ ಪಡೆದು, ಆತನನ್ನು ಕರೆದೊಯ್ದರು. ಈತ ಡ್ರಗ್ಸ್ ಜಾಲದ ಮಾಸ್ಟರ್‌ಮೈಂಡ್ ಮಹೇಂದ್ರ ಕುಮಾರ್ ವಿಷ್ಣೋಯ್‌ನ ಸಂಬಂಧಿ ಎಂದು ಎನ್‌ಸಿಬಿ ಅಧಿಕಾರಿಗಳು ತಿಳಿಸಿದ್ದಾರೆ ಎನ್ನಲಾಗಿದೆ.

ಮೈಸೂರು ಹೊರವಲಯ ಯಾಂದಳ್ಳಿಯ ಒಂಟಿ ಮನೆಯಲ್ಲಿ ಡ್ರಗ್ಸ್ ತಯಾರಿಕೆ ಶಂಕೆ

● ರಾಸಾಯನಿಕಯುಕ್ತ ಪದಾರ್ಥ ಎಫ್‌ಎಸ್‌ಎಲ್‌ಗೆ ರವಾನೆ ● ಮನೆ ಮನೆ ಪೊಲೀಸ್ ಕಾರ್ಯಾಚರಣೆ ವೇಳೆ ರಾಸಾಯನಿಕ ಪೌಡರ್, 10 ಬ್ಯಾರಲ್ ರಾಸಾಯನಿಕ ದ್ರವ್ಯ ಪತ್ತೆ; ಆರೋಪಿಗಳ ಪತ್ತೆಗೆ ಪೊಲೀಸರ ವ್ಯಾಪಕ ಶೋಧ

ಮೈಸೂರು, ಜ.30(ಬಿಎಲ್‌ಯು)– ಮೈಸೂರಿನ ಹೊರ ವಲಯದ ಮನೆಯೊಂದರಲ್ಲಿ ಡ್ರಗ್ಸ್ ತಯಾರಿಸಲಾಗುತ್ತಿದೆ ಎಂಬ ಶಂಕೆ ಮೇಲೆ ದಾಳಿ ಮಾಡಿರುವ ಮೈಸೂರು ಜಿಲ್ಲಾ ಪೊಲೀಸರು ಅಲ್ಲಿದ್ದ ರಾಸಾಯನಿಕ ಪದಾರ್ಥಗಳನ್ನು ವಶಕ್ಕೆ ತೆಗೆದುಕೊಂಡು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದ್ದಾರೆ.

ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ, ಮಾರಾಟ ಜಾಲವನ್ನು ಕೆದಕಿದಷ್ಟು ಆತಂಕಕಾರಿ ವಿಚಾರ ಬಯಲಾಗುತ್ತಿದೆ. ಇದನ್ನು ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ.

ಮನೆ ಮನೆ ಪೊಲೀಸ್ ಕಾರ್ಯಾಚರಣೆ ವೇಳೆ ಪರಿಶೀಲನೆ ನಡೆಸುವಾಗ ಈ ಅಕ್ರಮ ಬಯಲಾಗಿದೆ. ಮೈಸೂರು ಹೊರ ವಲಯದ ಯಾಂದಳ್ಳಿ ಗ್ರಾಮದ ಬಳಿಯ ಹೊಸ ಬಡಾವಣೆಯಲ್ಲಿ ಪ್ರತಿ ಮನೆಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುವಾಗ ಮೂರು ಅಂತಸ್ತಿನ ಒಂಟಿ ಮನೆಯೊಂದಕ್ಕೂ ಭೇಟಿ ನೀಡಿದ್ದಾರೆ. ಆ ವೇಳೆ ಮನೆ ಬೀಗ ಹಾಕಲಾಗಿತ್ತಾದರೂ ಅಲ್ಲಿ ರಾಸಾಯನಿಕ ವಸ್ತುವಿನ ವಾಸನೆ ಬಂದಿದೆ.



ಯಾಂದಳ್ಳಿ ಬಡಾವಣೆಯ ಒಂಟಿ ಮನೆ.

ಇದರಿಂದ ಅನುಮಾನಗೊಂಡ ಪೊಲೀಸರು ವಾಸನೆ ಜಾಡು ಹಿಡಿದು ಮನೆಯನ್ನು ಜಾಲಾಡಿದ್ದಾರೆ. ಮನೆಯ ಕಿಟಕಿಯಿಂದ ನೋಡಿದಾಗ ಅಲ್ಲಿ ರಾಸಾಯನಿಕ ಪೌಡರ್ ಹಾಗೂ ಬ್ಯಾರಲ್‌ಗಳು ಕಂಡು ಬಂದಿವೆ.

ಈ ವಿಚಾರವನ್ನು ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ಮಲ್ಲಿಕ್, ಲೋಕೇಶ್, ಡಿವೈಎಸ್ಪಿ ರಾಜಣ್ಣ ಸ್ಥಳಕ್ಕೆ ಭೇಟಿ ನೀಡಿ, ಬೀಗ ಒಡೆದು ಒಳ ಹೋಗಿ ನೋಡಿದಾಗ ಅಲ್ಲಿ ಹಲವು ರಾಸಾಯನಿಕ ವಸ್ತುಗಳು ಹಾಗೂ 10 ಬ್ಯಾರಲ್ ರಾಸಾಯನಿಕ ದ್ರವ್ಯ ಪತ್ತೆಯಾಗಿದ್ದವು. ವಿಚಾರಣೆ ಮಾಡಿದಾಗ ಈ ಮನೆ ನಿವೃತ್ತ ಎಎಸ್‌ಐ ದಿವಂಗತ ಲಿಂಗಯ್ಯ ಅವರ ಪುತ್ರನಿಗೆ ಸೇರಿದೆ ಎಂಬ ವಿಚಾರ ತಿಳಿದು ಬಂದಿತು. ಬಾಡಿಗೆ ಪಡೆದವರು ಅಲ್ಲಿ ಸಂಗ್ರಹಿಸಿರುವುದು ಏನು ಎಂಬ ಬಗ್ಗೆ ಸದ್ಯಕ್ಕೆ ತಿಳಿದು ಬಂದಿಲ್ಲ.

ಈಗ ಅಲ್ಲಿ ಪತ್ತೆಯಾಗಿರುವ ರಾಸಾಯನಿಕ ಪೌಡರ್ ಹಾಗೂ ದ್ರವ್ಯದ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಅದು ಡ್ರಗ್ಸ್ ತಯಾರಿಕೆಗೆ ಬಳಕೆಯಾಗುತ್ತಿದ್ದ ರಾಸಾಯನಿಕ ಕಚ್ಚಾ ವಸ್ತುವೇ ಅಥವಾ ಬೇರೆ ರಾಸಾಯನಿಕ ಪದಾರ್ಥವೇ ಎಂಬ ಬಗ್ಗೆ ಮಾಹಿತಿ ಬರಬೇಕಿದೆ.

ಸದ್ಯ ಈ ಕಟ್ಟಡವನ್ನು ಪೊಲೀಸರು ಸೀಜ್ ಮಾಡಿದ್ದಾರೆ. ಅಲ್ಲದೆ ಬಾಡಿಗೆ ಪಡೆದಿರುವವರ ಪತ್ತೆಗೆ ಬಲೆ ಬೀಸಿದ್ದಾರೆ.

> ಮೂರು ಅಂತಸ್ತಿನ ಮನೆಯನ್ನು ಬಾಡಿಗೆ ಪಡೆದಿರುವ ವ್ಯಕ್ತಿಗಳ ಪತ್ತೆಗೆ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ. ಅವರು ಸಿಕ್ಕ ನಂತರ ಹಲವು ವಿಚಾರಗಳು ತಿಳಿದು ಬರಲಿದೆ. ಆ ಮನೆಯಲ್ಲಿ ಪತ್ತೆಯಾಗಿರುವ ರಾಸಾಯನಿಕ ವಸ್ತುಗಳು ಹಾಗೂ ದ್ರವ್ಯವನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದು, ಪ್ರಯೋಗಾಲಯದ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ.
>
> – ಮಲ್ಲಿಕಾರ್ಜುನ ಬಾಲದಂಡಿ, ಎಸ್ಪಿ, ಮೈಸೂರು.

ಅಕ್ರಮ ಚಟುವಟಿಕೆಗಳಿಗೆ ಒಂಟಿ ಮನೆ, ನಿರ್ಜನ ಪ್ರದೇಶಗಳ ಆಯ್ಕೆ

ಡ್ರಗ್ಸ್ ತಯಾರಿಕೆ ಸೇರಿದಂತೆ ಇತರೆ ಅಕ್ರಮ ಚಟುವಟಿಕೆಗಳಿಗೆ ಮೈಸೂರಿನ ಒಂಟಿ ಮನೆ ಹಾಗೂ ನಿರ್ಜನ ಪ್ರದೇಶದ ಕಟ್ಟಡಗಳನ್ನೆ ಸಮಾಜ ಘಾತಕರು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ದೆಹಲಿಯ ಎನ್‌ಸಿಬಿ ಅಧಿಕಾರಿಗಳು ದಾಳಿ ಮಾಡಿರುವ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕಾರ್ಖಾನೆ ಕೂಡ ನಿರ್ಜನ ಪ್ರದೇಶದಲ್ಲಿದೆ. ಅಕ್ಕ ಪಕ್ಕ ಕಾರ್ಖಾನೆಗಳಿದ್ದರೂ ಅಷ್ಟಾಗಿ ಜನರ ಓಡಾಟ ಇರಲ್ಲ.

ಇನ್ನು ರಿಂಗ್ ರಸ್ತೆಯ ಬೆಲವತ್ತ ಬಳಿ ಪತ್ತೆಯಾದ 390 ಕೋಟಿ ಮೌಲ್ಯದ ಡ್ರಗ್ಸ್ ತಯಾರಿಕೆ ಘಟಕ ಸರ್ವೀಸ್ ರೋಡ್‌ನಲ್ಲೇ ಇದ್ದರೂ ಅಕ್ಕ ಪಕ್ಕ ಯಾವುದೇ ಮನೆ, ಅಂಗಡಿ ಮುಂಗಟ್ಟು ಇರಲಿಲ್ಲ. ಪಕ್ಕದಲ್ಲಿ ಟೀ ಅಂಗಡಿ ಇತ್ತಾದರೂ ಅದು ಮುಚ್ಚಿತ್ತು. ಮುಂದೆ ಗ್ಯಾರೇಜ್ ಇತ್ತಾದರೂ ಹಿಂದೆ ಡ್ರಗ್ಸ್ ತಯಾರಿಸುತ್ತಿದ್ದರು. ಅಲ್ಲದೆ ಚಾಮುಂಡಿಬೆಟ್ಟದ ಹೊಸಹುಂಡಿ ಬಳಿ ನಂದಿನಿ ನಕಲಿ ತುಪ್ಪ ತಯಾರಿಕೆ ಕೂಡ ನಿರ್ಜನ ಪ್ರದೇಶದಲ್ಲೇ ಇತ್ತು. ಈ ಮೂಲಕ ಒಂಟಿ ಮನೆ ಹಾಗೂ ನಿರ್ಜನ ಪ್ರದೇಶಗಳನ್ನೆ ಅಕ್ರಮ ಚಟುವಟಿಕೆಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿದ್ದು, ಇವುಗಳ ಮೇಲೆ ಪೊಲೀಸರು ಮಾತ್ರವಲ್ಲದೆ ಸಾರ್ವಜನಿಕರು ಎಚ್ಚರ ವಹಿಸುವುದು ಒಳ್ಳೆಯದು.

ಮೈಸೂರಿನ ಕಾರ್ಖಾನೆ, ಒಂಟಿ ಮನೆ, ನಿರ್ಜನ ಪ್ರದೇಶದ ಶೆಡ್‌ಗಳಲ್ಲಿ ಪೊಲೀಸರಿಂದ ತೀವ್ರ ತಪಾಸಣೆ

30 ತಂಡಗಳ ರಚನೆ, ಇಂಚಿಂಚು ಬಿಡದೆ ಪರಿಶೀಲನೆ



ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ಹಾಗೂ ಮಾರಾಟ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಶುಕ್ರವಾರ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕಾರ್ಖಾನೆಗಳಲ್ಲಿ ಶ್ವಾನ ದಳದೊಂದಿಗೆ ತೀವ್ರ ತಪಾಸಣೆ ನಡೆಸಿದರು.

ಮೈಸೂರು, ಜ.30(ಬಿಎಲ್‌ಯು)– ಡ್ರಗ್ಸ್ ತಯಾರಿಕೆ ಹಾಗೂ ಮಾರಾಟವನ್ನು ಗಂಭೀರವಾಗಿ ಪರಿಗಣಿಸಿರುವ ಮೈಸೂರು ನಗರ ಪೊಲೀಸರು, ವಿವಿಧ ತಂಡಗಳ ಮೂಲಕ ಪ್ರತಿಯೊಂದು ಕಾರ್ಖಾನೆ, ಒಂಟಿ ಮನೆ, ನಿರ್ಜನ ಪ್ರದೇಶದ ಶೆಡ್‌ಗಳನ್ನು ಪರಿಶೀಲನೆ ನಡೆಸಿದರು.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಸಿಪೆಟ್‌ನಿಂದ ಪೊಲೀಸರು ಇಂದು ಪರಿಶೀಲನಾ ಕಾರ್ಯಾಚರಣೆ ಆರಂಭಿಸಿದರು. ಶ್ವಾನ ದಳದೊಂದಿಗೆ ಪ್ರತಿಯೊಂದು ಕಾರ್ಖಾನೆ ಒಳ ಹೊಕ್ಕಿ ಅಲ್ಲಿ ಉತ್ಪಾದನೆ ಆಗುತ್ತಿರುವ ವಸ್ತುಗಳನ್ನು ಶೋಧಿಸಿದರು.

ಅದರಲ್ಲೂ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಾರ್ಖಾನೆಯ ಇಂಚಿಂಚು ಜಾಗವನ್ನು ಪೊಲೀಸರು ಪರಿಶೀಲಿಸಿದರು. ಆ ವೇಳೆ ಪೊಲೀಸ್ ಶ್ವಾನ ಕಾರ್ಖಾನೆಯ ಪ್ರತಿ ಮೂಲೆ ಮೂಲೆಯಲ್ಲಿ ವಾಸನೆಯ ಶೋಧಿಸಿದವು. ಆದರೆ ಯಾವುದೇ ಕಾರ್ಖಾನೆಯಲ್ಲಿ ಡ್ರಗ್ಸ್ ಅಥವಾ ಅದರ ತಯಾರಿಕೆಗೆ ಬಳಸುವ ರಾಸಾಯನಿಕಗಳು ಪತ್ತೆಯಾಗಲಿಲ್ಲ.

ಎಸಿಪಿ ರವಿ ಪ್ರಸಾದ್ ಅವರು ಕಾರ್ಯಾಚರಣೆಗೆ ಸಲಹೆ, ಸೂಚನೆ ನೀಡಿದರು. ಅಲ್ಲದೆ ಕೆಲವು ರಾಸಾಯನಿಕ ಕಾರ್ಖಾನೆಗೆ ಅವರೇ ಖುದ್ದು ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದರು.

> **ಪ್ರತಿ ಜಾಗವನ್ನು ಪರಿಶೀಲಿಸುತ್ತೇವೆ**
>
> ಮೈಸೂರಿನ ಪ್ರತಿಯೊಂದು ಕಾರ್ಖಾನೆ, ಒಂಟಿ ಮನೆ, ನಿರ್ಜನ ಪ್ರದೇಶದ ಶೆಡ್ ಸೇರಿದಂತೆ ಇತರೆ ಸ್ಥಳಗಳ ಪರಿಶೀಲನೆಗಾಗಿ 30 ತಂಡಗಳನ್ನು ರಚನೆ ಮಾಡಲಾಗಿದೆ. ಒಂದೊಂದು ಸಬ್ ಡಿವಿಷನ್‌ನಲ್ಲಿ 8ರಿಂದ 10 ತಂಡಗಳನ್ನು ರಚನೆ ಮಾಡಲಾಗಿದ್ದು, ಆಯಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗಳು ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಖುದ್ದು ಪರಿಶೀಲನೆ ನಡೆಸುತ್ತಿದ್ದಾರೆ. ಪ್ರತಿಯೊಂದು ಸ್ಥಳವನ್ನು ಪರಿಶೀಲನೆ ಮಾಡಿ ಮುಗಿಸುವವರೆಗೆ ಕಾರ್ಯಾಚರಣೆ ಮುಂದುವರೆಯಲಿದೆ.
>
> – ಸುಂದರ್ ರಾಜ್, ಡಿಸಿಪಿ, ಮೈಸೂರು.

ಮೈಸೂರಲ್ಲಿ ಮಹಾಯೋಗಿ ವೇಮನ ಜಯಂತಿ ಆಚರಣೆ

ಮಹಾಯೋಗಿ ವೇಮನ ಅವರನ್ನು ಸಮಾಜದಲ್ಲಿ ದೈವತ್ವದ ಭಾವನೆಯಿಂದ ಕಂಡಿದ್ದಾರೆ


ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಹಾಯೋಗಿ ವೇಮನ ಜಯಂತಿ ಆಚರಿಸಲಾಯಿತು.

ಮೈಸೂರು,ಜ.30(ಜಿಎ)–ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಹಾಯೋಗಿ ವೇಮನ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಮಾತನಾಡಿ, ಮನುಷ್ಯ ಸಮಾಜದ ಒಳಿತಿಗಾಗಿ ಜೀವನ ನಡೆಸಿದರೆ ಜನರಿಗೆ ಶಕ್ತಿಯಾಗಿ ಜನರ ಮನಸ್ಸಿನಲ್ಲಿ ದೈವತ್ವ ಭಾವನೆಯನ್ನು ಬೆಳಸಿಕೊಳ್ಳುತ್ತಾರೆ. ಮಹಾಯೋಗಿ ವೇಮನ ಅವರ ಬಗ್ಗೆ ಜನರು ದೈವತ್ವ ಭಾವನೆ ಬೆಳಸಿಕೊಂಡಿದ್ದಾರೆ ಎಂದರು.

ಶಾಪ ಹಾಗೂ ವರವನ್ನು ದೇವರು ಕೊಡುವುದಿಲ್ಲ. ನಾವು ಮಾಡುವ ಕಾಯಕ ನೀಡುತ್ತದೆ. ಸಮಾಜಕ್ಕೆ ಬೆಳಕಿನ ರೂಪದಲ್ಲಿ ಯಾರು ಮಾದರಿಯಾಗಿ ಬದುಕುತ್ತಾರೆ ಅಂಥವರು ಸಮಾಜಕ್ಕೆ ವರದಾನವಾಗುತಾರೆ. ಹೇಮಾರೆಡ್ಡಿ ಮಲ್ಲಮ್ಮ ಅವರು ವೇಮನನಿಗೆ ಅತ್ತಿಗೆಯಾಗಿ ಅವರ ಜೀವನಕ್ಕೆ ದಾರಿ ದೀಪಾವಾಗಿದ್ದರು ಎಂದು ತಿಳಿಸಿದರು.

ಸಹಾಯಕ ಭಾಷಾಂತರ ಮತ್ತು ಸಂಯೋಜನಾಧಿಕಾರಿ ಡಾ. ಆವರೆಕಾಡು ವಿಜಯಕುಮಾರ ಮಾತನಾಡಿ, ಸಮಾಜದ ಅಂಕು ಡೊಂಕುಗಳನ್ನು ವಚನಗಳ ಮೂಲಕ ತಿದ್ದಿ ಶ್ರೀಸಾಮಾನ್ಯರಿಗೆ ಮಹಾಯೋಗಿ ವೇಮನರು ದಾರಿ ದೀಪವಾಗಿದ್ದರು ಎಂದು ತಿಳಿಸಿದರು.

ವೇಮನ ವಚನಗಳು ಜನಸಾಮಾನ್ಯರಿಗೆ ಹಾಗೂ ಮುಂದಿನ ಭವಿಷ್ಯದ ಮಕ್ಕಳಿಗೆ ಮಾರ್ಗದರ್ಶನ ನೀಡಲಿದೆ. ಹಾಗೇ ನೈತಿಕ ಮೌಲ್ಯಗಳನ್ನು ರೂಡಿಸಿಕೊಳ್ಳುವುದು ವಿದ್ಯಾಭ್ಯಾಸದ ಮುಖ್ಯ ಉದ್ದೇಶವಾಗಬೇಕು ಎಂದು ಮಹಾಯೋಗಿ ವೇಮನರು ವಚನದ ಮೂಲಕ ತಿಳಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿದ್ದ ಹರಿಹರ ಎರೆಹೊಸಹಳ್ಳಿಯ ಶ್ರೀ ವೇಮಾನಂದ ಸ್ವಾಮೀಜಿ ಮಾತನಾಡಿ, ಉತ್ತಮ ವ್ಯಕ್ತಿತ್ವದಿಂದ ಗಳಿಸುವ ಹೆಸರು ಚಿರಸ್ಮರಣೀಯ. ವ್ಯಕ್ತಿತ್ವ ರೂಪಿಸಿಕೊಳ್ಳಲು ಯಾವುದೇ ಪದವಿ ಅಥವಾ ಸ್ಥಾನಮಾನ ಬೇಕಿಲ್ಲ. ನಾವು ರೂಡಿಸಿಕೊಳ್ಳುವ ಮೌಲ್ಯ ಹಾಗೂ ಬದುಕುವ ಶೈಲಿ ಮುಖ್ಯ. ಸಮಾಜಕ್ಕೆ ಉತ್ತಮ ಸಂದೇಶ ನೀಡಿದ ಮಹಾನ್ ಪುರುಷರ ಸಾಲಿನಲ್ಲಿ ಮಹಾಯೋಗಿ ವೇಮನ ಕೂಡ ಒಬ್ಬರು. ಮಹಾಯೋಗಿ ವೇಮನರ ಆದರ್ಶಗಳನ್ನು ರೂಪಿಸಿಕೊಳ್ಳಬೇಕು, ಅವರ ಮಹತ್ವದ ಬೆಳಕಿನಲ್ಲಿ ಬದುಕು ಕಟ್ಟಿಕೊಳ್ಳಬೇಕು. ಎಲ್ಲಾ ಮಹಾತ್ಮರ ಬೋಧನೆಗಳು ತತ್ವ ಹಾಗೂ ಸಿದ್ಧಾಂತದ ಚೌಕಟ್ಟಿನಲ್ಲಿ ಹೇಳಲಾಗಿದೆ. ವೇಮನವರ ವಚನಗಳು ನಮ್ಮಲ್ಲಿರುವ ವೌಢ್ಯತೆಗಳನ್ನು ಹೋಗಲಾಡಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಜನರು ಜೀವನ ನಡೆಸಬೇಕು ಎಂಬುದಾಗಿದೆ. ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಪ್ರಭಾಕರ್ ರೆಡ್ಡಿ, ಚೆನ್ನಾರೆಡ್ಡಿ, ಶಾಂತರಾಜು, ಸುರೇಶ್, ಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

ಗಾಂಧೀಜಿ 20ನೇ ಶತಮಾನವನ್ನು ಪ್ರೀತಿಯಿಂದ ರೂಪಿಸಿದರು

ವಿಶೇಷ ಉಪನ್ಯಾಸದಲ್ಲಿ ಪ್ರಗತಿಪರ ಚಿಂತಕ ಡಾ.ಅಮರ್ ಕುಮಾರ್


ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ 78ನೇ ಸರ್ವೋದಯ ದಿನಾಚರಣೆಯ ಅಂಗವಾಗಿ ನಡೆದ 'ಗಾಂಧೀಜಿ ಪ್ರತಿಪಾದಿಸಿದ ಮಾನವೀಯತೆ' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಪ್ರಗತಿಪರ ಚಿಂತಕ ಡಾ.ಅಮರ್ ಕುಮಾರ್ ಉದ್ಘಾಟಿಸಿದರು.

ಮೈಸೂರು,ಜ.30(ಜಿಎ)–ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ 78ನೇ ಸರ್ವೋದಯ ದಿನಾಚರಣೆಯ ಅಂಗವಾಗಿ ನಡೆದ 'ಗಾಂಧೀಜಿ ಪ್ರತಿಪಾದಿಸಿದ ಮಾನವೀಯತೆ' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಪ್ರಗತಿಪರ ಚಿಂತಕ ಡಾ.ಅಮರ್ ಕುಮಾರ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಪ್ರಪಂಚದ ಇತಿಹಾಸದಲ್ಲಿಯೇ 20ನೇ ಶತಮಾನದಷ್ಟು ಹಿಂಸೆ ನೋಡಲು ಸಾಧ್ಯವಿಲ್ಲ. 1 ಮತ್ತು 2ನೇ ಮಹಾಯುದ್ಧ, ಚೀನಾ ಕ್ರಾಂತಿ, ರಷ್ಯಾದಲ್ಲಿ ಕ್ರಾಂತಿ ನಡೆಯಿತು. ಕೊಡಲಿಗಳನ್ನು ಮಸಿದು ಶಸ್ತ್ರಾಸ್ತ್ರಗಳನ್ನು ಬಳಸಿ ಹೊಸ ಹೊಸ ವಿಧಾನಗಳ ಮೂಲಕ ಕೊಲ್ಲುವ ಪ್ರವೃತ್ತಿ ಬೆಳೆಸಿಕೊಂಡರು. ಆದರೆ ಈ ಶತಮಾನವನ್ನು ಗಾಂಧೀಜಿ ಪ್ರೀತಿಯಿಂದ ರೂಪಿಸಿದರು ಎಂದರು.

ಗಾಂಧೀಜಿ ಚಿಕ್ಕ ವಯಸ್ಸಿನಲ್ಲಿ ಸಾಮಾನ್ಯ ವಿದ್ಯಾರ್ಥಿ. ರಾಜ ಮನೆತನದಲ್ಲಿಯೂ ಹುಟ್ಟಲಿಲ್ಲ. ಮನೆಯಲ್ಲಿ ಬಡತನ ಇರಲಿಲ್ಲ. ಆದರೂ ಐಷಾರಾಮಿ ಮನೆತನವಲ್ಲ. ಇಂತಹ ಸಾಮಾನ್ಯ ವ್ಯಕ್ತಿ ಸಾಮ್ರಾಜ್ಯಶಾಹಿ ವ್ಯವಸ್ಥೆಗಳನ್ನು ಎದುರಿಸುವ ಅಸಾಮಾನ್ಯ ಶಕ್ತಿ ಗಳಿಸಿದ್ದು ಹೇಗೆ ಎಂಬುದು ದೊಡ್ಡ ಪ್ರಶ್ನೆ. ಆದರೆ, ಹಿಟ್ಲರ್ ಹಿಂಸೆ, ಲೆನಿನ್ ಕ್ರಾಂತಿ, ಮಾವೋವಾದಿಗಳ ಹೋರಾಟದಿಂದ ಜಗತ್ತನ್ನು ರೂಪಿಸಿದರು. ಆದರೆ, ಗಾಂಧೀಜಿ ಪ್ರೀತಿಯಿಂದ ಬದಲಾಯಿಸಿದರು. ಮನುಷ್ಯರ ಮನಸ್ಸುಗಳನ್ನು ಬದಲಾಯಿಸಿ ಶತಮಾಗಳನ್ನು ರೂಪಿಸಿದರು. ನನ್ನ ಪ್ರಾಣ ಹೋದರು ಪರವಾಗಿಲ್ಲ. ಮತ್ತೊಬ್ಬರ ಪ್ರಾಣ ತೆಗೆಯಬಾರದು ಎಂದು ಗಾಂಧೀಜಿ ಹೇಳಿದರು. ಇದೆ ನಿಜವಾದ ಧೈರ್ಯ ಮತ್ತು ಶೌರ್ಯ. ಅಹಿಂಸ ನೀತಿಯೇ ಅವರ ಶಕ್ತಿಯಾಗಿತ್ತು. ಅಹಿಂಸೆಯ ಮೂಲಕವೇ ಪ್ರಪಂಚದಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಅವರ ಹಿಂದೆ ಸಾಗಿದರು ಎಂದು ತಿಳಿಸಿದರು.

19 ವರ್ಷ ವಿದ್ಯಾಭ್ಯಾಸಕ್ಕೆ ಇಂಗ್ಲೆಂಡ್‌ಗೆ ತೆರಳಿದ ಗಾಂಧೀಜಿ ಅವರು ಅಲ್ಲಿ ಬೇಕಾದಷ್ಟು ವಿಚಾರ ಧರ್ಮಗಳ ಬಗ್ಗೆಯೂ ತಿಳಿದುಕೊಂಡರು. ವಿದ್ಯಾಭ್ಯಾಸದ ನಂತರ ಭಾರತಕ್ಕೆ ಮರಳಿದಾಗ ವಕೀಲಗಿರಿ ಅಭ್ಯಾಸ ಮಾಡಲು ಅವಕಾಶ ಸಿಗುವುದಿಲ್ಲ. ಇದೆ ಸಂದರ್ಭದಲ್ಲಿ ಸೌತ್ ಆಫ್ರಿಕಾದಲ್ಲಿ ಅವಕಾಶ ಸಿಗಲಿದೆ. ಇಂಗ್ಲೆಂಡ್‌ನಲ್ಲಿ ವಿದ್ಯಾಭ್ಯಾಸ ಪಡೆದಿದ್ದ ಗಾಂಧೀಜಿ ಇಂಗ್ಲೆಂಡ್–ಸೌತ್ ಆಫ್ರಿಕಾ ಎಲ್ಲ ದೇಶಗಳು ಬ್ರಿಟಿಷ್ ಸಾಮ್ರಾಜ್ಯಗಳೇ ಎಂದುಕೊಂಡು ತೆರಳುತ್ತಾರೆ. ಆದರೆ, ರೈಲಿನ ಪ್ರಯಾಣದಲ್ಲಿ ನಡೆಯುವ ಘಟನೆಯಿಂದ ಕಪ್ಪು ಜನರ ಪರವಾಗಿ ಹೋರಾಟ ಆರಂಭಿಸಿದರು. 21 ವರ್ಷಗಳ ಕಾಲ ಅಫ್ರಿಕಾದಲ್ಲಿದ್ದು ಸಂಶೋಧನೆಗಳನ್ನು ನಡೆಸಿದರು ಎಂದು ವಿವರಿಸಿದರು.

ದೆಹಲಿಯಲ್ಲಿ ಇಂದು ವಾಯು ಮಾಲಿನ್ಯ ಅಧಿಕಗೊಂಡಿದ್ದು, ಅಲ್ಲಿ ಇನ್ನೂ 10 ಸಾವಿರ ಆಸ್ಪತ್ರೆ ತೆರೆದರೂ, ಆರೋಗ್ಯ ವೃದ್ದಿಸಲು ಸಾಧ್ಯವಿಲ್ಲ. ಯಾವುದೇ ವೈದ್ಯರು ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ನೀಡಬಹುದು. ಆದರೆ, ಆರೋಗ್ಯ ನೀಡಲು ಸಾಧ್ಯವಿಲ್ಲ. ಹೀಗಾಗಿ ಪರಿಸರದ ಬಗ್ಗೆ ಕಾಳಜಿ ವಹಿಸಬೇಕಿದೆ. ನಾವು ಆರೋಗ್ಯವನ್ನು ಕಾಪಾಡಿದರೆ, ಆರೋಗ್ಯ ನಮ್ಮನ್ನು ಕಾಪಾಡಲಿದೆ. ಉಪವಾಸ ಮಾಡುವುದು ಆರೋಗ್ಯಕ್ಕೆ ಒಳ್ಳೆಯದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ, ಧ್ವನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ವಸಂತ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು ಉಪಸ್ಥಿತರಿದ್ದರು.

ಖಿದ್ಮಾ ಚಿತ್ರಕಲೆ ಸ್ಪರ್ಧೆಯಲ್ಲಿ ರೋಮಿತ್ ಆರ್ಯ ಪ್ರಥಮ



ಮೈಸೂರು, ಜ.30– ಖಿದ್ಮಾ ಫೌಂಡೇಷನ್ ಕರ್ನಾಟಕ ಹಾಗೂ ಅನ್ನದಾತ ಪ್ರಕಾಶನ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಖಿದ್ಮಾ ಕನ್ನಡ ಸಂಗಮ ಚಿತ್ರಕಲೆ ಸ್ಪರ್ಧೆಯಲ್ಲಿ ರೋಮಿತ್ ಆರ್ಯ ಡಿ. ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಕಾರ್ಯಕ್ರಮದ ಸರ್ವಾಧ್ಯಕ್ಷರಾದ ಹುಮಾಯೂನ್ ಮೈಸೂರು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಖಿದ್ಮಾ ಅಧ್ಯಕ್ಷ ಅಮೀರ್ ಅಶ್ ಬರೀ ಬನ್ನೂರು ಬಹುಮಾನ ವಿತರಿಸಿದರು. ಈತ ಸತ್ಯಸಾಯಿ ಬಾಬಾ ಸ್ಕೂಲ್ ವಿದ್ಯಾರ್ಥಿಯಾಗಿದ್ದಾರೆ.

ಕರವೇ ಕನ್ನಡಸೇನೆ ನಗರ, ಜಿಲ್ಲಾ ಘಟಕಗಳ ಉದ್ಘಾಟನೆ


ಕರ್ನಾಟಕ ರಕ್ಷಣಾ ವೇದಿಕೆ– ಕನ್ನಡಸೇನೆಯ ಮೈಸೂರು ನಗರ ಹಾಗೂ ಜಿಲ್ಲಾ ಘಟಕವನ್ನು ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ರಾಜ್ಯಾಧ್ಯಕ್ಷ ಎನ್. ಅರುಣ್ ಕುಮಾರ್, ಜಿಲ್ಲಾಧ್ಯಕ್ಷ ಆರ್. ಶ್ರೀನಿವಾಸ ಮೊದಲಾದವರು ಉಪಸ್ಥಿತರಿದ್ದರು.

ವಿಚಾರ ಸಂಕಿರಣ



ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ ವತಿಯಿಂದ ಆರ್‌ಬಿಐ ವಿಚಾರ, ಈಗಿನ ಸಹಕಾರ ಕ್ಷೇತ್ರದ ಕಾಯ್ದೆಯ ಬದಲಾವಣೆ ಬಗ್ಗೆ ಮಡಿಕೇರಿಯಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಮಹಾಮಂಡಲದ ನಿರ್ದೇಶಕ ಎಸ್‌ಬಿಎಂ ಮಂಜು ಉದ್ಘಾಟಿಸಿ, ಮಾತನಾಡಿದರು. ಈ ವೇಳೆ ಆರ್‌ಬಿಐ ಅಧಿಕಾರಿ ಕುಲಕರ್ಣಿ, ಅಪೆಕ್ಸ್ ಬ್ಯಾಂಕ್ ಅಧಿಕಾರಿ ವೆಂಕಟೇಶ್, ಮಹಾಮಂಡಲದ ನಿರ್ದೇಶಕರಾದ ವೆಂಕಟೇಶ್, ಹುಬ್ಬಳ್ಳಿಯ ಮಲ್ಲಮ್ಮ, ಉಡುಪಿಯ ಜಯಪ್ರಕಾಶ್, ರಾಜ್ಯ ಪಟ್ಟಣ ಸಹಕಾರ ಬ್ಯಾಂಕ್‌ಗಳ ಮಹಾಮಂಡಲದ ಸಿಇಓ ಪುಂಡಲೀಕ್ ಕೆರೂರ್ ಇದ್ದರು.

ಮೈಸೂರಿನ ರೈಲ್ವೆ ಮ್ಯೂಸಿಯಂನಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ



ಮೈಸೂರು, ಜ.30(ಆರ್‌ಕೆ)– ಮೈಸೂರಿನ ರೈಲ್ವೆ ಮ್ಯೂಸಿಯಂ ವೀಕ್ಷಕರಿಗೆ ಪ್ರವೇಶ ಟಿಕೆಟ್ ಪಡೆಯಲು ಡಿಜಿಟಲ್ ಕ್ಯೂಆರ್ ಕೋಡ್ ಆಧಾರಿತ ಪಾವತಿ ವ್ಯವಸ್ಥೆ ಮಾಡಲಾಗಿದೆ.

ಜ.29 ರಿಂದ ಈ ಸೌಲಭ್ಯ ಜಾರಿಗೆ ಬಂದಿದ್ದು, ರೈಲ್ವೆ ಮ್ಯೂಸಿಯಂಗೆ ಭೇಟಿ ನೀಡುವ ಪ್ರವಾಸಿಗರು ಹಾಗೂ ಸಂದರ್ಶಕರು ಯುಪಿಐ ಅಥವಾ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪಾವತಿ ವ್ಯವಸ್ಥೆ ಬಳಸಿಕೊಳ್ಳಬಹುದು. ನಗದು ರಹಿತ, ಸುರಕ್ಷಿತ ಹಾಗೂ ಸುಲಭ ಪಾವತಿ ಪಾರದರ್ಶಕ ವ್ಯವಸ್ಥೆ ಒದಗಿಸುವ ಉದ್ದೇಶ ಹೊಂದಿದ್ದು, ದೇಶದ ವಿವಿಧ ಭಾಗಗಳಿಂದ ಆಗಮಿಸುವ ಪ್ರವಾಸಿಗರಿಗೆ ಇದು ಅನುಕೂಲಕಾರಿ.

ಈ ಡಿಜಿಟಲ್ ಪಾವತಿ ಸೌಲಭ್ಯ ಡಿಜಿಟಲ್ ಇಂಡಿಯಾ ಯೋಜನೆಯತ್ತ ಭಾರತೀಯ ರೈಲ್ವೆಯ ಬದ್ಧತೆಯನ್ನು ಪ್ರತಿಬಿಂಬಿಸುತ್ತಿದ್ದು, ಪಾರಂಪರಿಕ ಹಾಗೂ ಪ್ರವಾಸಿ ತಾಣಗಳಲ್ಲಿ ವೀಕ್ಷಕರಿಗೆ ಉತ್ತಮ ಸೇವೆ ಮತ್ತು ಸುಲಭ ಪ್ರವೇಶವನ್ನು ಒದಗಿಸಲು ನೆರವಾಗುತ್ತದೆಂದು ಮೈಸೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಹಾಗೂ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ಸರ್ವರೋಗಕ್ಕೂ ಆಯುರ್ವೇದದಲ್ಲಿ ಪರಿಹಾರವಿದೆ

ಮೈಸೂರು ಆಯುರ್ವೇದ ವೈದ್ಯ ಡಾ.ವೆಂಕಟೇಶ್ ವಿಶ್ವಾಸದ ನುಡಿ


ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಸರ್ಕಾರಿ ಆಯುರ್ವೇದ ಮಹಾವಿದ್ಯಾನಿಲಯದ ಸಭಾಂಗಣದಲ್ಲಿ 'ಆಯುರ್ವೇದ ಔಷಧಿ ಪದ್ಧತಿ' ಪ್ರಚಾರೋಪನ್ಯಾಸ ಕಾರ್ಯಕ್ರಮಕ್ಕೆ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಚಾಲನೆ ನೀಡಿದರು.

ಮೈಸೂರು,ಜ.30(ಎಂಟಿವೈ)– ಆಧುನಿಕ ಜೀವನಶೈಲಿ, ಅನಿಯಮಿತ–ದೋಷಪೂರಿತ ಆಹಾರ ಪದ್ಧತಿಯಿಂದಾಗಿ ಆರೋಗ್ಯ ಕೆಡಿಸಿಕೊಳ್ಳುತ್ತಿರುವ ಜನರು ಆಯುರ್ವೇದ ವೈದ್ಯ ಪದ್ಧತಿಯನ್ನು ಅನುಸರಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಲು ಗಮನ ಹರಿಸಬೇಕು ಎಂದು ಮೈಸೂರಿನ ಆಯುರ್ವೇದ ವೈದ್ಯ ಡಾ. ವೆಂಕಟೇಶ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಸರ್ಕಾರಿ ಆಯುರ್ವೇದ ಮಹಾವಿದ್ಯಾನಿಲಯದ ಸಭಾಂಗಣದಲ್ಲಿ 'ಆಯುರ್ವೇದ ಔಷಧಿ ಪದ್ಧತಿ' ಕುರಿತು ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅನಾರೋಗ್ಯ ಪೀಡಿತರಾಗುತ್ತಿರುವ ಜನ ಸಾಮಾನ್ಯರು ಆರೋಗ್ಯ ಕಾಪಾಡಿಕೊಳ್ಳಲು ದೈನಂದಿನ ಜೀವನದಲ್ಲಿ ಆಯುರ್ವೇದ ವೈದ್ಯ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ರೋಗ ಬಂದ ಮೇಲೆ ಚಿಂತಿಸುವುದಕ್ಕಿಂತ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ. ಅದಕ್ಕಾಗಿ ಆಯುರ್ವೇದ ವೈದ್ಯ ವಿಜ್ಞಾನ ಸಹಕಾರಿಯಾಗಿದೆ ಎಂದರು.

ಪ್ರಸ್ತುತ ತಲೆಮಾರಿನ ಜನರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇದೆ. ಆಹಾರ ಪದ್ಧತಿ, ಒತ್ತಡದ ಜೀವನಶೈಲಿ, ಅನಗತ್ಯ ಹಪಹಪಿಯಿಂದಾಗಿ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತಿದೆ. ಇದರಿಂದಾಗಿ ಪ್ರತಿ ದಿನ ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗೂ ಪರಿತಪಿಸು ವಂತಾಗುತ್ತಿದೆ. ಆ್ಯಂಟಿ ಬಯೋಟಿಕ್ ಔಷಧಿಗಳನ್ನು ಬಳಸುತ್ತಿರುವುದು ಹೆಚ್ಚಾಗಿದ್ದು, ಈ ಔಷಧಿಗಳು ರೋಗವನ್ನು ತಾತ್ಕಾಲಿಕವಾಗಿ ಉಪಶಮನಗೊಳಿಸುತ್ತವೆ. ದೇಹದ ಮೇಲೆ ದುಷ್ಪರಿಣಾಮ ಬೀರುತ್ತವೆ. ಅಲ್ಲದೆ ರೋಗ ಉಲ್ಬಣಗೊಳಿಸಿ ಜೀವನವೇ ರೋಗಗ್ರಸ್ತವಾಗಿಸುತ್ತಿದೆ. ಈ ಪದ್ಧತಿ ಮನುಕುಲಕ್ಕೆ ಮಾರಕವಾಗುತ್ತಿದ್ದು, ಬಿಪಿ, ಶುಗರ್, ಕ್ಯಾನ್ಸರ್ ಮುಂತಾದ ರೋಗಗಳಿಗೆ ಕಾರಣವಾಗುತ್ತಿದೆ. ಈ ರೋಗಗಳಿಂದ ಹೊರ ಬರಬೇಕೆಂದರೆ ಆಯುರ್ವೇದ ವೈದ್ಯ ಪದ್ಧತಿಯ ಸರಳ ಸುಲಭ ಮಾರ್ಗಗಳನ್ನು ಅನುಸರಿಸುವುದು ಅತೀ ಮುಖ್ಯ ಎಂದು ತಿಳಿಸಿದರು.

ವಿಶ್ವವನ್ನೇ ಕಾಡಿದ ಕೊರೋನಾ ವೈರಾಣು ಪರಿಸರದಲ್ಲಿ ಇತ್ತಾದರೂ ಇದುವರೆಗೂ ತೊಂದರೆ ನೀಡಿರಲಿಲ್ಲ. ಆದರೆ ಅದು ಉಲ್ಬಣಗೊಂಡು ಲಕ್ಷಾಂತರ ಜನರನ್ನು ಬಲಿಪಡೆಯಿತು. ಈ ವೈರಾಣುವಿನ ವಿರುದ್ಧ ಹೋರಾಡಲು ಆಯುರ್ವೇದದಲ್ಲಿ ಹೇಳಿರುವ ಕಷಾಯಗಳು ಪ್ರಮುಖ ಪಾತ್ರ ವಹಿಸಿದವು. ಎಲ್ಲಾ ರೋಗಕ್ಕೂ ಆಯುರ್ವೇದದಿಂದ ಉಪಾಯ ಕಂಡುಕೊಳ್ಳಬಹುದು ಎಂದರು.

ಇದೇ ವೇಳೆ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಶ್ರೀವತ್ಸ ವಹಿಸಿದ್ದರು.

ಈ ಸಂದರ್ಭದಲ್ಲಿ ಪ್ರಸಾರಾಂಗದ ಅಧೀಕ್ಷಕ ಎಂ.ಡಿ. ಚನ್ನಬಸಪ್ಪ, ಸಹಾಯಕ ನಿರ್ದೇಶಕ ಡಾ. ಬಿ.ಎಸ್.ಅನಿಲಕುಮಾರ ಬೊಮ್ಮಘಟ್ಟ ಹಾಗೂ ಕಾಲೇಜಿನ ಆಡಳಿತ ವರ್ಗ, ಅಧ್ಯಾಪಕ, ಅಧ್ಯಾಪಕೇತರ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ ಶ್ರವಣ್ ಕುಮಾರ್ ಕಾರ್ಯಕ್ರಮ ನಿರೂಪಿಸಿ, ವಂದನಾರ್ಪಣೆಯನ್ನು ನೆರವೇರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.1.2026 ಶನಿವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಸೈಬರ್‌ವರ್ಸ್ ಫೌಂಡೇಷನ್, ಭೇರುಂಡ ಫೌಂಡೇಷನ್** : ಎಐ ಸಮ್ಮಿಟ್, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ. ಸಂಜಯ್ ತ್ಯಾಗಿ, ಅಧ್ಯಕ್ಷತೆ : ಸೈಬರ್‌ವರ್ಸ್ ಫೌಂಡೇಷನ್ ನಿರ್ದೇಶಕ ಎಂ.ಎಲ್. ಕಾಂತರಾಜ್ ಅರಸ್, ವಿಜ್ಞಾನ ಲ್ಯಾಬ್ಸ್ ಸಿಇಓ ಸ್ಥಾಪಕ ಶ್ರೀನಿವಾಸ್ ವರದರಾಜನ್, ಸ್ಥಳ: ಮೈರಾ ಸ್ಕೂಲ್ ಆಫ್ ಬ್ಯುಸಿನೆಸ್, ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರಕ್ತ ಪದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ. ಮೋತಿಯಾ ಬಿಂದು (cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Refractrive errors) ತಿದ್ದುಪಡಿ, ಅಂಬ್ಲಾಯೋಪಿಯಾ ನಿರ್ವಹಣೆ, ಮಧು ಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನಿಟಿಸ್ ಫಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಭಂಗು, ಚರ್ಮರೋಗ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಸಿಲ್ಕ್ ಇಂಡಿಯಾ–2026 :** ಸಿಲ್ಕ್ ಇಂಡಿಯಾ ಸೀರೆ ಪ್ರದರ್ಶನ, ಸ್ಥಳ: ನಂಜರಾಜ ಬಹದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ ಪ್ರಸಾರಾಂಗ :** ರಾಷ್ಟ್ರಕವಿ ಕುವೆಂಪು ಜನ್ಮ ದಿನೋತ್ಸವ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕುವೆಂಪು ಕುರಿತು : ವಿದ್ವಾಂಸ ಪ್ರೊ. ರಾಮೇಗೌಡ, ಅಧ್ಯಕ್ಷತೆ : ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಡಾ. ಅಮ್ಮ ರಾಮಚಂದ್ರ ಅವರಿಂದ ಕುವೆಂಪು ಗೀತಗಾಯನ, ಜನಪದ ಕಲೆಗಳ ಪ್ರದರ್ಶನ : ಜನಪದ ಕಲಾವಿದ ಡಾ. ಸುಂದರೇಶ್, ಸ್ಥಳ: ಕುವೆಂಪು ಸಭಾಂಗಣ, ಬೆಳಗ್ಗೆ 11ಕ್ಕೆ.
- **ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ :** ಜಿಲ್ಲಾ ಸಮಾವೇಶ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.
- **ಬೇವಿನ ಮರದ ಶ್ರೀ ಎಲ್ಲಮ್ಮ ದೇವಸ್ಥಾನ :** 78ನೇ ವರ್ಷದ ಮಹೋತ್ಸವ, ಬೆಳಗ್ಗೆ 11 ರಿಂದ ಅಭಿಷೇಕ, ಗಣಪತಿ ಹೋಮ, ನವಗ್ರಹ ಹೋಮ, ಧನ್ವಂತ್ರಿ ಹೋಮ, ದುರ್ಗಾ ಹೋಮ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೆ.ಆರ್. ಮೊಹಲ್ಲಾ.
- **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಆರ್. ಲಕ್ಷ್ಮೀನರಸಿಂಹನ್, ಗೌರವ ಅತಿಥಿಗಳು : ಆಡಳಿತ ಮಂಡಳಿ ಸದಸ್ಯ ಎಸ್.ಎಲ್. ರಾಮಚಂದ್ರ, ಹೆಚ್.ವಿ. ವಿಶ್ವೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಮಧ್ಯಾಹ್ನ 3ಕ್ಕೆ.
- **ಬಿಂಬ ಲರ್ನಿಂಗ್ ಸೆಂಟರ್ :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಆಯಿಷ್ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ರಾಜಲಕ್ಷ್ಮಿ, ಅಧ್ಯಕ್ಷತೆ : ಬಿಂಬ ಟ್ರಸ್ಟ್ ಸಂಸ್ಥಾಪಕ ಟ್ರಸ್ಟಿ ಡಾ. ಪ್ರವೀಣ್ ಚೌತಿ, ಸ್ಥಳ: ಲೇಖನ ಪಾರ್ಟಿ ಹಾಲ್, ಸಂಜೆ 5 ರಿಂದ.
- **ಎಟಿಎಂಇ ಇಂಜಿನಿಯರಿಂಗ್ ಕಾಲೇಜು :** ಸೈಬರ್ ಸುರಕ್ಷಾ ಅಭಿಯಾನ, ಸೈಬರ್ ವಂಚನೆ ಕುರಿತು ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮ, ಉಪಸ್ಥಿತರು : ಅಕ್ಷಯ್ ನಾಗರಾಜ್ ನಾಯಕ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್ ಬಾಬು, ಉಪಸ್ಥಿತರು : ಕೆ. ಶಿವಶಂಕರ್, ಆರ್. ವೀರೇಶ್, ಡಾ. ಎಲ್. ಬಸವರಾಜ್, ಎಂ.ಕೆ. ನಂಜಯ್ಯ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ :** ರಾಮಾಯಣ ಪ್ರವಚನ ಮಾಲಿಕೆ, ವಿಮರ್ಶಕ, ಚಿಂತಕ ವಿದ್ವಾನ್ ಗ.ನಾ. ಭಟ್ಟ ಅವರಿಂದ ಕಿಷ್ಕಿಂದಕಾಂಡ–ಪ್ರವಚನ ಎಂಟನೆಯ ಸರಣಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಕಲಾ ಸಂದೇಶ ಪ್ರತಿಷ್ಠಾನ :** ನೃತ್ಯೋಪಾಸನಾ–2026, ಉದ್ಘಾಟನೆ : ಕೇನ್ಸ್ ಟೆಕ್ನಾಲಜಿ ಅಧ್ಯಕ್ಷೆ ಶ್ರೀಮತಿ ಸವಿತಾ ರಮೇಶ್, ಮೌಲ್ಯನಿಧಿ ಭೀಮಸೇನಾ ಅವರಿಂದ ಸೋಲೋ ಭರತನಾಟ್ಯ ನೃತ್ಯ ರೂಪಕ, ವಿದುಷಿ ಪವನ್ ಕುಮಾರ್ ಅವರಿಂದ ಸೋಲೋ ಭರತನಾಟ್ಯ ಗಾಯನ, ಸಂದೇಶ್ ಭಾರ್ಗವ್ ಮತ್ತು ಶಿಷ್ಯರಿಂದ ಸಪ್ತನಿಧಿ ನಮನ ಭರತನಾಟ್ಯ ನೃತ್ಯ ನಾಟಕ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ, ಸಂಜೆ 6 ರಿಂದ.
- **ವ್ಯವಸ್ಥಾಪಕರು :** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮತಾಯಿ ಅಮ್ಮನವರ 22ನೇ ಪೂಜಾ ಮಹೋತ್ಸವ, ಸ್ಥಳ: ಮನೆ ನಂ. 822, ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ, ಸಂಜೆ 6 ರಿಂದ.
- **ಸಂಚಲನ ಮೈಸೂರು :** ಸಂಚಲನ ದಶಮಾನೋತ್ಸವ, ಸಚ್ಚಿದಾನಂದ ಆಚಾರ್ಯ ಅವರಿಂದ ಕೊಳಲು ವಾದನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಪ್ರಾಸ್ತಾವಿಕ ನುಡಿ : ದೀಪಕ್ ಮೈಸೂರು, ಸ್ಥಳ: ಕಿರುರಂಗಮಂದಿರ, ಸಂಜೆ 6ಕ್ಕೆ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಸಂಜೆ 6.30ಕ್ಕೆ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಶ್ರೀಮತಿ ಎಂ.ವಿ. ಅನಿತಾ ಮತ್ತು ಶ್ರೀಮತಿ ಹೆಚ್.ಬಿ. ರೂಪಶ್ರೀಯವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರನಗರ.
- **ಸಾಧನಾ ಮಂದಿರ(ಮೈಸೂರು):** ಸರಳವಾಗಿ ಕಲಿತು ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ವಿಶೇಷ ತರಬೇತಿ ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ. ಭಟ್ ಹಾಗೂ ಎ.ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಪ್ರೊ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ, ದ್ವಿತೀಯ ಪಿಯುಸಿ ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ–ಅರ್ಥಶಾಸ್ತ್ರ, ಭಾಗವಹಿಸುವವರು ಮೈಸೂರಿನ ಸಪ್ತಗಿರಿ ಪದವಿಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ವೀಣಾ ಎಂ.ಕೆ. ಪ್ರಸ್ತುತಿ–ದಿಗ್ವಿಜಯ್ .ಬಿ., 9.15 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎನ್. ಜೆ. ನಂದಿನಿ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ – ಹಳೇಬೇರು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ತೋಟಗಾರಿಕಾ ಬೆಳೆಗಳ ಬೇಸಾಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ– ಚಾಮರಾಜನಗರ ತಾಲೂಕು ಸಂತೇಮರಹಳ್ಳಿ ಹೋಬಳಿ, ಹೊಮ್ಮಗ್ರಾಮದ ಕೃಷಿಕ ದಂಪತಿ ಎನ್. ಸಿದ್ದೇಗೌಡ ಹಾಗೂ ಜ್ಯೋತಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಭವ್ಯ ಪರಂಪರೆಯ ಉಳಿವಿಗಾಗಿ ಹಿಂದೂಗಳು ಒಂದಾಗಬೇಕು



ಹಿಂದೂ ಸಂಗಮ ಆಯೋಜನಾ ಸಮಿತಿ ಬೃಹತ್ ಶೋಭಾಯಾತ್ರೆ ನಡೆಸಿತು.

ವಿರಾಜಪೇಟೆ, ಜ.30–ಭವ್ಯ ಪರಂಪರೆಯ ಉಳಿವಿಗಾಗಿ ಹಿಂದೂ ಬಾಂಧವರು ಒಂದಾಗಬೇಕಾದ ಅವಶ್ಯಕತೆ ಇದೆ ಎಂದು ಮಂಗಳೂರು ವಿಭಾಗ ಸಹ ಪ್ರಾಂತ ಕಾರ್ಯವಾಹ ಕೃಷಿಕ ಸುಬ್ರಮಣ್ಯ ಬರಣಿಕೆರೆ ತಿಳಿಸಿದ್ದಾರೆ.

ಹಿಂದೂ ಸಂಗಮ ಆಯೋಜನಾ ಸಮಿತಿ ತಾಲೂಕು, ಕಾಕೋಟುಪರಂಬು ಮಂಡಲದ ವತಿಯಿಂದ ಪರಂಬು ಮೈದಾನದಲ್ಲಿ ನಡೆದ ಹಿಂದೂ–ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಸನಾತನ ಧರ್ಮ ಬಹು ಇತಿಹಾಸ ಉಳ್ಳ ಸಂಸ್ಕೃತಿ. ಸಾವಿರಾರು ವರ್ಷಗಳ ಹಿಂದೆ ನಮ್ಮ ಪೂರ್ವಜರು ತಂತ್ರಜ್ಞಾನದ ಪರಿಕಲ್ಪನೆಯನ್ನು ಹೊಂದಿ ಸಹಕಾರಗೊಳಿಸಿದ್ದಾರೆ. ಅಂದು ಹೊಂದಿದ್ದ ಪರಿಕಲ್ಪನೆಯು ಇಂದು ಅಧುನಿಕ ಭಾರತದ ಚಿತ್ರಣದಲ್ಲಿ ಹೊಸ ಭಾಷ್ಯ ಬರೆದಿದೆ ಎಂದರು.

ಮಹಾಭಾರತ ರಾಮಾಯಣ ಭಾರತದಲ್ಲಿ ಹುಟ್ಟಿದರೂ ಇಂದು ವಿಶ್ವವ್ಯಾಪಿಯಾಗಿದೆ. ವಿಶ್ವದ ಕೆಲವು ಮುಸ್ಲಿಂ ರಾಷ್ಟ್ರಗಳು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಇದನ್ನು ಅಳವಡಿಸಿಕೊಂಡಿದೆ. ಅನ್ಯ ಮತೀಯರು ವಿವಿಧತೆಯಲ್ಲಿ ಏಕತೆ ಕಂಡ ಭಾರತೀಯ ಸಂಸ್ಕೃತಿಯನ್ನು ಮೆಚ್ಚಿ ಸನಾತನ ಧರ್ಮವನ್ನು ಒಪ್ಪಿಕೊಂಡಿದ್ದಾರೆ ಎಂದರು.

ಮಾಜಿ ಜಿಲ್ಲಾ ಅಧ್ಯಕ್ಷ ಪಾಳೆಯಂಡ ರಾಬೀನ್ ದೇವಯ್ಯ ಅವರು ಪ್ರಾಸ್ತಾವಿಕ ಭಾಷಣದಲ್ಲಿ, ಸನಾತನ ಧರ್ಮ ಉಳಿವಿಗಾಗಿ ಧೀಮಂತ ಸಂಸ್ಕತಿ, ಸಂಸ್ಕಾರ ಉಳಿವಿಗಾಗಿ ಹೋರಾಟದ ಮೂಲಕ ಸಂಘ ಶತಪ್ರಯತ್ನದೊಂದಿಗೆ 100 ವರ್ಷಗಳನ್ನು ಪೂರೈಸಿದೆ. ಹಿಂದೂ ಧರ್ಮ ಉಳಿವಿಗಾಗಿ ಸಹಸ್ರಾರು ಬಾಂಧವರು ತ್ಯಾಗ ಬಲಿದಾನಗಳನ್ನ ಮಾಡಿದ್ದಾರೆ ಎಂದರು.

ಹಿಂದೂ ಸಂಗಮ ಆಯೋಜನಾ ಸಮಿತಿಯ ತಾಲೂಕು ಸಂಚಾಲಕ ಕುಪ್ಪಂಡರಾಜು ಕಾರ್ಯಪ್ಪ ಮಾತನಾಡಿದರು. ವೇದಿಕೆಯಲ್ಲಿ ಸಂಘ ಕಾರ್ಯಕರ್ತರಾದ ಚರ್ಮಂಡ ಅಪ್ಪಣು ಉಪಸ್ಥಿತರಿದ್ದರು. ಕಟ್ಟೇರ ಮೊಟ್ಟೆಯಿಂದ ಆರಂಭವಾದ ಶೋಭಾಯಾತ್ರೆ ಕಾಕೋಟುಪರಂಬು ಮೈದಾನದಲ್ಲಿ ಸಮಾಪ್ತಿಗೊಂಡಿತು. ಶೋಭಾಯಾತ್ರೆಯಲ್ಲಿ ಕಾಕೋಟುಪರಂಬು ವ್ಯಾಪ್ತಿಯ ನಾಲ್ಕು ಗ್ರಾಮಗಳ ಮಹಿಳೆಯರು ಸೇರಿದಂತೆ ಹಿಂದೂ ಬಾಂಧವರು ಅಮ್ಮಂಡಿರ ಗಣಪತಿ, ಕುಂಞಿರ ಭೀಮಯ್ಯ, ಹಿಂದೂ ಸಂಗಮ ಆಯೋಜನಾ ಸಮಿತಿಯ ಸದಸ್ಯರು ಮಂಡಲದ ಹಿಂದೂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಗ್ರಾಮಾಂತರ ಪೊಲೀಸ್ ಇಲಾಖೆ ವತಿಯಿಂದ ಬಿಗಿ ಬಂದೋಬಸ್ತು ವ್ಯವಸ್ಥೆ ಮಾಡಲಾಗಿತ್ತು.

ಸಂಪಾಜೆ ವ್ಯಾಪ್ತಿಯಲ್ಲಿ ಕಾಡಾನೆಗಳ ದಾಂಧಲೆ

ನಾಪೋಕ್ಲು ಜ.30 (ದುಗ್ಗಳ)–ಸಂಪಾಜೆ ಗ್ರಾಮದ ಪೆಲ್ತಡ್ಕ ಗೂನಡ್ಕದ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ರಾತ್ರಿ ವೇಳೆ ಕೃಷಿ ತೋಟಕ್ಕೆ ನುಗ್ಗಿ ಅಪಾರ ಕೃಷಿ ನಾಶ ಮಾಡಿದ ಘಟನೆ ಸಂಭವಿಸಿದೆ.

ಗೂನಡ್ಕದ ಪ್ರವೀಣ ಅವರ ಮನೆಯ ಮುಂಭಾಗದಲ್ಲಿ ಗುರುವಾರ ರಾತ್ರಿ ಕಾಡಾನೆ ಹಿಂಡು ಕಾಣಿಸಿಕೊಂಡಿದೆ. ಭಯಗೊಂಡ ಮನೆಯವರು ಸಿಡಿಮದ್ದು ಸಿಡಿಸಿ ಓಡಿಸಿದ್ದಾರೆ. ಅನಂತರ ಕಾಡಾನೆ ಹಿಂಡು ತೋಟಕ್ಕೆ ನುಗ್ಗಿ, ತೆಂಗು, ಅಡಿಕೆ, ಬಾಳೆಗಿಡಗಳನ್ನು ಹಾನಿಮಾಡಿದೆ. ಅಲ್ಲದೆ ಅಕ್ಕಪಕ್ಕದ ನಿವಾಸಿಗಳಾದ ಗಣೇಶ, ಜಗನ್ನಾಥ, ವಸಂತ, ಮನಮೋಹನ ಅವರ ತೋಟಕ್ಕೆ ನುಗ್ಗಿ ಕೃಷಿಗೆ ಹಾನಿ ಮಾಡಿದೆ.

ಆನೆ ದಾಂದಲೆಯಿಂದ ಈ ವ್ಯಾಪ್ತಿಯ ಕೃಷಿಕರು ಆತಂಕಕ್ಕೆ ಒಳಗಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾನಿಗೊಳಗಾದ ಕೃಷಿಕರ ತೋಟಕ್ಕೆ ಭೇಟಿ ನೀಡಿ ಆನೆ ಹಾವಳಿಯನ್ನು ತಡೆಗಟ್ಟುವ ಬಗ್ಗೆ ಕ್ರಮಕೈಗೊಳ್ಳಲು ಹಾಗೂ ಕೃಷಿ ಹಾನಿಗೊಳಗಾದವರಿಗೆ ನಷ್ಟ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಗೂನಡ್ಕದ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ರಾತ್ರಿ ವೇಳೆ ಕೃಷಿ ತೋಟಕ್ಕೆ ನುಗ್ಗಿ ಅಪಾರ ಕೃಷಿ ನಷ್ಟ ಮಾಡಿರುವುದು.

ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ: ಎಸ್ಪಿ

ಕುಶಾಲನಗರ, ಜ.30–ಸಾರ್ವಜನಿಕರು ನಿರೀಕ್ಷಿತ ರೀತಿಯಲ್ಲಿ ಸಹಕರಿಸಿದಾಗ ಮಾತ್ರ ಅಪರಾಧ ಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅಭಿಪ್ರಾಯಪಟ್ಟಿದ್ದಾರೆ.

ಸೋಮವಾರಪೇಟೆ ಉಪ ವಿಭಾಗದ ಪೊಲೀಸ್ ಇಲಾಖೆ ಶುಕ್ರವಾರ ಇಲ್ಲಿನ ರೈತ ಸಹಕಾರ ಭವನದಲ್ಲಿ ನಡೆಸಿದ ಜನ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕಾನೂನು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯ. ಅಪರಾಧ ಕೃತ್ಯ ನಡೆಸುವವರ ಹಾಗೂ ಕಾನೂನು ಉಲ್ಲಂಘಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಸಂಬಂಧ ಸಾರ್ವಜನಿಕರು ಜಾಗೃತರಾಗಿ ಪೊಲೀಸರೊಂದಿಗೆ ಸಹಕರಿಸಿದರೆ ಅಪರಾಧ ಮುಕ್ತ ಸಮಾಜ ನಿರ್ಮಿಸಬಹುದೆಂದರು.

ಜಿಲ್ಲೆಯಲ್ಲಿ ಶಾಲಾ, ಕಾಲೇಜುಗಳ ಸರಹದ್ದಿನಲ್ಲಿ ಗಾಂಜಾ ಮತ್ತಿತರ ಮಾದಕ ದ್ರವ್ಯಗಳ ಬಳಕೆ, ಮಾರಾಟ ಮಾಡುತ್ತಿರುವ ಬಗ್ಗೆ ಪೊಲೀಸ್ ಇಲಾಖೆಯ ಗಮನದಲ್ಲಿದೆ. ಹಲವು ತಿಂಗಳಿಂದ ಈ ಬಗ್ಗೆ ಅನೇಕ ಪ್ರಕರಣಗಳನ್ನು ಭೇದಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದರು.

ಡಿವೈಎಸ್ಪಿ ಚಂದ್ರಶೇಖರ್ ಮಾತನಾಡಿ, ಜಿಲ್ಲೆಯಲ್ಲಿ ಮಾದಕ ದ್ರವ್ಯಗಳನ್ನು ಮಾರುವ, ಸಂಗ್ರಹಿಸುವ, ಬಳಸುವ ವರನ್ನು ಕಠಿಣ ಕಾನೂನು ವ್ಯಾಪ್ತಿಗೆ ತರಲಾಗುವುದು. ಮಾದಕ ವ್ಯಸನಿಗಳನ್ನು ಸರ್ಕಾರದ ವೆಚ್ಚದಲ್ಲಿ ವ್ಯಸನ ಮುಕ್ತ ಕೇಂದ್ರಗಳಿಗೆ ಕಳುಹಿಸಿ ಸುಧಾರಣೆ ಮಾಡಲಾಗುವುದು ಎಂದರು.

ಪಟ್ಟಣದಲ್ಲಿ ಟ್ರಾಫಿಕ್ ಸಮಸ್ಯೆ, ಆಟೋ ನಿಲ್ದಾಣದ ಸಮಸ್ಯೆ, ಬೀದಿಬದಿ ವ್ಯಾಪಾರಿಗಳ ಸಮಸ್ಯೆ ಹಾಗೂ ಗಾಂಜಾ ಮಾರಾಟ ಸೇರಿದಂತೆ ಇನ್ನಿತರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದರು. ಕೂಡಿಗೆ ಸರ್ಕಲ್‌ನಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ. ಗಂಧದಕೋಟೆ ಮದ್ಯದ ಅಂಗಡಿಗಳ ಮುಂದೆ ರಸ್ತೆ ಬದಿ ವಾಹನಗಳನ್ನು ನಿಲ್ಲಿಸುವುದು ಅಪಘಾತಗಳಿಗೆ ಕಾರಣವಾಗಿದೆ. ಉತ್ತರ ಭಾರತ ರಾಜ್ಯಗಳಿಂದ ಬಂದಿರುವ ಕೂಲಿ ಕಾರ್ಮಿಕರಿಂದ ಕಾನೂನುಬಾಹಿರ ಕೃತ್ಯಗಳು ನಡೆಯುತ್ತಿವೆ ಆದ್ದರಿಂದ ಪೊಲೀಸ್ ಇಲಾಖೆ ಈ ಬಗ್ಗೆ ತೀವ್ರ ನಿಗಾವಹಿಸುವಂತೆ ಸಲಹೆ ನೀಡಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಎಸ್.ನಾಗೇಶ್, ಕೊಡಗು ಅಭಿವೃದ್ಧಿ ಸಮಿತಿಯ ದಾವೂದ್, ಮಹಿಳಾ ಸಮಾಜದ ಅಧ್ಯಕ್ಷ ಸಲಿನಾಪೇದ್ರು ವಿವಿಧ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಪೊಲೀಸ್ ಅಧಿಕಾರಿಗಳು ಪಾಲ್ಗೊಂಡಿದ್ದರು.



ಕುಶಾಲನಗರದಲ್ಲಿ ಜನ ಸಂಪರ್ಕ ಸಭೆ ನಡೆಯಿತು.

ಇಂದಿನಿಂದ ಕಾವೇರಿ–2 ತಂತ್ರಾಂಶದ ಬಳಕೆ ಬಗ್ಗೆ ತರಬೇತಿ

ಮಡಿಕೇರಿ, ಜ.30–ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಕಾಗದರಹಿತ ನೋಂದಣಿ ಪದ್ಧತಿಯನ್ನು ರಾಜ್ಯ ಸರ್ಕಾರವು ಹೊಸದಾಗಿ ಪರಿಚಯಿಸಲಿದೆ. ಇದನ್ನು ಯಶಸ್ವಿಯಾಗಿ ಕೈಗೊಳ್ಳಲು ಸುಧಾರಿತ ಕಾವೇರಿ–2 ತಂತ್ರಾಂಶದ ಬಳಕೆ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜ. 31ರಂದು ಮಧ್ಯಾಹ್ನ 12.30ರಿಂದ 1.30ಗಂಟೆವರೆಗೆ ಪೊನ್ನಂಪೇಟೆ ಉಪ ನೋಂದಣಾಧಿಕಾರಿ ಕಚೇರಿ, ಸಂಜೆ 4ರಿಂದ 5ಗಂಟೆಯವರೆಗೆ ವಿರಾಜಪೇಟೆ ತಹಸೀಲ್ದಾರ್ ಸಭಾಂಗಣದಲ್ಲಿ, ಫೆ. 2ರ ಮಧ್ಯಾಹ್ನ 12 ರಿಂದ 1ಗಂಟೆಯವರೆಗೆ ಕುಶಾಲನಗರ ಉಪ ನೋಂದಣಾಧಿಕಾರಿ ಕಚೇರಿ ಮತ್ತು ಸಂಜೆ 4.30 ರಿಂದ 5.30ರವರೆಗೆ ಮಡಿಕೇರಿ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮತ್ತು ಫೆ. 3ರ ಮಧ್ಯಾಹ್ನ 1 ಗಂಟೆಯಿಂದ 2ಗಂಟೆಯವರೆಗೆ ಸೋಮವಾರಪೇಟೆ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ತರಬೇತಿ ಕಾರ್ಯಕ್ರಮ ನಡೆಯಲಿದೆ ಎಂದು ಮಡಿಕೇರಿ ಉಪ ನೋಂದಣಿ ಅಧಿಕಾರಿ ಅವರು ತಿಳಿಸಿದ್ದಾರೆ.

ಮಂಡ್ಯದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ

ಶ್ರೀಪುರುಷ ಎಂಬ ಹೆಸರಿನಲ್ಲಿ ಕನ್ನಡ ಭವನ ನಾಮಾಂಕಿತ: ಎನ್.ಚಲುವರಾಯಸ್ವಾಮಿ



ಕನ್ನಡ ಭವನ ನಿರ್ಮಾಣಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಶಂಕುಸ್ಥಾಪನೆ ನೆರವೇರಿಸಿದರು.

ಮಂಡ್ಯ, ಜ.30– ಸುಮಾರು 800 ವರ್ಷಗಳ ಹಿಂದೆ ಗಂಗರ ಸಾಮ್ರಾಜ್ಯ ಕಟ್ಟಿ ಸಾಹಿತ್ಯ ಲೋಕಕ್ಕೆ ಕಾಣಿಕೆ ನೀಡಿದ ಸಾಮ್ರಾಟ ಶ್ರೀಪುರುಷನ ಹೆಸರಿನಲ್ಲಿ ಕನ್ನಡ ಭವನ ನಿರ್ಮಿಸಬೇಕು. ಶ್ರೀಪುರುಷ ಕನ್ನಡ ಭವನವನ್ನು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ಎಂದು ಬರೆದು, ಅದರ ಜೊತೆಗೆ ಶ್ರೀಪುರುಷ ಕನ್ನಡ ಭವನ ಎಂಬ ನಾಮಾಂಕಿತ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸವಿನೆನಪಿಗಾಗಿ ಕನ್ನಡ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜಿಲ್ಲೆಯಲ್ಲಿ ಪಕ್ಷಾತೀತವಾಗಿ ಸಾರ್ವಜನಿಕರು, ಸಾಹಿತಿಗಳು, ಸಾಹಿತ್ಯ ಅಭಿಮಾನಿಗಳು ಮತ್ತು ಅನೇಕ ಸಂಘಟನೆಗಳು ನೀಡಿದ ಸಹಕಾರದಿಂದ ಯಶಸ್ವಿಯಾಗಿ ಮಾಡಲಾಯಿತು. ಅದರ ಸವಿ ನೆನಪಿಗಾಗಿ ಕನ್ನಡ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜಿಲ್ಲೆಯಲ್ಲಿ ದೊಡ್ಡ ಮಟ್ಟದಲ್ಲಿ ಇಡೀ ರಾಜ್ಯ, ರಾಷ್ಟ್ರ ಪ್ರಪಂಚದ ಅನೇಕ ಕನ್ನಡಿಗರು ಮೆಚ್ಚುಗೆ ವ್ಯಕ್ತಪಡಿಸುವ ರೀತಿ ನಡೆಸಲಾಯಿತು. ಅದರ ಯಶಸ್ವಿಗೆ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಪ್ರತಿ ಕ್ಷಣದಲ್ಲೂ ಜಿಲ್ಲಾಡಳಿತದ ಜೊತೆ ನಿಂತು ಅಪಾರ ಕೊಡುಗೆ ನೀಡಿದ್ದು, ಕನ್ನಡ ಭವನ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಮುಖ್ಯಮಂತ್ರಿಗಳು ಜಿಲ್ಲೆಯ ಸಾಂಸ್ಕೃತಿಕ ಮತ್ತು ದೇವಸ್ಥಾನ ಅಭಿವೃದ್ಧಿಗೆ 50 ಕೋಟಿ ವಿಶೇಷ ಅನುದಾನ ನೀಡಿದ್ದಾರೆ. ಕನ್ನಡ ಭವನಕ್ಕೆ ಶಾಸಕರಾದ ಪಿ.ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಎ.ಬಿ.ರಮೇಶ್‌ಬಾಬು ಅವರು ತಲಾ 1 ಕೋಟಿ ಅನುದಾನ ನೀಡಿದ್ದಾರೆ ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಜಿಲ್ಲೆಯನ್ನು ಪ್ರಗತಿಯತ್ತ ಕೊಂಡೊಯ್ಯಬೇಕು. 87ನೇ ಸಾಹಿತ್ಯ ಸಮ್ಮೇಳನ ಕಳೆದ ವರ್ಷ ಡಿಸೆಂಬರ್‌ನಲ್ಲಿ ಅದ್ದೂರಿಯಾಗಿ ಸುಮಾರು 10 ಲಕ್ಷ ಜನಗಳ ಸಮ್ಮುಖದಲ್ಲಿ ವೈಭವಯುತವಾಗಿ ನಡೆಸಲಾಯಿತು. ಜಿಲ್ಲೆಯಲ್ಲಿ 87ನೇ ಸಾಹಿತ್ಯ ಸಮ್ಮೇಳನ ನಡೆದಿತ್ತು ಎನ್ನುವುದು ಚಿತ್ರದಲ್ಲಿ ಮಾತ್ರ ಇರಬಾರದು. ಹೀಗಾಗಿ ಶಾಶ್ವತ ನೆಲೆ ಕಲ್ಪಿಸಬೇಕು. ಆದ್ದರಿಂದ ಜಿಲ್ಲೆಯಲ್ಲಿ ಐದೂವರೆ ಕೋಟಿ ವೆಚ್ಚದಲ್ಲಿ ಬೃಹತ್ ಕನ್ನಡ ಭವನ ನಿರ್ಮಿಸಿ ವರ್ಷದೊಳಗೆ ಉದ್ಘಾಟನೆ ಮಾಡುತ್ತೇವೆ ಎಂದರು.

ವಾಲಿಬಾಲ್ ಕ್ರೀಡಾಂಗಣಕ್ಕೆ 70 ಲಕ್ಷ ಬಿಡುಗಡೆಯಾಗಿದೆ. ಎರಡೂವರೆ ತಿಂಗಳಲ್ಲಿ ಉತ್ತಮವಾದ ವಾಲಿಬಾಲ್ ಕೋರ್ಟ್ ನಿರ್ಮಿಸಿ ಕ್ರೀಡಾಪಟುಗಳಿಗೆ ಅರ್ಪಿಸುತ್ತೇವೆ. ಜೊತೆಗೆ ಬ್ಯಾಸ್ಕೆಟ್‌ಬಾಲ್ ಸ್ಟೇಡಿಯಂ ಅನ್ನು ಮೂರೂವರೆ ಕೋಟಿಯಲ್ಲಿ ಇಂಟರ್‌ನ್ಯಾಷನಲ್ ಸ್ಟೇಡಿಯಂ ಆಗಿ ನಿರ್ಮಿಸುತ್ತೇವೆ. ಮುಂದಿನ 15 ದಿನದಲ್ಲಿ ಭೂಮಿ ಪೂಜೆ ಮಾಡಲಾಗುತ್ತದೆ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ. ಕುಮಾರ, ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಜಿಪಂ ಸಿಇಒ ಕೆ.ಆರ್.ನಂದಿನಿ, ಎಸ್ಪಿ ಡಾ.ವಿ.ಜೆ.ಶೋಭಾರಾಣಿ, ಎಡಿಸಿ ಶಿವನಂದಮೂರ್ತಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮೈಶುಗರ್ ಅಧ್ಯಕ್ಷ ಎಂ.ಎಸ್.ಗಂಗಾಧರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಕಾರ್ಯಪಾಲಕ ಅಭಿಯಂತರ ಪುರುಷೋತ್ತಮ್ ಕೆ.ಎಂ, ನಗರಸಭೆ ಪೌರಾಯುಕ್ತರಾದ ಪಂಪಶ್ರೀ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಗೌಡಯ್ಯನದೊಡ್ಡಿಯಲ್ಲಿ ರೇಷ್ಮೆ ಬೆಳೆ ಕ್ಷೇತ್ರೋತ್ಸವ

ಭಾರತೀನಗರ, ಜ.30– ರೈತರು ರೇಷ್ಮೆ ಬೆಳೆ ಬೆಳೆಯುವ ಮುನ್ನ ಮಣ್ಣಿನ ಪರೀಕ್ಷೆ ಮಾಡಿಸಬೇಕು ಎಂದು ರೇಷ್ಮೆ ಕೃಷಿ ವಿಸ್ತರಣಾಧಿಕಾರಿ ಎ.ಎಲ್.ಭಾಸ್ಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಗೌಡಯ್ಯನದೊಡ್ಡಿ ಗ್ರಾಮದಲ್ಲಿ ನಡೆದ ದ್ವಿತಳಿ(ಬಿಳಿಗೂಡು) ರೇಷ್ಮೆ ಬೆಳೆ ಕ್ಷೇತ್ರೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೇಷ್ಮೆ ಬೆಳೆಗೆ ಮಣ್ಣಿನ ಪರೀಕ್ಷೆ ಮಾಡಿಸುವುದರಿಂದ ಮಣ್ಣಿನ ಗುಣಮಟ್ಟ ಮತ್ತು ಬೆಳೆಯ ಸಂರಕ್ಷಣೆ ಬಗ್ಗೆ ತಿಳಿದುಕೊಳ್ಳಬಹುದು. ರಾಸಾಯನಿಕ ಕೀಟನಾಶಕಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಿ ಸಾವಯವ ಗೊಬ್ಬರವನ್ನು ಹೆಚ್ಚು ಬಳಸಿದರೆ ಬೆಳೆ ಉತ್ತಮವಾಗಿ ಬರುತ್ತದೆ ಎಂದರು.

ದ್ವಿತಳಿ ರೇಷ್ಮೆ ಗೂಡು ಉತ್ತಮ ಬಣ್ಣ, ಆಕಾರ ಮತ್ತು ದಪ್ಪನಾದ ನೂಲು ಹೊಂದಿರುತ್ತದೆ. ಜೊತೆಗೆ ಹೆಚ್ಚಿನ ಲಾಭ ಕೂಡ ಗಳಿಸಬಹುದು. ಪ್ರಸ್ತುತ ಕೋಲಾರ ಜಿಲ್ಲೆ ದ್ವಿತಳಿ ರೇಷ್ಮೆ ಗೂಡು ಉತ್ಪಾದನೆ ಮತ್ತು ವಹಿವಾಟಿನಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದುಕೊಂಡಿದೆ ಎಂದರು.

ವಿಜ್ಞಾನಿ ಡಾ.ಶಾಲಿನಿ ಮಾತನಾಡಿ, ಚಳಿಗಾಲದಲ್ಲಿ ಹಿಪ್ಪುನೇರಳೆ ತೋಟಕ್ಕೆ ತಗಲುವ ಕೀಟಗಳು ಮತ್ತು ಅದನ್ನು ನಿಯಂತ್ರಿಸುವ ರಾಸಾಯನಿಕ ಮತ್ತು ಜೈವಿಕ ನಿಯಂತ್ರಣದ ಬಗ್ಗೆ ತಿಳುವಳಿಕೆ ನೀಡಿದರು.

ರೇಷ್ಮೆ ಕೃಷಿ ವಿಸ್ತರಣಾಧಿಕಾರಿ ಪ್ರಶಾಂತ್ ಕುಮಾರ್ ರೇಷ್ಮೆಗೂಡು ಹಾಗೂ ರೇಷ್ಮೆ ನೂಲು ಬಿಚ್ಚಣಿಕೆ ಬಗ್ಗೆ ಸಲಹೆ ನೀಡಿದರು. ದೊಡ್ಡರಸಿನಕೆರೆ ಗ್ರಾಪಂ ಅಧ್ಯಕ್ಷ ಶರತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ದರು. ವೇದಿಕೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ವೀಣಾ, ಶ್ರೀನಿವಾಸ್, ಜ್ಯೋತಿ ಹಾಗೂ ಡೇರಿ ಅಧ್ಯಕ್ಷ ಶಿವ ನಂಜೇಗೌಡ, ಕೆ.ಎಂ. ದೊಡ್ಡಿ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿ ಹೆಚ್.ಸಿ.ಸಿದ್ದ ರಾಮೇಶ್, ರೇಷ್ಮೆ ನಿರೀಕ್ಷಕರಾದ ಯು.ಎಸ್. ಕೃಷ್ಣ ಅರುಣ್ ಕುಮಾರ್ ಇದ್ದರು.



ರೇಷ್ಮೆ ಕೃಷಿ ಬೆಳೆ ಕ್ಷೇತ್ರೋತ್ಸವವನ್ನು ಗ್ರಾಪಂ ಅಧ್ಯಕ್ಷ ಶರತ್ ಉದ್ಘಾಟಿಸಿದರು.


ಬಲ್ಲೇನಹಳ್ಳಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಕೆ.ಆರ್.ಪೇಟೆ, ಜ.30– ತಾಲೂಕಿನ ಬಲ್ಲೇನಹಳ್ಳಿ ಡೇರಿ ಅಧ್ಯಕ್ಷರಾಗಿ ಬಿ.ಸಿ. ಅಶೋಕ್ ಮತ್ತು ಉಪಾಧ್ಯಕ್ಷರಾಗಿ ನರಸಿಂಹ ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬಿ.ಸಿ.ಅಶೋಕ್, ಉಪಾಧ್ಯಕ್ಷ ಸ್ಥಾನಕ್ಕೆ ನರಸಿಂಹಶೆಟ್ಟಿ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವಾಸೀಂ ಪಾಷ ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಡೇರಿ ಆವರಣದಲ್ಲಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಬಿ.ಸಿ.ಅಶೋಕ್ ಮತ್ತು ಉಪಾಧ್ಯಕ್ಷ ನರಸಿಂಹಶೆಟ್ಟಿ ಅವರನ್ನು ಕಾಂಗ್ರೆಸ್ ಮುಖಂಡ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಎಸ್.ರಾಮು, ಸಂಘದ ನಿರ್ದೇಶಕರಾದ ಬಿ.ಆರ್.ಮಹೇಶ್, ನಿಂಗೇಗೌಡ, ಉಮಾ ಶಂಕರ್, ಬಿ.ಎಲ್.ಶಿಲ್ಪ, ಸಾವಿತ್ರಮ್ಮ, ಬಿ.ಎಸ್. ಪುಟ್ಟರಾಜು ಇತರರು ಅಭಿನಂದಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ಪಟೇಲ್ ಸ್ವಾಮಿಗೌಡ, ಪಟೇಲ್ ಮಹದೇವ್, ಯೋಗಣ್ಣ, ಡೇರಿ ಕುಮಾರ್, ದಯಾ ನಂದ್, ಬಿ.ಎನ್. ಮಹೇಶ್, ಜಯರಾಂ, ನಂಜಪ್ಪನ ಕುಮಾರ್, ಶಿವಣ್ಣ, ರಾಮಕೃಷ್ಣೇಗೌಡ, ಶ್ರೀನಿವಾಸ್, ಸ್ವಾಮಣ್ಣ, ಪುಟ್ಟರಾಜು, ದೇವರಸು, ಆನಂದೇಗೌಡ, ಸಿದ್ದಪ್ಪನ ಕೃಷ್ಣೇಗೌಡ, ಸುರೇಶ್, ಹೇಮಂತ್, ರೇವಣ್ಣ, ಬಾರೆ ತಮ್ಮಣ್ಣ, ನಾಗರಾಜು, ಸೋಮು, ಕಾರ್ತಿಕ್, ಸಂತೋಷ್, ಮೋಹನ್, ಮಹೇಶ್, ರಾಮು, ಕುಮಾರ್, ನಾಗರಾಜು, ದಿನೇಶ್, ಬಸಂತ, ಮಾಜಿ ಅಧ್ಯಕ್ಷೆ ವಿನೋದಮ್ಮ, ನವೀನ್ ಕುಮಾರ್, ಪುಟ್ಟಪ್ಪ ಟೆಂಪೋ, ನ್ಯಾಯ ಬೆಲೆ ಅಂಗಡಿ ರಮೇಶ್, ಕುಮಾರ್, ಶಿವಲಿಂಗಣ್ಣ ಸೇರಿದಂತೆ ಇತರರಿದ್ದರು.



ಬಲ್ಲೇನಹಳ್ಳಿ ಡೇರಿ ಅಧ್ಯಕ್ಷರಾಗಿ ಬಿ.ಸಿ.ಅಶೋಕ್ ಮತ್ತು ಉಪಾಧ್ಯಕ್ಷರಾಗಿ ನರಸಿಂಹಶೆಟ್ಟಿ ಆಯ್ಕೆಯಾಗಿದ್ದಾರೆ.

ಯುವಜನರು ಮತದಾನದ ಕುರಿತು ಜಾಗೃತರಾಗಿ

ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್

ಚಾಮರಾಜನಗರ, ಜ.30– ಪ್ರಜಾಪ್ರಭುತ್ವದ ಬಲಿಷ್ಠತೆಗಾಗಿ ಹಾಗೂ ದೇಶದ ಉಜ್ವಲ ಭವಿಷ್ಯಕ್ಕಾಗಿ ಯುವಜನರು ಮತದಾನದ ಮಹತ್ವದ ಕುರಿತು ಜಾಗೃತರಾಗುವಂತೆ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಸಲಹೆ ನೀಡಿದರು.

ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿಂದು ಭಾರತ ಸರ್ಕಾರದ ಮೈ ಭಾರತ್ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮತದಾರರ ಜಾಗೃತಿ ಕ್ಲಬ್ ಹಾಗೂ ನಗರದ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮತದಾನ ಪ್ರತಿಯೊಬ್ಬರಿಗೂ ಪವಿತ್ರ ಹಾಗೂ ಅಮೂಲ್ಯವಾದದ್ದು. ಮತದಾನದಲ್ಲಿ ಪಾಲ್ಗೊಳ್ಳಲು ಈ ಹಿಂದೆ ಯುವಜನರು ಆಸಕ್ತಿ ತೋರುತ್ತಿರಲಿಲ್ಲ. ಚುನಾವಣೆಯಲ್ಲಿ ಭಾಗವಹಿಸುವ ಪ್ರಮಾಣವು ಕಡಿಮೆ ಇತ್ತು. ಇದನ್ನರಿತ ಭಾರತ ಚುನಾವಣಾ ಆಯೋಗವು ವಿಶೇಷವಾಗಿ 18 ತುಂಬಿದ ಯುವ ಜನರಿಗೆ ಮತದಾನದ ಜಾಗೃತಿ ಮೂಡಿಸಿ ಪ್ರೇರೇಪಿಸಲು ರಾಷ್ಟ್ರೀಯ ಮತದಾರರ ದಿನ ಆಚರಿಸಲು ನಿರ್ದೇಶನ ನೀಡಿದೆ. ಈ ಪ್ರಯುಕ್ತ 2011ರಿಂದ ದೇಶಾದ್ಯಂತ ರಾಷ್ಟ್ರೀಯ ಮತದಾರರ ದಿನ ಆಚರಿಸಿ ಮತದಾನದ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸಲಾಗುತ್ತಿದೆ ಎಂದರು.

ಯುವಜನರು ಮತದಾನ ಸಂದರ್ಭ ಯಾವುದೇ ಹಣ, ಆಮಿಷಗಳಿಗೆ ಒಳಗಾಗದೇ, ಜಾತಿ, ಧರ್ಮಗಳಿಗೆ ಕಟ್ಟು ಬೀಳದೇ ಚುನಾವಣೆಯಲ್ಲಿ ನಿರ್ಭೀತಿಯಿಂದ ಮತದಾನ ಮಾಡಬೇಕು. ದೇಶದ ಅಭಿವೃದ್ಧಿ ಚುನಾವಣೆಯಲ್ಲಿ ನಾವು ಆರಿಸುವ ವ್ಯಕ್ತಿಗಳನ್ನು ಅವಲಂಬಿಸಿದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಸಮಸ್ಯೆಗಳಿಗೆ ಸ್ಪಂದಿಸುವ, ಜನಸೇವಕರಾಗಿ ಕೆಲಸ ಮಾಡುವ ಯೋಗ್ಯ ಹಾಗೂ ಉತ್ತಮ ವ್ಯಕ್ತಿಗಳನ್ನು ಆರಿಸಬೇಕು. ಅದಕ್ಕಾಗಿ ಎಲ್ಲರೂ ಮತದಾನದ ಪ್ರಾಮುಖ್ಯತೆ ಅರಿಯಬೇಕು ಎಂದರು.

ಮತದಾನದ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರು ರಕ್ತದಾನ, ನೇತ್ರದಾನದಂತೆ ಮತದಾನವೂ ಶ್ರೇಷ್ಠವಾದದು. ಮತವನ್ನು ದಾನ ಮಾಡಬೇಕೆ ಹೊರತು ಮಾರಾಟ ಮಾಡಬಾರದು. ಮತದಾನದ ಬಗ್ಗೆ ನಿರಂತರ ಜಾಗೃತಿ ಮೂಡಿಸಲು ಪ್ರತಿವರ್ಷ ಜ.25ರಂದು ರಾಷ್ಟ್ರೀಯ ಮತದಾರರ ದಿನ ಆಚರಿಸಲಾಗುತ್ತಿದೆ. ಸದೃಢ ಸಮಾಜ ನಿರ್ಮಾಣಕ್ಕಾಗಿ ನಾವೆಲ್ಲರೂ ಮತದಾನದ ಮಹತ್ವದ ಅರಿತು ಇತರರಿಗೂ ತಿಳಿ ಹೇಳಬೇಕು ಎಂದರು.

ಮತದಾನದ ಕುರಿತ ಜಾಗೃತಿಗಾಗಿ ಕಾಲೇಜಿನಲ್ಲಿ ನಡೆದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಬಹುಮಾನ, ಪ್ರಮಾಣಪತ್ರ ವಿತರಿಸಿದರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಎಸ್.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಸಿ.ಶೈಲೇಶ್ ಕುಮಾರ್, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ.ಬಂಗಾರು, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಶಾಂತರಾಜು, ಮೈ ಭಾರತ್ ಕೇಂದ್ರದ ಸಹನಾ ಇತರರಿದ್ದರು.



ಮತದಾನದ ಪ್ರತಿಜ್ಞಾವಿಧಿಯನ್ನು ಎಸ್ಪಿ ಎಂ.ಮುತ್ತುರಾಜು ಭೋದಿಸಿದರು.

ಬೈಕ್‌ಗೆ ಬಸ್ ಡಿಕ್ಕಿ: ಸವಾರನಿಗೆ ತೀವ್ರ ಗಾಯ

ಬೇಗೂರು, ಜ.30– ಬೈಕ್‌ಗೆ ಕೇರಳ ಸಾರಿಗೆ ಸಂಸ್ಥೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ತೀವ್ರವಾಗಿ ಗಾಯಗೊಂಡಿರುವ ಘಟನೆ ಶುಕ್ರವಾರ ಮಧ್ಯಾಹ್ನ ಗ್ರಾಮದ ಅಂಚೆ ಕಚೇರಿ ಎದುರು ನಡೆದಿದೆ.

ನಂಜನಗೂಡು ತಾಲೂಕಿನ ಉಪ್ಪನಹಳ್ಳಿ ಬಳಿಯ ಕೆಬ್ಬೇಪುರ ಗ್ರಾಮದ ಚಿನ್ನು ಗಾಯಗೊಂಡವರು. ಗುಂಡ್ಲುಪೇಟೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಕೇರಳ ಸಾರಿಗೆ ಸಂಸ್ಥೆ ಬಸ್ ಎದುರಿಗೆ ಬಂದ ಚಿನ್ನು ಅವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕೈ–ಕಾಲು, ತಲೆಗೆ ಪೆಟ್ಟಾಗಿ ತೀವ್ರ ಗಾಯಗೊಂಡ ಚಿನ್ನು ಅವರಿಗೆ ಬೇಗೂರು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಬಸ್ ಹಾಗೂ ಬೈಕ್ ಅನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಗಾಂಧೀಜಿ ಸಂಸ್ಮರಣಾ ದಿನ: ಪುರಸಭೆಯಿಂದ ಸ್ವಚ್ಛತಾ ಕಾರ್ಯ



ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಸಂಸ್ಮರಣಾ ದಿನದ ಅಂಗವಾಗಿ ಪಟ್ಟಣದ ಆಶೀರ್ವಾದ ಬಡಾವಣೆಯ ಉದ್ಯಾನವನದಲ್ಲಿ ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ವಚ್ಛತಾ ಕಾರ್ಯ ಕೈಗೊಂಡರು. ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಎಸ್.ಸರವಣ, ಇಂಜಿನಿಯರ್ ಮಂಜುನಾಥ್ ಸೇರಿದಂತೆ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಯರಗಂಬಳ್ಳಿ ಕರಿಕಲ್ಲು ಗಣಿಗಾರಿಕೆ ಕಾನೂನು ಬದ್ಧ

ಗ್ರಾಮಸ್ಥರಿಗೆ ತೊಂದರೆಯಾಗುತ್ತಿಲ್ಲ ಎಂದು ತಹಸೀಲ್ದಾರ್‌ಗೆ ಮನವಿ

ಯಳಂದೂರು, ಜ.30– ತಾಲೂಕಿನ ಯರಗಂಬಳ್ಳಿಯ ಖಾಸಗಿ ಜಮೀನಿನಲ್ಲಿ ನಡೆಯುತ್ತಿರುವ ಕರಿಕಲ್ಲು ಗಣಿಗಾರಿಕೆ ಕಾನೂನುಬದ್ಧವಾಗಿದ್ದು, ಗಣಿಗಾರಿಕೆಯಿಂದ ನಿವಾಸಿಗಳಿಗೆ ಯಾವುದೇ ತೊಂದರೆಯಾಗುತ್ತಿಲ್ಲ ಎಂದು ಗ್ರಾಮಸ್ಥರು ತಹಸೀಲ್ದಾರ್ ಎಸ್.ಎಲ್.ನಯನ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಎಸ್.ಎಲ್.ನಯನ ಅವರನ್ನು ಭೇಟಿ ಮಾಡಿದ ಗ್ರಾಮಸ್ಥರು, ಯರಗಂಬಳ್ಳಿ ಗ್ರಾಮದ ಸರ್ವೇ ನಂ.711/1, 711/2, 711/3 ರಲ್ಲಿ ನಂಜಶೆಟ್ಟಿ ಎಂಬುವವರು ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಕೆಲವರು ಜಿಲ್ಲಾಧಿಕಾರಿಗೆ ದೂರು ನೀಡಿರುವುದು ಪಿತೂರಿಯಾಗಿದೆ.

ಗ್ರಾಮದ ಕೆಲ ಮುಗ್ಧ ಅಮಾಯಕರನ್ನು ಬಳಸಿಕೊಂಡು ನಂಜಶೆಟ್ಟಿ ಅವರ ವಿರುದ್ಧ ಪಿತೂರಿ ನಡೆಸಲಾಗುತ್ತಿದೆ. ಗಣಿಗಾರಿಕೆ ಕ್ರಮಬದ್ಧವಾಗಿ ನಡೆಯುತ್ತಿದ್ದು, ಗಣಿಗಾರಿಕೆಯಿಂದ ಗ್ರಾಮಸ್ಥರಿಗೆ ಯಾವುದೇ ತೊಂದರೆಯಾಗುತ್ತಿಲ್ಲ. ಆದ್ದರಿಂದ ಕಿಡಿಗೇಡಿಗಳು ನೀಡಿರುವ ದೂರನ್ನು ಪರಿಗಣಿಸಬಾರದು ಎಂದು ಮನವಿ ಸಲ್ಲಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ರಂಗಸ್ವಾಮಿ, ಸೋಮಣ್ಣ, ನಂಜುಂಡ ನಾಯಕ, ರಾಜೇಶ್, ನಿಂಗರಾಜು, ರುದ್ರ, ಮಾದೇವ, ನಾಗರಾಜು, ವೆಂಕಟರಂಗ, ಸಿದ್ದಮಾರಶೆಟ್ಟಿ, ತಗಡೂರುಶೆಟ್ಟಿ, ಚಂದ್ರಶೇಖರ್, ಬಲ್ಲಶೆಟ್ಟಿ, ಸೇರಿದಂತೆ ಇತರರಿದ್ದರು.


ನಿಧನ

ರತ್ನಮ್ಮ



ಚಾಮರಾಜನಗರ, ಜ.30–ತಾಲೂಕಿನ ಅರಕಲವಾಡಿ ಗ್ರಾಮದ ನಿವಾಸಿ ಕೊಟಗೆ ರಾಜಶೇಖರಪ್ಪ ಅವರ ಧರ್ಮ ಪತ್ನಿ ರತ್ನಮ್ಮ(67) ಗುರುವಾರ ನಿಧನರಾದರು. ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವಪ್ಪ



ಆಲೂರು, ಜ.30– ಚಾಮರಾಜನಗರ ತಾಲೂಕಿನ ಅರಕಲವಾಡಿ ಗ್ರಾಮದ ನಿವಾಸಿ ಹಂಡ್ರಕಳ್ಳಿ ಮಹದೇವಪ್ಪ(62) ಗುರುವಾರ ಸಂಜೆ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇತಹಳ್ಳಿಯಲ್ಲಿ ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ, ವಾಲ್ಮೀಕಿ ಪುತ್ಥಳಿ ಅನಾವರಣ

ನಾಯಕ ಸಮುದಾಯ ಸಂಘಟಿತರಾಗಿ ಅಭಿವೃದ್ಧಿ ಹೊಂದಬೇಕು



ತಿ.ನರಸೀಪುರ ತಾಲೂಕು ಕೇತಹಳ್ಳಿ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ ಹಾಗೂ ಶ್ರೀ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಉದ್ಘಾಟಿಸಿದರು.

ತಿ.ನರಸೀಪುರ, ಜ.30– ಯಾವುದೇ ಸಮುದಾಯ ಪ್ರಗತಿ ಕಾಣಬೇಕಾದರೆ ಶಿಕ್ಷಣ ಮುಖ್ಯ. ಎಲ್ಲ ಹಿಂದುಳಿದ ಸಮುದಾಯಗಳು ಪ್ರಗತಿಯತ್ತ ಸಾಗಬೇಕು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪ್ರಗತಿ ಕಾಣುವ ಮೂಲಕ ನಾಯಕ ಸಮುದಾಯ ಸಂಘಟಿತರಾಗಿ ಅಭಿವೃದ್ಧಿ ಹೊಂದುವತ್ತ ಶ್ರಮಿಸಬೇಕಿದೆ ಎಂದು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಹೇಳಿದರು.

ತಾಲೂಕಿನ ಕೇತಹಳ್ಳಿ ಗ್ರಾಮದಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಆದಿಕವಿ ಮಹರ್ಷಿ ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ ಹಾಗೂ ವಾಲ್ಮೀಕಿ ಪುತ್ಥಳಿ ಅನಾವರಣಗೊಳಿಸಿ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಯಕ ಸಮಾಜದಲ್ಲಿ ಸಂಘಟನೆಯ ಕೊರತೆ ಇದೆ. ಗ್ರಾಮಗಳಲ್ಲಿರುವ ಸಮಾಜದ ಯುವಕರು ಸಂಘಟಿತರಾಗುವ ಮೂಲಕ ಸಮಾಜವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಪಣ ತೊಡಬೇಕು. ಹಾಗಾದಾಗ ಮಾತ್ರವೇ ನಾಯಕ ಜನಾಂಗದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು. ಗ್ರಾಮದಲ್ಲಿರುವ ನಾಯಕ ಸಮಾಜದವರು ಇತರೆ ಸಮಾಜದವರ ಜೊತೆ ಅನ್ಯೋನ್ಯತೆ ಪ್ರೀತಿಯಿಂದ ನಡೆದುಕೊಳ್ಳಬೇಕು. ಗ್ರಾಮದಲ್ಲಿ ಗಾಣಿಗ, ಕುಂಬಾರ, ವಿಶ್ವಕರ್ಮ ಜನಾಂಗದವರಿದ್ದಾರೆ. ಅವರನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು, ಆ ಮೂಲಕ ನಾಯಕ ಸಮಾಜ ಮಾದರಿಯಾಗಬೇಕು. ಗ್ರಾಮದಲ್ಲಿ ಒಬ್ಬರಿಗೊಬ್ಬರು ಸ್ಪಂದಿಸುವ ಜೊತೆಗೆ ಇತರರ ಕಷ್ಟ ಸುಖದಲ್ಲಿ ಭಾಗಿಯಾಗಬೇಕು ಎಂದರು.

ವಾಲ್ಮೀಕಿ ಪುತ್ಥಳಿ ಅನಾವರಣ ಹಾಗು ಸಮುದಾಯ ಭವನ ಉದ್ಘಾಟನೆ ಕಾರ್ಯಕ್ರಮಕ್ಕೆ ಹೆಚ್ಚು ಕಡಿಮೆ 5 ಲಕ್ಷ ರೂ.ಗಳ ವೆಚ್ಚ ಮಾಡಿದ್ದೀರಾ. ದುಂದು ವೆಚ್ಚಕ್ಕೆ ಕಡಿವಾಣ ಹಾಕಿ, ಅದೇ ದುಡ್ಡನ್ನು ಗ್ರಾಮದ ಅಭಿವೃದ್ಧಿಗೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡುವ ಮೂಲಕ ಮಾದರಿಯಾಗುವಂತೆ ಅವರು ಸಲಹೆ ನೀಡಿದರು. ರಾಜನಹಳ್ಳಿಯಲ್ಲಿ ಫೆ.7ರಿಂದ ಆರಂಭವಾಗುವ ವಾಲ್ಮೀಕಿ ಜಾತ್ರೆಗೆ ಗ್ರಾಮದಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಅವರು ಇದೇ ವೇಳೆ ಮನವಿ ಮಾಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ ಇತಿಹಾಸ ತೆಗೆದು ನೋಡಿದಾಗ ದೇಶಕ್ಕೆ ಶ್ರೇಷ್ಠ ಗ್ರಂಥಗಳನ್ನು ನೀಡಿರುವುದು ಹಿಂದುಳಿದ ಶೂದ್ರ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ.ಹಿಂದುಳಿದ ಶೂದ್ರ ಸಮುದಾಯಕ್ಕೆ ಸೇರಿದ ಮಹರ್ಷಿ ವಾಲ್ಮೀಕಿ ಪ್ರಪಂಚಕ್ಕೆ ರಾಮಾಯಣ ಕಾವ್ಯ ನೀಡಿದರೆ, ಅಂಬೇಡ್ಕರ್ ಸಂವಿಧಾನ ಗ್ರಂಥ ನೀಡಿದ್ದಾರೆ. ಆದಿ ಕವಿ ವಾಲ್ಮೀಕಿ ಹಿಂದೆ ಕಳ್ಳರಾಗಿದ್ದರು ಎಂಬುದು ತಪ್ಪು ಮಾಹಿತಿ. ಶ್ರೀರಾಮನನ್ನು ಪ್ರಪಂಚಕ್ಕೆ ತಮ್ಮ ರಾಮಾಯಣ ಗ್ರಂಥದ ಮೂಲಕ ಪರಿಚಯ ಮಾಡಿಕೊಟ್ಟ ವಾಲ್ಮೀಕಿ ಯವರಿಗೆ ಸಲ್ಲಬೇಕಾದ ಗೌರವ ಸಲ್ಲುತ್ತಿಲ್ಲ. ಅಯೋಧ್ಯೆಯಲ್ಲಿ ಶ್ರೀರಾಮ ಪ್ರತಿಷ್ಠಾಪನೆ ಮಾಡುವ ಮುನ್ನ ವಾಲ್ಮೀಕಿ ಪ್ರತಿಮೆ ನಿರ್ಮಾಣ ಮಾಡಬೇಕಿತ್ತು. ಆದರೆ ಆ ಕೆಲಸವನ್ನು ಕೇಂದ್ರ ಸರ್ಕಾರ ಮಾಡಲಿಲ್ಲ, ವಾಲ್ಮೀಕಿ ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ ಎಂಬ ಕಾರಣಕ್ಕೆ ಅಲ್ಲಿಯೂ ಅವರ ಪ್ರತಿಮೆ ನಿರ್ಮಾಣ ಮಾಡದೇ ರಾಜಕೀಯ ಮಾಡಲಾಗಿದೆ. ಹಾಗಾಗಿ ಅಯೋಧ್ಯೆಯಲ್ಲಿ ಮೊದಲಿಗೆ ವಾಲ್ಮೀಕಿ ಪುತ್ಥಳಿ ನಿರ್ಮಿಸಿ ಮೊದಲ ಪೂಜೆ ಅವರಿಗೆ ಸಲ್ಲಿಸಬೇಕು ಎಂದು ಅವರು ಆಗ್ರಹಿಸಿದರು.

ಈ ವೇಳೆ ಮೈಸೂರು–ಚಾಮರಾಜನಗರ ನಾಯಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಮೈಸೂರು ಮಹಾನಗರ ಪಾಲಿಕೆ ಮಾಜಿಮಹಾಪೌರ ಶಿವಕುಮಾರ್, ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಅಧ್ಯಕ್ಷ ದೇವರಾಜ್ ಟಿ.ಕಾಟೂರು, ತಾಲೂಕು ನಾಯಕ ಸಂಘದ ಗೌರವಾಧ್ಯಕ್ಷ ಟಿ.ಎಚ್.ಮಂಜುನಾಥ್, ಕಾರ್ಯದರ್ಶಿ ಆಲಗೂಡು ನಾಗರಾಜು, ಕ್ಷೇತ್ರ ಬಿಜೆಪಿ ಮಾಜಿ ಅಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಜಯಸುಂದರ್, ಬಿ.ಶಿವಣ್ಣ, ಆರ್ಟಿಸ್ಟ್ ಕುಮಾರ್, ವಕೀಲ ಪರಮೇಶ್, ಕೇತಹಳ್ಳಿ ರಾಜಣ್ಣ, ಗೋವಿಂದರಾಜು, ಶ್ರೀನಿವಾಸನಾಯಕ, ಡಣಾಯಕನಪುರ ಸಿದ್ದರಾಜು, ಯಜಮಾನರಾದ ಸಿದ್ದನಾಯಕ, ಮಹಾದೇವ ನಾಯಕ, ಸುಂದರ ನಾಯಕ, ಚಿಕ್ಕಸ್ವಾಮಿ, ಮಾದಪ್ಪ ಸೇರಿದಂತೆ ರಾಜ ವೀರ ಮದಕರಿನಾಯಕ ಯುವಕರ ಬಳಗದ ಸದಸ್ಯರು ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು.

ಶ್ರೀ ಸಂತೆಮಾಸ್ತಮ್ಮನವರ ಕೊಂಡ ಮಹೋತ್ಸವ

ಸರಗೂರು: ಸರಗೂರಿನಲ್ಲಿ ವಿಜೃಂಭಣೆಯ ಸಂತೆಮಾಸ್ತಮ್ಮನವರ ಕೊಂಡ ಮಹೋತ್ಸವದಲ್ಲಿ ಕೆಂಡದ ಮೇಲೆ ನಡೆದು ಹರಕೆ ತೀರಿಸಿದರು.



ಸರಗೂರಿನಲ್ಲಿ ವಿಜೃಂಭಣೆಯಾಗಿ ನಡೆದ ಸಂತೆಮಾಸ್ತಮ್ಮನವರ ಕೊಂಡ ನಡೆಸಲಾಯಿತು

ಶ್ರೀ ಸಂತೆಮಾಸ್ತಮ್ಮನವರ ಕೊಂಡ ಮಹೋತ್ಸವವು ಭೀಮನಕೊಲ್ಲಿ ಶ್ರೀಮಹದೇಶ್ವರ ಸ್ವಾಮಿ ಜಾತ್ರೆ ಮುಗಿದ ಮಾರನೆ ದಿನ ಸರಗೂರು ಪಟ್ಟಣದ ಸಂತೆಮಾಳದಲ್ಲಿ ಗುರುವಾರ ರಾತ್ರಿಯಿಂದಲೇ ದೇವಾಲಯವನ್ನು ತಳಿರು ತೋರಣ ಕಟ್ಟಿ ರಂಗೋಲಿ ಬಿಡಿಸಿ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಶುಕ್ರವಾರ ದೇವಾಲಯದಲ್ಲಿ ಬೆಳಗಿನ ಜಾವ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗ ಹೋಮ, ಕುಂಕುಮಾರ್ಚನೆ ಪೂಜಾ ಕೈಂಕರ್ಯಗಳು ಜರುಗಿದವು.

ನಂತರ ಕಪಿಲಾ ನದಿಗೆ ತೆರಳಿ ಪೂರ್ಣ ಕುಂಬ ಕಳಸದೊಂದಿಗೆ ಶಿವಪಾರ್ವತಿ ಬೆಳ್ಳಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ನಡೆಸಿ ಮಂಗಳವಾದ್ಯ, ಸತ್ತಿಗೆ, ವೀರಗಾಸೆ ಜೊತೆಯಲ್ಲಿ ಮೆರವಣಿಗೆ ನಡೆಸಿ ನಂತರ ದೇವಾಯದ ಸುತ್ತ ಪ್ರದಕ್ಷಿಣೆ ಹಾಕಿ ತಾಯಿಗೆ ಬೆಳ್ಳಿ ಮುಖವಾಡ ಧರಿಸಿ ವಿಶೇಷ ಪೂಜೆ ನಡೆಸಲಾಯಿತು,

101 ಕಳಸ ಹೊತ್ತು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ಹರಕೆ ತೀರಿಸಿದರು. ಹರಕೆ ಹೊತ್ತ ಭಕ್ತರು ಈಡುಗಾಯಿ ಸೇವೆ ನಡೆಸಿದರೆ, ನೂರಾರು ಯುವಕರು ಕೆಂಡದ ಮೇಲೆ ನಡೆದು ಭಕ್ತಿ ಸಮರ್ಪಿಸಿದರು.

ಪೂಜಾ ಕೈಂಕರ್ಯ ದೇವಸ್ಥಾನದ ಪ್ರಧಾನ ಅರ್ಚಕ ಮಹದೇವಪ್ಪ, ಸುಬ್ಬಣ್ಣ, ವಿನಯ್‌ಶಾಸ್ತ್ರಿ ವಿರುಪಾಕ್ಷ ನೆರವೇರಿಸಿದರು.

ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ನಮ್ಮನ್ನು ನಾವು ಅರಿತಿರಬೇಕು

ಹೆಚ್.ಡಿ.ಕೋಟೆ: ಉತ್ತಮ ವ್ಯಕ್ತಿತ್ವ ನಿರ್ಮಾಣವಾಗುವುದಕ್ಕೆ ನಮ್ಮನ್ನು ನಾವು ಅರಿತಿರಬೇಕು ಎಂದು ತಿಳಿಸಿದ ವಕೀಲ ಡಾ.ಎಂ.ಎನ್.ರವಿಶಂಕರ್ ಅಂಕಗಳಿಸುವುದು ಎಲ್ಲರಿಗೂ ಸಾಧ್ಯ ಆದರೆ ವಿದ್ಯಾರ್ಥಿಗಳು ವ್ಯಕ್ತಿತ್ವ ನಿರ್ಮಾಣದ ಅಂಕ ಪಡೆಯಬೇಕು ಎಂದರು.



ಡಾ.ಎಂ.ಎನ್.ರವಿಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದಲ್ಲಿರುವ ಎಂ.ಎಂ.ಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ನಮ್ಮಲ್ಲಿ ಪಕ್ವತೆ ಇರಬೇಕು. ನಮ್ಮನ್ನು ಅರಿತುಕೊಂಡು ಸಭ್ಯ ನಾಗರೀಕರಾಗಿ ನಡೆದರೆ ಆಗ ಉತ್ತಮ ವ್ಯಕ್ತಿತ್ವ ನಿರ್ಮಾಣವಾಗುತ್ತದೆ.

ಮೈಸೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಮಾನಂದ ಮಾತನಾಡಿ ವಿದ್ಯಾರ್ಥಿಗಳು ಪದವಿ ಪೂರ್ವ ಹಂತದಲ್ಲಿ ಪುಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸಬೇಕು. ಪುಸ್ತಕಗಳು ವಿದ್ಯಾರ್ಥಿಗಳ ಬದುಕಿನ ಅಂಗವಾಗಬೇಕು. ಇದರಿಂದ ನಾವು ಬೆಳೆದು ಬದುಕನ್ನು ಕಟ್ಟಿಕೊಳ್ಳಬಹುದು. ಪ್ರತಿ ವಿದ್ಯಾರ್ಥಿ ಕೈಯಲ್ಲಿ ಇದು ಸಾಧ್ಯ. ಆದ್ದರಿಂದ ಪಠ್ಯದ ಜೊತೆಗೆ ಸಾಮಾನ್ಯ ಜ್ಞಾನ ಸಂಪಾದಿಸಬೇಕು. ಮುಂದಿನ ವಿದ್ಯಾಭ್ಯಾಸಕ್ಕೆ ಈಗಿನಿಂದಲೇ ತಯಾರಿ ಮಾಡಿಕೊಳ್ಳಬೇಕು. ಎಂದರು.

ಹುಣಸೂರು ಬಾಲಕಿಯರ ಕಾಲೇಜಿನ ಪ್ರಾಂಶುಪಾಲ ರಾಮೇಗೌಡ ಮಾತನಾಡಿ ಸಜ್ಜನ ನಾಗರಿಕನಾಗಬೇಕು, ಜೀವನದಲ್ಲಿ ಗುರಿ ಇರಬೇಕು ಗುರಿಯ ಜೊತೆಗೆ ಸಾಧಿಸುವ ಛಲ ಇರಬೇಕು. ಅದರ ಜೊತೆಗೆ ಪ್ರೇರಣೆ ಇರಬೇಕು ಸಾಧಕರ ಜೀವನವನ್ನು ಆದರ್ಶವಾಗಿ ತೆಗೆದುಕೊಂಡು ನಾವು ಅವರ ಹಾಗೆ ಬೆಳೆಯಬೇಕು. ಎಂದು ಪಣತೊಟ್ಟು ನಿಮ್ಮ ಜೀವನವನ್ನು ಹಸನಾಗಿಸಿಕೊಳ್ಳಿ ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ ಚಂದ್ರೇಗೌಡ, ಹೆಚ್.ಡಿ.ಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹನುಮಂತರಾವ್, ಕಾಲೇಜಿನ ಪ್ರಾಂಶುಪಾಲ ಎಸ್.ಪಿ ಪ್ರಕಾಶ್, ಸಿ.ಡಿ.ಸಿ ಅಧ್ಯಕ್ಷ ಮೋಹನ್, ಉಪನ್ಯಾಸಕರು ಗಳಾದ ವಿರೂಪಾಕ್ಷ, ಜಾನ್, ಸಿದ್ದರಾಜು, ಸಿದ್ದಾರ್ಥ, ಮೋಹನ್, ಮನೋಜ್, ಪ್ರಸನ್ನ, ಹರೀಶ್, ಸೌಜನ್ಯ, ಮಾದೇವಿ, ತನುಜಾ, ಸುಪ್ರಿಯ, ಮುಸ್ಕಾನ್, ಮಹೇಶ್, ಕುಮಾರ್, ಅಮ್ಮ ರಾಮಚಂದ್ರರ, ಶಾಲಾ ಮಕ್ಕಳು ಪೋಷಕರು ಹಾಜರಿದ್ದರು.

ತಿ.ನರಸೀಪುರ ಕೋರ್ಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ

ತಿ.ನರಸೀಪುರ, ಜ.30–ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ನ್ಯಾಯಾಲಯದ ಆವರಣದಲ್ಲಿ ಏರ್ಪಡಿಸಿದ್ದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಹನುಮಂತ ಜಿ.ಎಚ್ ಅವರು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು ದಿನ ಗಾಂಧೀಜಿ ಅವರ ನೆನಪಿನಾರ್ಥವಾಗಿ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆಯನ್ನು ಹಮ್ಮಿಕೊಂಡಿರುವ ಬಗ್ಗೆ ಮಾಹಿತಿಯನ್ನು ನೀಡಿದರು.



ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಸಚಿನ್.ಹೆಚ್.ಆರ್, ಒಂದನೇ ಹೆಚ್ಚುವರಿ ನ್ಯಾಯಾಧೀಶರಾದ ನಿವೇದಿತಾ ಎನ್, ವಕೀಲ ಸಂಘದ ಅಧ್ಯಕ್ಷ ಮಹಾದೇವಸ್ವಾಮಿ, ಪುರಸಭೆಯ ಮುಖ್ಯ ಅಧಿಕಾರಿ ಶ್ರೀನಿವಾಸ್ ಅವರು ವಕೀಲ ಸಂಘದ ಸಹ ಕಾರ್ಯದರ್ಶಿ ಮಹಾದೇವಸ್ವಾಮಿ ಖಜಾಂಚಿ ಮಹಾದೇವಸ್ವಾಮಿ ಹಾಗೂ ನ್ಯಾಯಾಲಯದ ಸಿಬ್ಬಂದಿಗಳು ಪುರಸಭೆ ಸಿಬ್ಬಂದಿಗಳು ರಾಷ್ಟ್ರೀಯ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮನರೇಗಾ ಹೆಸರು ಬದಲಾಯಿಸುವ ಮೂಲಕ ಹಂತ–ಹಂತವಾಗಿ ಸಂವಿಧಾನ ಅಳಿಸಿ ಹಾಕುವ ಕೆಲಸವಾಗುತ್ತಿದೆ

ಕಾಂಗ್ರೆಸ್ ಮುಖಂಡರಿಂದ ಕೇಂದ್ರದ ವಿರುದ್ಧ ವಾಗ್ದಾಳಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಕಾಂಗ್ರೆಸ್ ಪಕ್ಷದ ಮುಖಂಡರು.

ನಂಜನಗೂಡು: ಕೇಂದ್ರ ಸರ್ಕಾರ ಮನರೇಗಾ ಯೋಜನೆಗೆ ವಿಬಿಜಿ ರಾಮ್ ಜಿ ಎಂದು ಮರುನಾಮಕರಣ ಮಾಡಿ ತಿದ್ದುಪಡಿ ತರುವ ಮೂಲಕ ಗ್ರಾಮ ಪಂಚಾಯಿತಿ ಹಕ್ಕುಗಳನ್ನು ಮೊಟಕುಗೊಳಿಸಿ, ಹಂತ ಹಂತವಾಗಿ ಸಂವಿಧಾನವನ್ನು ಅಳಿಸುವ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಹೆಸರಿಗೆ ಮಸಿ ಬಳಿಯುವ ಕೆಲಸವನ್ನು ಮಾಡುತ್ತಿದೆ ಎಂದು ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಎಂ ಶಂಕರ್ ಆಪಾದಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕಿಸಿಕೊಡುವ ಉದ್ದೇಶದಿಂದ ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ಮನರೇಗಾ ಯೋಜನೆಯನ್ನು ಜಾರಿಗೆ ತಂದಿದ್ದರು, ಆದರೆ ಈ ಯೋಜನೆಯನ್ನು ಬದಲಾವಣೆ ಮಾಡುವ ಮೂಲಕ ಗ್ರಾಮೀಣ ಭಾಗದ ಉದ್ಯೋಗದ ಹಕ್ಕನ್ನು ಕಸಿಯಲಾಗುತ್ತಿದೆ, ಅಲ್ಲದೆ ಈ ಹಿಂದಿನ ಕಾಯ್ದೆಯಲ್ಲಿ ಗ್ರಾಮ ಪಂಚಾಯಿತಿಗಳೇ ಗ್ರಾಮಕ್ಕೆ ಬೇಕಾದ ಕಾಮಗಾರಿಗಳನ್ನು ಆಯ್ಕೆ ಮಾಡುವ ಅವಕಾಶವಿತ್ತು, ಕನಿಷ್ಠ ವೇತನ ಹೆಚ್ಚಿಸುವ ಅವಕಾಶವೂ ಇತ್ತು, ಆದರೆ ಬದಲಾದ ಕಾಯ್ದೆಯಲ್ಲಿ ಕೇಂದ್ರ ಸರ್ಕಾರವೇ ಕಾಮಗಾರಿ ಆಯ್ಕೆ ಮಾಡುವ ಹಕ್ಕನ್ನು ಹೊಂದಿದೆ, ಅಲ್ಲದೆ ಸಖಿಯರಿಗೆ ಋತುವಿನಲ್ಲಿ ಕೆಲಸದಿಂದ ವಂಚಿತಗೊಳಿಸಲಾಗುತ್ತಿದೆ ಎಂದರು.

ಮುಖ್ಯವಾಗಿ ಮನರೇಗಾ ಯೋಜನೆಯಲ್ಲಿ ಕೇಂದ್ರ ಸರ್ಕಾರವೇ ಶೇಕಡ 100ರಷ್ಟು ಅನುದಾನವನ್ನು ನೀಡುತ್ತಿತ್ತು. ಬದಲಾದ ಕಾಯ್ದೆಯಲ್ಲಿ ಕೇಂದ್ರ ಸರ್ಕಾರ ಶೇ 60ರಷ್ಟು ರಾಜ್ಯ ಸರ್ಕಾರ ಶೇ 40 ರಷ್ಟು ಅನುದಾನ ಹಂಚಿಕೆಯಾಗುತ್ತಿದೆ. ಆದ್ದರಿಂದ ಮಾಜಿ ಶಾಸಕ ಬಿ ಹರ್ಷವರ್ಧನ್ ಹೇಳಿಕೆಯಂತೆ ಈ ಯೋಜನೆ ಯಾವ ದೃಷ್ಟಿಯಿಂದಲೂ ಸಹ ವಿಕಸಿತ ಭಾರತದ ಯೋಜನೆಯಾಗುವುದಿಲ್ಲ, ಹರ್ಷವರ್ಧನ್ ಅವರ ತಾತ ಬಿ.ಬಸವಲಿಂಗಪ್ಪ ಮತ್ತು ವಿ.ಶ್ರೀನಿವಾಸ ಪ್ರಸಾದ್ ಅವರು ಯಾವುದೇ ಸರ್ಕಾರವಿರಲಿ ತಪ್ಪು ಕಂಡಾಗ ವಿರೋಧಿಸುವ ಮನೋಭಾವವನ್ನು ಹೊಂದಿದ್ದರು. ಅವರ ಹೋರಾಟದ ಮನೋಭಾವವನ್ನು ಮೈಗೂಡಿಸಿಕೊಂಡು ಅವರ ಹಾದಿಯಲ್ಲಿ ಮುನ್ನಡೆಯಬೇಕಿದ್ದ ಮಾಜಿ ಶಾಸಕ ಹರ್ಷವರ್ಧನ್ ರವರು ಒಂದು ಪಕ್ಷದ ಪರ ವಹಿಸಿರುವುದು ವಿಷಾದನೀಯ ಎಂದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠಸ್ವಾಮಿ, ಎಸ್ ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಜಿಪಂ ಮಾಜಿ ಸದಸ್ಯೆ ಲತಾ ಸಿದ್ಧಶೆಟ್ಟಿ, ದೇವಾಲಯ ಅಭಿವೃದ್ಧಿ ಸಮಿತಿ ಸದಸ್ಯ ಗೋವಿಂದರಾಜು, ಮುಖಂಡರಾದ ಕಳಲೆ ರಾಜೇಶ್, ಹಲ್ಲರೆ ಮಹ ದೇವಸ್ವಾಮಿ, ರಘು, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಮಹೇಶ್, ಜಿಲ್ಲಾಧ್ಯಕ್ಷ ಚಂದನ್ ಗೌಡ ಉಪಸ್ಥಿತರಿದ್ದರು.

ಸರ್ವಿಸ್ ರಸ್ತೆ ಮಾಡದ ಹಿನ್ನೆಲೆ: ಹೆದ್ದಾರಿ ರಸ್ತೆ ಕಾಮಗಾರಿಗೆ ತಡೆ

ಹುಣಸೂರು, ಜ.30– ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರ್ವಿಸ್ ರಸ್ತೆ ನಿರ್ಮಿಸುವಂತೆ ಮನವಿ ಮಾಡಿದ್ದರೂ ಇದುವರೆಗೂ ಸರ್ವಿಸ್ ರಸ್ತೆ ಮಾಡದೆ ಇರುವ ಕಾರಣ 275 ರಾಷ್ಟ್ರೀಯ ಹೆದ್ದಾರಿ ಕೆಲಸವನ್ನು ಮುಂದುವರೆಸದಂತೆ ತಡೆ ಒಡ್ಡಲಾಗುತ್ತಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ತಿಳಿಸಿದರು.



ಈಗಾಗಲೇ ಸರ್ವಿಸ್ ರಸ್ತೆ ನಿರ್ಮಿಸುವಂತೆ ಲೋಕಸಭಾ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಲಿಖಿತವಾಗಿ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದು ರೈತ ಮುಖಂಡರ ಆಕ್ರೋಶಕ್ಕೆ ಕಾರಣವಾಗಿದೆ. ಇದೇ ಕಾರಣಕ್ಕಾಗಿ ಕಳೆದ ಎರಡು ದಿನಗಳಿಂದಲೂ ರಸ್ತೆ ಕಾಮಗಾರಿಯನ್ನು ತಡೆಗಟ್ಟಲಾಗುತ್ತಿದ್ದು ನಿನ್ನೆ ಕಿರಿಜಾಜಿ ಗ್ರಾಮದಲ್ಲಿ ರೈತ ಮುಖಂಡರಾದ ಧನಂಜಯ್ ಮತ್ತು ಶಂಕರ್‌ರವರ ನೇತೃತ್ವದಲ್ಲಿ ಕಾಮಗಾರಿಗೆ ತಡೆ ಒಡ್ಡಲಾಗಿದ್ದು, ಇಂದು ಅರಸು ಕಲ್ಲಹಳ್ಳಿ ಗ್ರಾಮದಲ್ಲಿ ರಸ್ತೆ ನಿರ್ಮಾಣ ಕಾರ್ಯಕ್ಕೆ ರೈತ ಮುಖಂಡರಾದ ತಾಲೂಕು ಉಪಾಧ್ಯಕ್ಷರು ವಿಷಕಂಠಪ್ಪ, ನಂಜುಂಡಸ್ವಾಮಿ, ರಘು ಚಿಕ್ಕ ಯಜಮಾನರು, ಷಣ್ಮುಖ ಚಂದ್ರ, ಈರತಪ್ಪ ಪಂಚಾಯಿತಿ ಸದಸ್ಯರು ರವಿ ಹರಿ, ಚಂದ್ರಶೇಖರ್, ನಿಂಗರಾಜ್, ಬಸವರಾಜಪ್ಪ, ಕೆ.ಟಿ.ರಾಜು, ಅಶೋಕ ಇನ್ನಿತರ ಹಲವು ಮುಖಂಡರುಗಳು ಅಡ್ಡಿಪಡಿಸಿದ್ದು ಈ ಪ್ರತಿಭಟನಾ ಧರಣಿಯು ಮುಂದಿನ ದಿನಗಳಲ್ಲಿ ಉಗ್ರರೂಪ ಪಡೆದುಕೊಳ್ಳಲಿದೆ ಎಂದು ಅವರು ತಿಳಿಸಿದರು.

ಸಂಸದ ಸುನಿಲ್ ಬೋಸ್‌ಗೆ ಸ್ವಾಗತ



ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್ ಅವರು ತಿ.ನರಸೀಪುರ ಪುರಸಭೆಗೆ ಭೇಟಿ ನೀಡಿದಾಗ ಅಧಿಕಾರಿಗಳು ಸ್ವಾಗತಿಸಿದರು. ಮುಖ್ಯಾಧಿಕಾರಿ ಸಿ.ಶ್ರೀನಿವಾಸ್, ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಇದ್ದಾರೆ.

ಆದರ್ಶ ವಿದ್ಯಾಲಯಕ್ಕೆ ನೀರು ಶುದ್ಧೀಕರಣ ಯಂತ್ರ ಕೊಡುಗೆ

ಕೆ.ಆರ್.ನಗರ: ಶಾಲಾ ಮಕ್ಕಳು ಶುದ್ಧವಾದ ನೀರು ಕುಡಿಯಲಿ ಎಂಬ ಉದ್ದೇಶದಿಂದ ಕೆನರಾ ಬ್ಯಾಂಕ್ ವತಿಯಿಂದ ನೀರು ಶುದ್ದೀಕರಣ ಯಂತ್ರವನ್ನು ಕೊಡುಗೆಯಾಗಿ ನೀಡುತ್ತಿದ್ದೇವೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪಟ್ಟಣದ ಕೆನರಾ ಬ್ಯಾಂಕ್ ಶಾಖೆಯ ವ್ಯವಸ್ಥಾಪಕ ವೀರೇಶ್ ತಿಳಿಸಿದರು.



ಪಟ್ಟಣದ ಹೊರವಲಯದಲ್ಲಿರುವ ಆದರ್ಶ ವಿದ್ಯಾಲಯಕ್ಕೆ ಪಟ್ಟಣದಲ್ಲಿರುವ ಕೆನರಾ ಬ್ಯಾಂಕ್ ಶಾಖೆ ವತಿಯಿಂದ ಶುದ್ಧೀಕರಣ ಕುಡಿಯುವ ನೀರಿನ ಯಂತ್ರವನ್ನು ಕೊಡುಗೆಯಾಗಿ ವಿತರಿಸಿ ಮಾತನಾಡಿದರು.

ಆಂಜನೇಯ ಬ್ಲಾಕ್‌ನಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ ಕಳೆದ ಸಾಲಿನಲ್ಲಿ ಶುದ್ದೀಕರಣ ಕುಡಿಯುವ ನೀರಿನ ಯಂತ್ರವನ್ನು ಕೊಡುಗೆಯಾಗಿ ನೀಡಲಾಗಿದೆ ಎಂದು ತಿಳಿಸಿದರು.

ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕ ಕೆ.ಎನ್.ಪ್ರಸನ್ನ ಕುಮಾರ್, ಸಹಾಯಕ ಕಾರ್ಯದರ್ಶಿ ಪ್ರಕಾಶ್, ಬಿಇಓ ಆರ್ ಕೃಷ್ಣಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪಿ.ಸ್ವಾಮಿಗೌಡ, ಆದರ್ಶ ವಿದ್ಯಾಲಯ ಮುಖ್ಯ ಶಿಕ್ಷಕಿ ರುಕ್ಕಿಣಿ ಇದ್ದರು.

ಫೆ.8, ಕೆ.ಆರ್.ನಗರಕ್ಕೆ ನಿಖಿಲ್ ಕುಮಾರಸ್ವಾಮಿ

ಇಂದು ಕೆ.ಆರ್.ನಗರದಲ್ಲಿ ಪೂರ್ವಭಾವಿ ಸಭೆ

ಕೆ.ಆರ್.ನಗರ: ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಲು ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕೆ.ಆರ್. ನಗರ ಪಟ್ಟಣಕ್ಕೆ ಫೆ.8ರಂದು ಭಾನುವಾರ ಆಗಮಿಸಲಿದ್ದಾರೆ.



ಕ್ಷೇತ್ರದ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ನೇತೃತ್ವದಲ್ಲಿ ಸದಸ್ಯತ್ವ ಅಭಿಯಾನ ನಡೆಯಲಿದೆ ಎಂದು ತಾ.ಜಾದಳ ವಕ್ತಾರ ಕೆಎಲ್.ರಮೇಶ್ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ 11 ಗಂಟೆಗೆ ಬಸವೇಶ್ವರ ಬ್ಲಾಕ್‌ನಲ್ಲಿರುವ ಪಕ್ಷದ ಕಚೇರಿಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸರ್ಕಾರಿ ಶಾಲೆಗೆ ಕುಡಿಯುವ ನೀರಿನ ಘಟಕ ಕೊಡುಗೆ



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಗೆ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯ ಮಾಡಿಸಿಕೊಟ್ಟ ಡೆಕ್ಕನ್ ಕಂಪನಿ ಮ್ಯಾನೇಜರ್ ಅಫ್ರೋಜ್ ಪಾಷಾ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕ ಮಹದೇವಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಮತ್ತಿತರರು ಹಾಜರಿದ್ದರು.

ಹಕ್ಕು ಪತ್ರ ಕೊಟ್ಟು 22 ವರ್ಷವಾದರೂ ಹಂಚಿಕೆಯಾಗದ ನಿವೇಶನ

ಹುಣಸೂರು ನಗರಸಭೆ ವಿರುದ್ಧ ಫಲಾನುಭವಿಗಳ ಪ್ರತಿಭಟನೆ

ಹುಣಸೂರು, ಜ.30– ನಿವೇಶನ ರಹಿತ ಫಲಾನುಭವಿಗಳನ್ನು ಗುರುತಿಸಿ 22 ವರ್ಷಗಳ ಹಿಂದೆ ಹಕ್ಕು ಪತ್ರ ನೀಡಿದ್ದು, ಇದುವರೆಗೂ ಸ್ಥಳ ಗುರುತಿಸಿ ನಿವೇಶನ ನೀಡದಿರುವ ನಗರಸಭೆ ಆಡಳಿತದ ವಿರುದ್ಧ ರೊಚ್ಚಿಗೆದ್ದ ಫಲಾನುಭವಿಗಳು ಇಂದು ನಗರಸಭೆ ಮುಂದೆ ತಾಲೂಕು ನಾಗರೀಕ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ನಾಗರೀಕ ಹಿತರಕ್ಷಣ ಸಮಿತಿಯ ಅಧ್ಯಕ್ಷ ಸ್ವಾಮಿಗೌಡ ಮಾತನಾಡಿ, ಹುಣಸೂರು ಪಟ್ಟಣದಲ್ಲಿ ನಿವೇಶನ ರಹಿತ ದಲಿತರು, ಹಿಂದುಳಿದ ಹಾಗೂ ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿ ವತಿಯಿಂದ 1991–92ನೇ ಸಾಲಿನಲ್ಲಿ ಹುಣಸೂರು ಪಟ್ಟಣದ ಮಂಜುನಾಥ ಬಡಾವಣೆ, ವಿ.ಪಿ. ಬೋರೆಯಲ್ಲಿ ಖಾಲಿ ನಿವೇಶನವನ್ನು ಹಂಚಿಕೆ ಮಾಡಲಾಗಿತ್ತು, ಇದಾದ ನಂತರ 2002–03ನೇ ಸಾಲಿನಲ್ಲಿ ಅಂದಿನ ಶಾಸಕರಾದ ದಿವಂಗತ ವಿ.ಪಾಪಣ್ಣರವರು ನಿವೇಶನ ರಹಿತ ಹಿಂದುಳಿದ, ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿಯಿಂದ ಅರ್ಹ 870 ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ತಹಸೀಲ್ದಾರ್ ಮುಖಾಂತರ ಹಕ್ಕು ಪತ್ರಗಳನ್ನು ವಿತರಣೆ ಮಾಡಲಾಗಿತ್ತು.

22 ವರ್ಷಗಳು ಕಳೆದರೂ ಹಿಂದಿನ ಪುರಸಭೆಯಾಗಲೀ ಪ್ರಸ್ತುತ ನಗರಸಭೆಯಾಗಲೀ ಹಕ್ಕುಪತ್ರ ಪಡೆದಿರುವ ಫಲಾನುಭವಿಗಳಿಗೆ ಖಾತೆ ಮಾಡಿ ಸ್ಥಳ ಗುರುತಿಸಿ ನಿವೇಶನಗಳನ್ನು ನೀಡುವಲ್ಲಿ ಅಧಿಕಾರಿಗಳು ಮುಂದಾಗದೇ ಬೇಜವಾಬ್ದಾರಿತನದಿಂದ ನಡೆದುಕೊಂಡಿದ್ದಾರೆ ಎಂದು ಆರೋಪಿಸಿದರು. ಪ್ರತಿಭಟನಾ ಸ್ಥಳಕ್ಕೆ ನಗರ ಸಭಾ ಆಯುಕ್ತೆ ಮಾನಸರವರು ಬಂದು, ಪ್ರತಿಭಟನಾಕಾರರ ಮನವಿಯನ್ನು ಸ್ವೀಕರಿಸಿ ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.



ನಗರಸಭೆ ಮುಂದೆ ಪ್ರತಿಭಟನೆ ನಡೆಸುತ್ತಿರುವ ಫಲಾನುಭವಿಗಳು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಇಂಟೆಕ್ ರಾಜು, ಕಾರ್ಯದರ್ಶಿ ಹೆಚ್.ಕೆ. ಸುರೇಶ್, ಸಹ ಕಾರ್ಯದರ್ಶಿ ಸನಾವುಲ್ಲಾ, ಖಜಾಂಚಿ ವೆಂಕಟೇಶ್, ಸಂಚಾಲಕರಾದ ಶ್ರೀನಿವಾಸ್ ಕೆ.ಎಸ್, ಸೋಮಶೇಖರ್, ಸತೀಶ್, ನಿರ್ದೇಶಕರುಗಳಾದ ಹೆಚ್.ಆರ್.ಚಿದಾನಂದ, ಹೆಚ್.ವೈ. ಕೃಷ್ಣ, ಸಂಪತ್ ಕುಮಾರ್, ಜೇಕಬ್, ಯೋಗಾನಂದ, ಕುಮಾರ್, ವಿಶಕಂಠಮೂರ್ತಿ, ಮಹದೇವ್.ಸಿ, ಸುರೇಶ, ಅಣ್ಣಯ್ಯ, ಜಗದೀಶ್, ಪರಶುರಾಮ್, ಎಂ.ಶಿವಕುಮಾರ್, ಗೋಪಿ, ರಮೇಶ್ ನಾಯ್ಕ, ಮಹೇಶ್.ಡಿ, ಸುರೇಶ್, ಸಲೀಂ, ಮಾಯಣ್ಣ, ಸಂತೋಷ್, ಲಕ್ಷ್ಮಣ್, ಶಿವಣ್ಣೇಗೌಡ, ಶೇಷಾದ್ರಿ, ರೈತ ಸಂಘದ ಅಧ್ಯಕ್ಷ ಶಿವಶೇಖರ್, ಹೆಚ್.ಎಸ್. ವರದರಾಜು, ಮುಸ್ತಫಾ, ಡೇವಿಡ್, ಗಣೇಶ್ ಹಾಗೂ ಇನ್ನೂ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೂಗೂರು: ಮೈಸೂರಿನ ವಾಸನ್ ಐ ಕೇರ್ ಹಾಗೂ ಉಷಾ ವಿಷನ್ ಕೇರ್ ಇವರ ಸಂಯುಕ್ತ ಆಶ್ರಯದಲ್ಲಿ ಮೂಗೂರಿನ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಶನಿವಾರ (ಜ.31) ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ಕಣ್ಣಿಗೆ ಸಂಬಂಧಿಸಿದ ವಿವಿಧ ಬಗೆಯ ಪರೀಕ್ಷೆಯನ್ನು ನಡೆಸಲಾಗುತ್ತದೆ. ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಸದಸ್ಯರನ್ನೊಳಗೊಂಡಂತೆ ಇತರೆ ಸಾರ್ವಜನಿಕರು ಕಣ್ಣಿನ ದೃಷ್ಟಿ ದೋಷ ಸಮಸ್ಯೆವುಳ್ಳವರು ಈ ಶಿಬಿರ ಪ್ರಯೋಜನ ಪಡೆದುಕೊಳ್ಳಬಹುದು.